
TIGHT BINDING BOOK

UNIVERSAL
LIBRARY
OU_200315
UNIVERSAL
LIBRARY



ತೊದಲ್ನುಡಿ ಗ್ರಂಥಮಾಲೆ—ಸುಡಿ ೧೨

# ನಂದಾದೀಪ

(ಹನ್ನೊಂದು ಕತೆಗಳ ಸಂಗ್ರಹ)

ಕೊರಡ್ಕಲ್ ಶ್ರೀನಿವಾಸ ರಾವ್

ಕಿರಿಯರ ಪ್ರಪಂಚ, ಉಡುಪಿ

೧೯೩೮

ಸಂಪಾದಕ

ಕೆ. ಹೊನ್ನಯ್ಯ ಶೆಟ್ಟಿ

ಹಕ್ಕುಗಳು ಕಾಯ್ದಿಡಲ್ಪಟ್ಟಿವೆ

ಬೆಲೆ ಎಂಟು ಆಣೆ

# ಪ್ರಸ್ತಾವನೆ

ವಾಗ್ದೇವಿಯ ಪೂಜೆಗೆ ನೆರವಾಗಿ ಬನ್ನಿರೆಂದು ಅಲ್ಲಲ್ಲಿಂದ ಕರೆ ಬಂದಾಗ ಹೆಚ್ಚಿನ ಸಹಾಯ್ಯವೇನಾಗದಿದ್ದರೂ ನನ್ನದೊಂದೊಂದು ದೀಪವನ್ನು ಅಲ್ಲಲ್ಲಿ ಉರಿಸುತ್ತಿದ್ದೆ. ಅವು ಭಜಕರಲ್ಲನೇಕರ ದೃಷ್ಟಿಯನ್ನು ವಿಶೇಷವಾಗಿ ಆಕರ್ಷಿಸಿದ್ದುವೆಂದು ಅವರಾಗಿಯೇ ಸಂತೃಪ್ತಿಯ ನಗುವಿಂದ ನುಡಿದುದನ್ನು ಕೇಳಿದ್ದೆ. ಮಾತ್ರವಲ್ಲ, ಅಂತಹ ತಾತ್ಕಾಲಿಕ ಪೂಜೆಗಳಾದ ಮೇಲೆ ಅವು ಮೂಲೆಪಾಲಾಗುವುದನ್ನು ನೋಡಿ ಅವನ್ನು ಯಾವುದಾದರೊಂದು ಶಾರದೆಯ ಗುಡಿಯ ಎದುರು ತೂಗು ದೀಪಾವಳಿಯಾಗಿರಿಸಿದರೆ ಅದು ನಂದಾದೀಪವಾಗಿ ಉಳಿದೀತೆಂದು ಹಲವರು ತಿರುತಿರುಗಿ ಸೂಚಿಸುತ್ತಿದ್ದರು. ಹಾಗಾಗುವುದಿದ್ದರೆ ನನ್ನ ಅಸಡ್ಡೆಯಿಂದದು ಕೆಡಬಾರದೆಂದು ನನಗೂ ತೋರಿತು. ಆದುದರಿಂದ ಪರೀಕ್ಷಾರ್ಥವಾಗಿ ಆ ದೀಪಗಳಲ್ಲಿ ಕೆಲವನ್ನು ಆಯ್ದು ತುಸು ತಿಕ್ಕಿ ಪೋಣಿಸಿ ಈ ದೀಪಮಾಲೆಯನ್ನು ಸಿದ್ಧಗೊಳಿಸಿದೆ. "ತೊದಲ್ನುಡಿ ಗ್ರಂಥಮಾಲಾ"ಂಕಿತ ಶಾರದಾ ಮಂದಿರದಲ್ಲಿದನ್ನು ಬೆಳಗಿಸಲು ಸ್ವೀಕರಿಸಿದ ಅದರ ವ್ಯವಸ್ಥಾಪಕರಿಗೂ ಮೊಟ್ಟಮೊದಲು ಇವರ ದೀಪಗಳನ್ನು ಬೇರೆಬೇರೆಯಾಗಿ ತಮ್ಮ ತಮ್ಮ ಪೂಜಾಮಂಟಪದಲ್ಲಿಟ್ಟು ಬೆಳಗಿಸಿಕೊಟ್ಟ ವಾಗ್ದೇವಿಯ ಉಪಾಸಕರುಗಳೆಲ್ಲರಿಗೂ ನಾನು ಚಿರಋಣಿಯಾಗಿರುವೆನು ಇನ್ನು ಶಾರದೆಯ ಭಜಕರು ತಾವು ಅರ್ಪಿಸುವ ಹರಕೆಯ ಎಣ್ಣೆ ತುಪ್ಪಗಳಲ್ಲಿ ಒಂದಷ್ಟಿಷ್ಟನ್ನು ಈ ದೀಪ ಮಾಲೆಗೂ ಎರೆಯುತ್ತಲಿದ್ದು ಇದನ್ನು ‘ನಂದಾದೀಪ’ವನ್ನಾಗಿಸಿದರೆ ನಾನು ಉಪಕೃತನು; ಕೃತಾರ್ಥನು. ಅಂತಾಗುವಂತೆ ದಯೆಗೈಯಿರೆಂದು ಅವರಲ್ಲೆಲ್ಲ ನನ್ನ ಸವಿನಯ ಪ್ರಾರ್ಥನೆ.

ಕಾವ್ಯಕಲಾ ಮಂದಿರ,
ಉಡುಪಿ.
2—7—1938.

**ಕೊರಡ್ಕಲ್ ಶ್ರೀನಿವಾಸ ರಾವ್.**

# ಪ್ರಕಾಶಕರ ನುಡಿ

೧೨-೭-೫೮

ನಮ್ಮ ಗ್ರಂಥಮಾಲೆಯ ಹನ್ನೆರಡನೆ ನುಡಿಯು ಈ ‘ನಂದಾದೀಪ’. ಇದನ್ನು ಬದ್ಧಗೊಳಿಸಿದವರು ನಮ್ಮ ತರುಣ ಮಿತ್ರರಾದ ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು. ಶ್ರೀ ರಾಯರ ಕುಸುಮವೊಂದನ್ನು ನಮ್ಮ ಮಾಲೆಯಲ್ಲಿ ಪೋಣಿಸಬೇಕೆಂದು ಎಂದಿನಿಂದಲೂ ಇದ್ದ ಆಶೆಯ ಫಲವು ಇಂದು ‘ನಂದಾದೀಪ’ವಾಗಿ ಮುಂದೆ ಬಂದಿದೆ. ರಾಯರು ಹೆಸರಾದ ಸಾಹಿತಿಗಳು. ಸಣ್ಣ ಕತೆಗಳನ್ನು ಬರೆಯುವುದರಲ್ಲಂತೂ ಅವರದು ತಿದ್ದಿದ ಕೈ. ಇಂಥವರ ಪರಿಚಯವನ್ನಿಲ್ಲಿ ಮಾಡಿಕೊಡುವುದೇ ಅನಗತ್ಯ. ಅವರ ಕತೆಗಳು ಸಂಗ್ರಹವಾಗಿ ವಾಚಕರ ಕೈ ಸೇರುವುದು ಇದುವೇ ಮೊದಲಬಾರಿಯಾದರೂ ಈ ವರೆಗೆ ಪ್ರಕಟವಾಗಿರುವ ಇತರ ಹಲವು ಕಥಾಸಂಗ್ರಹಗಳ ಮಟ್ಟಕ್ಕಿಂತ ಈ ಸಂಗ್ರಹವು ಮೇಲಿನ ಮಟ್ಟದಲ್ಲಿದೆ ಎಂಬ ಅಭಿಮಾನವು ನಮಗಿದೆ. ಈ ಅಭಿಮಾನವೂ ‘ನಂದಾದೀಪ’ದ ಬೆಳಕಿಗೆ ಮೂಲವಾಯಿತು. ಇದನ್ನು ನಮ್ಮ ‘ತೊದಲ್ನುಡಿ’ಯ ಒಂದು ನುಡಿಯಾಗಿ ಒಡಗೂಡಿಸಿಕೊಳ್ಳಲು ಸದಯಾಂತಃಕರಣಪೂರ್ವಕವಾಗಿ ಕೊಟ್ಟದ್ದಕ್ಕಾಗಿ ನಾವು ಶ್ರೀ. ರಾಯರಿಗೆ ಉಪಕೃತರಿದ್ದೇವೆ. ಅಂತೆಯೇ ಇದನ್ನು ತಮ್ಮ ‘ಮಣಿಪಾಲ ಪವರ್ ಪ್ರೆಸ್ಸಿ’ನಲ್ಲಿ ಅಚ್ಚುಕಟ್ಟಾಗಿ ಸಕಾಲದಲ್ಲಿ ಅಚ್ಚುಹಾಕಿಸಿಕೊಟ್ಟ ಶ್ರೀ ಯನ್. ಯು. ಪಣಿಯಾಡಿಯವರ ಉಪಕಾರವೂ ಸ್ಮರಣೀಯವೆ. ನಮ್ಮ ಸಹಾಯಕ ವರ್ಗಕ್ಕಂತೂ ನಾವು ಸದಾ ಆಭಾರಿಗಳು.

ಕನ್ನಡಿಗರು ಎಂದಿನಂತೆ ಈ ‘ನಂದಾದೀಪ’ಕ್ಕೂ ಪ್ರೋತ್ಸಾಹವೀಯಲು ಹಿಂತೆಗೆಯಲಾರರೆಂದು ನಂಬುತ್ತೇವೆ.



ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು
(ಗ್ರಂಥಕರ್ತರು)

# ಮಾತೃದೇವೋ ಭವ

# ಅರ್ಪಣ

ಹರೆಯದಲ್ಲಿ ಪತಿಯಳಿದ ಅಳಲನ್ನು
ಏಕಮಾತ್ರ ಪುತ್ರನಾದ ನನ್ನ ಲಾಲನೆ ಪಾಲನೆಗಳಲ್ಲಿ ಸಹಿಸಿಕೊಂಡು
ತಾಯ್ತನದ ತ್ಯಾಗವಿಶೇಷದಿಂದ ನನ್ನನ್ನು ಈ ಮಟ್ಟಕ್ಕೆ ತಂದಿಟ್ಟಿರುವ
ನನ್ನ ಪೂಜ್ಯ ಮಾತೃಶ್ರೀ ಸುಬ್ಬಮ್ಮನವರ ಕಡೆಗೆ
ನನಗಿರುವ ಅಪಾರ ಋಣ ಸೂಚಕವಾಗಿ
ಅವರ ಪಾದಗಳಲ್ಲಿದು ಸಮರ್ಪಿತ.

ಶ್ರೀನಿವಾಸ

# ನಂದಾದೀಪ

# ಪರಿವಿಡಿ


೧ ನಂದಾದೀಪ . . . . . . ೧

೨ ಧನಿಯರ ಸತ್ಯನಾರಾಯಣ . . . ೬

೩ ಆಪದ್ಬಾಂಧವ . . . . . . ೧೩

೪ ಅಜ್ಜಯ್ಯನ ಮದುವೆ . . . . . ೧೭

೫ ದೇವಸ್ಥಾನ ಪ್ರವೇಶ . . . . . ೨೪

೬ ದೊಡ್ಡವರ ವಜ್ರ . . . . . ೨೯

೭ ಆಪತ್ತಿನಲ್ಲಿಯೂ ಸಂಪತ್ತು . . . . ೪೭

೮ ಆನಂದನ ಬಿ. ಎ. ಡಿಗ್ರಿ . . . . ೫೩

೯ ಮನೆಯಲ್ಲಿ ಭೂತಸಂಚಾರ . . . . ೫೯

೧೦ ಪಳ್ಳಟ ನಾಯ್ತು . . . . ೬೮

೧೧ ನಿಂಬಾಫಲ ಮಹಾತ್ಮ್ಯೆ . . . . . ೭೭

# ನಂದಾದೀಪ

ಓಣಿಯು ತಿರುಗುವೆಡೆ ಕೆರೆಯೇರಿಯ ಮೇಲಿರುವ ಆ ದೀಪ ಸ್ತಂಭಕ್ಕೆ 'ನಂದಾದೀಪ' ಎನ್ನುವ ಹೆಸರು ವಿಲಕ್ಷಣವಾಗಿ ಕಾಣುವುದಿಲ್ಲವೆ? ಆದರೆ ಹಲವು ವೇಳೆ ವಿಲಕ್ಷಣವಾದ ಹೆಸರೇ ಲಕ್ಷಣವಾಗಿದೆ. ಲಕ್ಷಣವಾಗಿ ತೋರುವ ಹೆಸರೇ ಪರ್ಯಾಲೋಚಿಸಿದರೆ ವಿಲಕ್ಷಣ. ಇದಕ್ಕೊಂದು ನಿದರ್ಶನವಾಗಿ ನಿಂತಿದೆ ರಾಮಯ್ಯನವರ ಈ 'ನಂದಾದೀಪ'.

ರಾಮಯ್ಯನವರು ನಿಷ್ಠಾವಂತ ಶ್ರೀಮಂತರು. ಅವರದು ದೊಡ್ಡ ಮನೆ. ಅದಕ್ಕೆ ತಕ್ಕಂತೆ ದೊಡ್ಡ ಚಾವಡಿ. ಅದರ ಬಲ ಮಗ್ಗುಲಲ್ಲಿ ದೇವರ ಕೋಣೆ. ಚಾವಡಿಯಿಂದ ಕೋಣೆಯೊಳಗೆ ನೋಡಲಾಗುವಂತೆ ನಡುಗೋಡೆಯಲ್ಲಿ ಚಿತ್ರ ಕೊರೆದಿರುವ ರಂಧ್ರಮಯ ಗವಾಕ್ಷ. ಅದರಿಂದ ನೋಡಿದರೆ ಒಳಗೆ ದೇವರ ಕೋಣೆಯಲ್ಲಿ ಕಾಣುವುದು ಅಲಂಕಾರವಾಗಿ ಬೆಳ್ಳಿ ಮಡಾಯಿಸಿದ ದೇವರ ಪೀಠ; ಪೀಠದ ಮೇಲೆ ದೇವರ ಮೂರ್ತಿ; ಉಭಯ ಪಾರ್ಶ್ವಗಳಲ್ಲಿ ಸದಾ ಮಿನುಗುತ್ತಿರುವ ತೂಗು-ದೀಪಾವಳಿ. ದೇವರಿದಿರಲ್ಲಿ ನಂದದ ನಂದಾದೀಪವನ್ನು ತಪ್ಪದೆ ತುಪ್ಪದಿಂದುರಿಸಬೇಕೆಂಬುದು ರಾಮಯ್ಯನವರ ದೀಕ್ಷೆ. ಗಾಳಿ ಬೀಸಿ ದೀಪವು ನಂದದಂತೆ ರಕ್ಷಣಾರ್ಥವಾಗಿ ರಂಧ್ರಮಯ ಗವಾಕ್ಷ. ಇನ್ನಿತರ ಕಾರಣಗಳಿಂದ ದೀಪವೆಲ್ಲಾದರೂ ನಂದಿಹೋದರೂ ಒಂದಿಲ್ಲದಿದ್ದರಿನ್ನೊಂದು ಉಳಿದೇ ಉಳಿಯುವಂತೆ ಉಭಯ ಪಾರ್ಶ್ವಗಳಲ್ಲಿ ತೂಗು-ದೀಪಾವಳಿ. ಬತ್ತಿಯು ಕರಿಗಟ್ಟಿಹೋಗಿ ದೀಪವು ಆರದಂತೆ ಒಳ್ಳೆಯ ಹತ್ತಿಯನ್ನು ತಂದು ತಾನೇ ಹಿಂಜಿ ಕಸಕಡ್ಡಿಗಳನ್ನು ತೆಗೆದು ಹದವಾಗಿ ತಿರುಪಿ ಬತ್ತಿಯನ್ನು ಮಾಡುವ ಕೆಲಸವು ರಾಮಯ್ಯನವರದೇ. ಇದೂ ಅವರ ನಿತ್ಯಾನುಷ್ಠಾನದಲ್ಲೊಂದು ಭಾಗ. ಅವರು ದಿನಾಲೂ ದೇವರ ಪೂಜೆಯನ್ನು ಮುಗಿಸಿ ಕೋಣೆಯಿಂದ ಹೊರಗೆ ಬರುವ ಮೊದಲೊಮ್ಮೆ ಎಲ್ಲ ದೀಪಗಳಿಗೂ ತುಪ್ಪ ಸುರಿದು ಬತ್ತಿಗಳನ್ನು ಮುಂದೂಡಿ ಸೊಡರುಗಳನ್ನು ಸರಿಗೊಳಿಸುತ್ತಿದ್ದರು. ಲೌಕಿಕ ಕಾರ್ಯದಿಂದಾಗಿ ಹೊರಗೆಲ್ಲಾದರೂ ಹೋಗಿ ಹಿಂತಿರುಗಿ ಬಂದೊಡನೆ ಮೊದಲಾಗಿ

ಆ ಕಿಂಡಿಯ ಬಳಿಗೆ ಹೋಗಿ ನಂದಾದೀಪವು ನಂದದೆ ಇದೆಯೋ ಎಂದು ನೋಡಬೇಕು ಅವರಿಗೆ. ಮನೆಯಲ್ಲಿದ್ದರೆಂತೂ ಆಗಾಗ ಗವಾಕ್ಷದ ಬಳಿಗೆ ಹೋಗಿ ಒಳಗೆ ಇಣಿಕಿನೋಡದೆ ಇರುತ್ತಿದ್ದಿಲ್ಲ. ಅಲ್ಲದೆ ಮನೆಯವರಿಗೆಲ್ಲ ರಿಗೂ ಈ ವಿಷಯದಲ್ಲಿ ಎಚ್ಚರಿಕೆಯಿಂದಿರುವಂತೆ ಅವರ ಕಟ್ಟಾಜ್ಞೆಯಿತ್ತು. ಆದುದರಿಂದ ರಾಮಯ್ಯನವರಲ್ಲಿ ನಂದಾದೀಪವು ನಂದದೆ ಹಲವು ವರುಷ ಗಳಿಂದಲೂ ಉರಿಯುತ್ತಲಿತ್ತು. ಸಾಯಂಕಾಲ ದೇವರ ಮುಂದೆ ದೀಪ ಹಚ್ಚುವಾಗ ಎಷ್ಟೋ ಮನೆಗಳಲ್ಲಿ ರಾಮಯ್ಯನವರ ಮನೆಯ ನಂದಾ ದೀಪದ ಮಾತು ಬಾರದೆ ಇರುತ್ತಿದ್ದಿಲ್ಲ. ಮನಮನೆಯ ಮುದುಕಿಯರು ದೇವರ ಕೋಣೆಯ ಹೊಸ್ತಿಲ ಬಳಿ ಗೋಡೆಗೆ ಒರಗಿ ಕುಳಿತು ಆಕಳಿ ಸುತ್ತ ರಾಮನಾಮಸ್ಮರಣೆ ಮಾಡುವಾಗ ರಾಮಯ್ಯನವರ ಸಿರಿಸಂಪತ್ತಿಗೆಲ್ಲ ಅವರ ನಂದಾದೀಪವೇ ಕಾರಣವೆಂದು ಅಧಿಕಾರವಾಣಿಯಿಂದ ಮೊಮ್ಮಕ್ಕ ಳಿಗೆ ಹೇಳಿಬಿಡುತ್ತಿದ್ದರು. ಹೀಗಾಗಿ ಆ ಊರ ದನಮೇಯಿಸುವ ಹುಡು ಗರೂ ಗೋಳಿಯ ಮರದಡಿ ಕುಳಿತು ಹುರಿದ ಹುಣಸೆಯ ಬೀಜವನ್ನು ಜಗಿಯುತ್ತ ಊರ ಹರಟೆ ಹೊಡೆಯುವಾಗ 'ಅಯ್ಯನೋರ ನಂದಾದೀಪ ದಿಂದ ಸಿರಿಯೋ ಸಿರಿಯಿಂದ ನಂದಾದೀಪವೋ?' ಎಂಬ ವಾದವೆಬ್ಬಿಸು ವುದಿತ್ತು.

ನವರಾತ್ರಿಯು ಬಂತೆಂದರೆ ರಾಮಯ್ಯನವರಲ್ಲಿ ರಾತ್ರಿ ಪೂಜೆಯು ಬಹಳ ವಿಜೃಂಭಣೆಯಿಂದ ನಡೆಯುತ್ತಲಿತ್ತು. ನೋಡುವುದಕ್ಕಾಗಿ ಊಟಕ್ಕಾಗಿ ಎಂದು ಊರೆಲ್ಲ ಬಂದು ಕೂಡುತ್ತಿತ್ತಲ್ಲಿ. ರಾಮಯ್ಯನವರು ನಂದಾದೀಪಗಳ ಬತ್ತಿಗಳನ್ನೆಲ್ಲ ಮುಂದೂಡಿ ಸರಿಗೊಳಿಸಿ ಇನ್ನೂ ಹಲವು ಬೆಳಕುಗಳನ್ನು ಹೊತ್ತಿಸಿ ಮಂಗಳಾರತಿಯನ್ನೆತ್ತುವಾಗ ಆ ಕೋಣೆಯಲ್ಲಿ ದಿವ್ಯ ಸನ್ನಿಧಿಯುಂಟಾಗಿದೆ ಎಂದು ತಿಳಿದುಕೊಳ್ಳುತ್ತಿದ್ದರು. ಅದರ ಆರಾ ಧನೆಯಲ್ಲವರು ತಲ್ಲೀನರಾಗುತ್ತಿದ್ದರು. ಅವರು ಪೀಠದ ಮೇಲೆ ನೆಟ್ಟ ದೃಷ್ಟಿಯು ಅಲ್ಲ ಆವಾಹಿತವಾಗಿದ್ದ ದೇವತೆಯನ್ನು ತನ್ನ ಹೃದಯಪೀಠದಲ್ಲಿ ಉಪಸ್ಥಿತವಾಗುವಂತೆ ಆಕರ್ಷಿಸುವಂತಿತ್ತು. ಅದೊಂದು ಆವೇಶಪರವಾದ ನೋಟ.

ಮಂಗಳಾರತಿಯು ಮುಗಿದಿತ್ತು. ಅದನ್ನು ನೋಡುತ್ತಿದ್ದ ಜನರು

ಪುನಃ ಗುಜುಗುಜು ಮಾತಾಡಹತ್ತಿದ್ದರು. ರಾಮಯ್ಯನವರು ಮೂರ್ತಿಯ ಕಡೆಗೆ ಏಕಾಗ್ರತೆಗೊಂಡಿದ್ದ ತನ್ನ ಮನಸ್ಸನ್ನು ತಿರುಗಿಸಿ ಗುಜುಗುಜು ಮಾತಿನ ಕಡೆಗೆ ಕಿವಿಗೊಟ್ಟಿದ್ದರಷ್ಟೆ. 'ಇಲ್ಲಿಯದೊಂದು ದೀಪ ಅಲ್ಲಿದ್ದಿದ್ದರೆ' ಎಂಬ ಅಸ್ಪಷ್ಟವೂ ಅಸಂಪೂರ್ಣವೂ ಆದ ಮಾತು ಅವರ ಕಿವಿಗೆ ಬಿತ್ತು. ತಾನು ದೇವರ ಮುಂದೆ ಹಚ್ಚಿದ್ದ ಯಾವುದೋ ಒಂದು ದೀಪವು ತಕ್ಕ ಸ್ಥಾನದಲ್ಲಿದ್ದಿಲ್ಲವೆಂದೂ ಅದು ಬೇರೊಂದು ಸ್ಥಾನದಲ್ಲಿದ್ದಿದ್ದರೆ ಒಳ್ಳಿತಾಗುತ್ತಿದ್ದಿತೆಂದೂ ಪ್ರೇಕ್ಷಕರಲ್ಲಿ ಯಾರೋ ಮಾತಾಡಿಕೊಳ್ಳುತ್ತಿದ್ದರೆಂದು ರಾಮಯ್ಯನವರು ತಿಳಿದುಕೊಂಡರು. 'ಏನು? ಎಲ್ಲಿಯ ದೀಪ? ಎಲ್ಲಿದ್ದಿರಬೇಕಿತ್ತು?' ಎಂದರು. ತಮ್ಮಲ್ಲೊಬ್ಬ ಸುಧಾರಕರ ಗಾಳಿತಾಗಿದ ತರುಣನಾಡಿದ ಅನುಚಿತವಾದ ಹುಚ್ಚು ಮಾತು ರಾಮಯ್ಯನವರ ಕಿವಿಗೆ ಬಿತ್ತೆಂದು ಜನರು ಅವಾಕ್ಕಾದರು. ಅದರಿಂದಾಗಿ ಅವರ ಮೋರೆಯ ಮೇಲಾದ ಕಳವಳದ ಕುರುಹು ರಾಮಯ್ಯನವರಿಗೆ ತಿಳಿಯದೆ ಇರಲಿಲ್ಲ. ಅವರ ಕಣ್ಣು ಬಿದ್ದ ಕೆಲವರು, 'ಏನೂ ಇಲ್ಲ, ಏನೂ ಇಲ್ಲ, ಎಲ್ಲ ಸರಿ!' ಎಂದುಬಿಟ್ಟರು. ರಾಮಯ್ಯನವರಿಗೆ ಅಸಮಾಧಾನವಾಗುತ್ತಿರುವುದನ್ನು ಕಂಡು ಪುರೋಹಿತ ಭಟ್ಟರು ಅಲ್ಲಿದ್ದೊಂದು ದೀಪವನ್ನು ತುಸು ದೂರಕ್ಕೂ ಹಿಂದಕ್ಕೂ ದೂಡಿಟ್ಟು 'ಈ ದೀಪವು ಇಲ್ಲಿದ್ದಿದ್ದರೆ ದೇವರ ಮುಖದ ಮೇಲೆ ಮತ್ತಷ್ಟು ಪ್ರಭೆ ಬಿದ್ದು ಕಳೆಯೇರುತ್ತಿತ್ತೆಂದು ಮಾತಾಡಿಕೊಳ್ಳುತ್ತಿದ್ದರವರು' ಎಂದರು. ರಾಮಯ್ಯನವರು ಮೂರ್ತಿಯ ಕಡೆಗೆ ನೋಡಿದರು; ದೀಪದ ಸ್ಥಾನಾಂತರದಿಂದ ಅದರ ಮೇಲೆ ಪ್ರಭಾವಿಶೇಷವೇನೂ ಬಿದ್ದ ಹಾಗೆ ತೋರಲಿಲ್ಲ. ಆದರೆ ಆ ಮಾತಿಗೇ ಸೈಗುಟ್ಟಿದಂತೆ ಜನರು ಮೋರೆಮಾಡಿದ್ದರು. ಅಂತೂ ಜನರು ದಾಕ್ಷಿಣ್ಯವರ್ತಿಗಳಾಗಿ ಹೇಳಬೇಕಾಗಿದ್ದೊಂದು ವಿಷಯವನ್ನು ತನ್ನಿಂದ ಮರೆಮಾಜಿರಬೇಕೆಂಬ ಸಂಶಯವು ರಾಮಯ್ಯನವರ ಮನಸ್ಸಿನಲ್ಲಿ ಉಳಿಯಿತು. 'ಇಲ್ಲಿಯದೊಂದು ದೀಪ ಅಲ್ಲಿ ಇದ್ದಿದ್ದರೆ'–ಎಲ್ಲಿ ಇದ್ದಿದ್ದರೆ? ಏನಾಗುತ್ತಿತ್ತು? ಎಂಬುದೊಂದು ಸಮಸ್ಯೆಯಾಯಿತು ಅವರಿಗೆ. ಅದನ್ನೇ ತಿರುತಿರುಗಿ ಯೋಚಿಸುತ್ತಿದ್ದರು ಅವರು.

ಬಂದವರೆಲ್ಲರೂ ಊಟಕ್ಕೆ ಕುಳಿತರು. ಊಟವಾಗುತ್ತಿದ್ದಾಗ ತುತ್ತು ತುತ್ತಿಗೊಂದರಂತೆ ಮಾತುಕತೆಗಳು ಬರುತ್ತ, ಹಿಂದಿನ ರಾತ್ರಿ

ಊಟವಾಗಿ ಹೋಗುತ್ತಿದ್ದಾಗ ಸುಬ್ಬಣ್ಣನು ಹೆಜ್ಜೆ ತಪ್ಪಿ ಕೆರೆಗೆ ಬಿದ್ದ ಪ್ರಸ್ತಾಪವು ಬಂತು. 'ಈಜು ಗೊತ್ತಿದ್ದುದರಿಂದ ಬದುಕಿಕೊಂಡ!' 'ಬರೇ ಒಂದು ಕೋಲು ಅಗಲದ ಹಾದಿ!' 'ಆಚೆ ಹಿತ್ತಲ ಗೋಂಡೆ ಈಚೆ ಕೆರೆ!' ''ಕತ್ತಲಲ್ಲಿ ಒಂದು ಹೆಜ್ಜೆ ತಪ್ಪಿ ಇಟ್ಟರೆ ಪ್ರಾಣಕ್ಕೇ ಬಂತು!' 'ಹಳ್ಳಿಯಿಂದ ಬರುವ ಹಾದಿಯೂ ಅದೊಂದೇ!' ಹೀಗೆ ಒಬ್ಬೊಬ್ಬರು ಒಂದೊಂದು ಮಾತು ಸೇರಿಸುತ್ತಿದ್ದಾಗ ರಾಮಯ್ಯನವರ ಮನಸ್ಸಿನಲ್ಲಿ ಮಿಂಚಿನಂತೆ ಹೊಂಚಿತು ಆ ಸಮಸ್ಯೆ. 'ಇಲ್ಲಿದ್ದೊಂದು ದೀಪ ಅಲ್ಲಿ ಇಟ್ಟಿದ್ದರೆ!' ಆಗ ಎಲ್ಲವೂ ಸ್ಪಷ್ಟವಾಯಿತು. ಆ ಮೇಲೆ ಅದು ಸಮಸ್ಯೆಯಾಗಿ ಉಳಿಯಲಿಲ್ಲ. 'ಇಲ್ಲಿದ್ದೊಂದು ದೀಪ ಅಲ್ಲಿ ಇಟ್ಟಿದ್ದರೆ ಎಷ್ಟೋ ಅಪಘಡಗಳು ಸಂಭವಿಸುತ್ತಿದ್ದಿಲ್ಲ', ಎಂದು ಪೂರ್ಣಗೊಂಡಿತು. 'ಹೌದು, ಮಹತ್ತಾದ ಪರೋಪಕಾರ ಕಾರ್ಯವಾಗುತ್ತಿತ್ತು! ಪರೋಪಕಾರವೇ ಪುಣ್ಯ! ಅದೇ ಉತ್ತಮವಾದ ದೇವರ ಸೇವೆ!' ಎಂದಿತು ಅವರ ಹೃದಯ

ಎಷ್ಟೊಂದು ಚಿಕ್ಕ ಮಾತು! ಯಾರೋ ಹುಡುಗಾಟಿಕೆಯಿಂದ ಏನೋ ಹೇಳಿದ ಅಸಂಪೂರ್ಣವಾದ ಮಾತು! ಎಷ್ಟೊಂದು ಸಾಮಾನ್ಯ ಸಂದರ್ಭ! ಆದರೆ ಇವುಗಳಿಂದಲೇ ರಾಮಯ್ಯನವರ ಹೃದಯಪರಿವರ್ತನೆಯಾಯಿತು. ಅವರಿಗಂದು ನಿದ್ದೆ ಹತ್ತಲಿಲ್ಲ. ಬೆಳಗಿನ ತನಕವೂ ಯೋಚಿಸುತ್ತ ಮಲಗಿದ್ದರು. ಎಂದೂ ತೋರದ ಹೊಸ ವಿಚಾರವು ಅವರ ಮನಸ್ಸನ್ನು ತುಂಬಿತ್ತು. ಅದೇ ದಿವ್ಯ ಜ್ಞಾನದ ಅರುಣೋದಯ! ಅಜ್ಞಾನದ ಪರಾಜಯ! 'ದೀಪವು ಬೇಕಾಗಿದ್ದುದು ಕೆರೆದಂಡೆಯಲ್ಲಿ; ಆದರೆ ನಾನು ಉರಿಸಿದುದು ಕೋಣೆಯಲ್ಲಿ! ಶತಕೋಟಿ ಸೂರ್ಯರನ್ನು ನಿರ್ಮಿಸಿರುವ ದೇವನಿಗೆ ನನ್ನ ನಂದಾದೀಪ!! ಹಸಿವಿಲ್ಲದ ದೇವರ ಮುಂದೆ ಬಗೆಬಗೆಯ ಭಕ್ಷ್ಯಭೋಜ್ಯಗಳನ್ನಿಟ್ಟೆ; ಆದರೆ ಹಸಿದವರಿಗೇನಿತ್ತೆ? ಸೇವೆ ಬೇಡಾದವನ ಬಳಿಯಲ್ಲಿ ಕಾಲ ಕಳೆದೆ; ಆದರೆ ಬೇಕಾದವರ ಕಡೆಗೆ ನೋಡಿಲ್ಲ! ಗೊಂಬೆಯಲ್ಲಿ ಚೇತನಶಕ್ತಿಯನ್ನು ಕಲ್ಪಿಸಿಕೊಂಡು ಮಗುವು ಆಡುವ ಕಾಲಕ್ಕೂ ಮಿತಿಯೊಂದಿದೆ. ಆ ಮೇಲೆ ಅದು ವಿಚಾರದ ಮಟ್ಟಕ್ಕೇರಿ ಗೊಂಬೆಯನ್ನು ಗೊಂಬೆಯಾಗಿಯೇ ತಿಳಿಯುವುದು. ನಾನಾದರೋ ಕೋಣೆಯಲ್ಲಿ ಕುಳಿತು ದೇವರ ಪೂಜೆಯೆಂಬ ಗೊಂಬೆಯಾಟವನ್ನು ಕೂಡಲು ನರೆಯುವ ವರೆಗೂ

ಆಡುತ್ತಲಿದ್ದೆ! ಹೌದು, ನಾನೊಬ್ಬ ನರಿತಕೂದಲ ದೊಡ್ಡ ಮಗುವಾಗಿದ್ದೆ!...' ಎಂದು ಮುಂತಾಗಿ ರಾಮಯ್ಯನವರಲ್ಲಿ ದಿವ್ಯ ಜ್ಞಾನದ ಭಾವನಾತರಂಗಗಳು ಏಳುತ್ತಲಿದ್ದುವು

ಪರಿಣಾಮವಾಗಿ ಈಗ ರಾಮಯ್ಯನವರು ಸ್ಥಾಪಿಸಿರುವ ಅನಾಥ ಬಾಲಕರ ಪಾಲನಾಗೃಹವಿದೆ; ಅದರ ಹೆಸರು 'ಬಾಲಕೃಷ್ಣ ಗುಡಿ'! ವೃದ್ಧಾತುರರ ರಕ್ಷಣಾಲಯವಿದೆ; ಅದನ್ನು 'ಜನಾರ್ದನ ಸನ್ನಿಧಿ' ಎಂದು ಕರೆಯುವರು. ನಿರ್ಬಲರಿಗೂ ಅಂಗಹೀನರಿಗೂ ಅನ್ನದಾನದ ವ್ಯವಸ್ಥೆಯಿದೆ; ಅದರ ಹೆಸರು 'ದೇವರ ಸೇವೆ'! ಆ ಕೆರೆಯೇರಿಯಲ್ಲಿರುವ ದೀಪಸ್ತಂಭಕ್ಕೇನು ಹೆಸರೆಂದು ರಾಮಯ್ಯನವರನ್ನು ಯಾರಾದರೂ ಕೇಳಿದರೆ ಮುಗುಳು ಮುಗುಳಾಗಿ ನಗುತ್ತ ಅವರು ಹೇಳುವುದು 'ನಂದಾದೀಪ'!

# ಧನಿಯರ ಸತ್ಯನಾರಾಯಣ

ಆರು ವರ್ಷದ ಆ ಹುಡುಗ. ಕಲ್ಲುಮುಳ್ಳಿನ ಏರುತಗ್ಗಿನ ಊರ ಕಾಲು-ದಾರಿ ನಡೆದು ಸೋತಿದ್ದಾನೆ. ಆತನ ತಲೆಯ ಮೇಲೊಂದು ಬಾಳೆಯ ಕಂದು—ಹೊರಲಾರದ ಹೊರೆಯದು ಅವನಿಗೆ. ಹೊತ್ತು ಕುತ್ತಿಗೆ ಸೋತಾಗ ಅದನ್ನು ಬಲ ಹೆಗಲ ಮೇಲೇರಿಸುವನು. ಅನಂತರ ಎಡ ಹೆಗಲ ಮೇಲೆ. ಅಲ್ಲಿಯೂ ನೋವಾದಾಗ ಬಲ ಕಂಕುಳಲ್ಲಿಟ್ಟು ಕೈಗಳಿಂದಾ ಧರಿಸಿ ಹಿಡಿದುಕೊಳ್ಳುವನು. ಬಳಿಕದು ಎಡ ಕಂಕುಳಿಗೆ ಹೋಗುವುದು. ಅಲ್ಲಿಂದ ತಿರುಗಿ ತಲೆಯ ಮೇಲೆ. ಹೀಗೆ ಬಡವನಿಗೆ ಹಣದ ಚರಿಗೆ ಸಿಕ್ಕಿದರೆ ಹೇಗೋ ಹೇಗೋ ಛಲದಿಂದ ಹೊತ್ತು ಮನೆಯ ಕಡೆ ಸಾಗುವಂತೆ, ಆ ಆರು ವರುಷದ ಬಳಕೆಯೂ ತೋರದ ಹರುಕಂಗಿಯ ಕೌಪೀನದ ಬಾಲಕನು ಬಾಳೆಯ ಕಂದನ್ನು ಹೊತ್ತು ಕಾಲೆಳೆದೆಳೆದು ಮುಂದೆ ಸಾಗುತ್ತಿದ್ದಾನೆ ಮನೆ ಹಾದಿ ಹಿಡಿದು. ಇನ್ನೂ ಎರಡು ಮೂರು ಗಳಿಗೆ ನಡೆಯಬೇಕು. ಆದರೆ ಈಗಾಗಲೆ ತೀರ ದಣಿದು ಸುಣ್ಣವಾಗಿದ್ದಾನೆ. ಹಣೆ ಕುತ್ತಿಗೆ ಎದೆಯೆಲ್ಲ ಬೆವರು. ಮೋರೆ ಕೆಂಪೇರಿ ಕನಲಿದೆ. ಆದರೂ ಆ ಬಾಳೆಯ ಕಂದನ್ನು ತೆಗೆದತ್ತ ಬಿಸುಡಲಾರ. ಮಾತ್ರವಲ್ಲ, ಬಿಗುವಾಗಿ ಹಿಡಿದರೆ ಅದೆಲ್ಲಿ ಜಜ್ಜಿ ಹೋಗುವುದೋ, ಸಡಿಲಾಗಿ ಕೈಗೊಟ್ಟರೆ ಅದೆಲ್ಲಿ ಜಾರಿಬಿದ್ದು ಸುಳಿಮುರಿದು ನುಜ್ಜುಗುಜ್ಜಾಗುವುದೋ ಎಂದು ಬೆದರಿ ಬಹು ಜಾಗರೂಕತೆಯಿಂದ ಹೊರುತ್ತಿದ್ದಾನೆ ಅದನ್ನು. ಹೆತ್ತಬ್ಬೆ ತನ್ನ ಮಗುವನ್ನು ಅಷ್ಟು ಜತನದಿಂದ ಹಿಡಿದುಕೊಳ್ಳುವಳೋ ಎಂಬ ಸಂಶಯ ಬರಬೇಕು ನೋಡುವವರಿಗೆ.

“ಹೀಗೆ ಹಿಂದೆ ಬಿದ್ದರೆ ಹೇಗೆ ಮನೆ ಸೇರುವುದು? ಹೊತ್ತು ಇಳಿಯುವುದೂ ಕಾಣುವುದಿಲ್ಲವೆ? ಬೇಡಾ ಬೇಡಾ ಎಂದರೆ ಕೇಳದೆ ಹೊತ್ತೆ! ಯಾವ ಕರ್ಮಕ್ಕೆ ಅದು! ತೆಗೆದತ್ತ ಒಗೆದು, ಬೇಗ ಮುಂದೆ ಬಂದೀ ಆಯಿತು! ಇಲ್ಲವಾದರೆ ನಾನೇ ಎಳೆದು ಬಿಸಾಡುತ್ತೇನೆ, ನೋಡು!” ಎಂದು ಗದರಿ

ಸುತ್ತಾಳೆ ಮುಂದೆ ಸಾಗುತ್ತಿರುವ ಅವನ ತಾಯಿ. ಅವಳಾದರೂ ಆ ಕಂದನ್ನು ತೆಗೆದುಕೊಳ್ಳಬಾರದೇ ಎಂದರೆ ಅವಳಿಗೊಂದು ಹೊರೆ ಬೇರೆಯೇ ಇದೆ. ಸುಮಾರು ಮೂರು ವರುಷದ ಮಗು! ಬಡ ತೌರಿಗೆ ಸೋಣೇ ತಿಂಗಳ ಬಿದ್ದಿಗೆ ಹೋಗಿ, ಹೊಕ್ಕ ಬಡ ಮನೆಗೆ ಹಿಂತಿರುಗಿ ಬರುತ್ತಿರುವವಳು ಅವಳು. ಅವಳ ತಾಯಿ ಕೊಟ್ಟ ನಾಲ್ಕು ಹಳೆಯ ಸೌತೆಯ ಕಾಯಿ, ಒಂದರೆ ಸೇರು ಅವಡೆ, ಒಂದು ತುಂಡು ಮರಸಣಿಗೆ, ಹರುವೆಯ ದಡಿ, ಕೆಸುವಿನ ಕಾಲು, ಇತ್ಯಾದಿಗಳ ಒಂದು ಕಟ್ಟು ಬಲಗೈ ತುದಿಯಿಂದ ತೂಗಿ ತೂಗಿ ಕೈತುಂಡಾಗುವಂತಾಗಿದೆ. ಎಡ ಕಂಕುಳಲ್ಲಿದೆ ಆ ಮಗು—ನಡೆಯಲಿಕ್ಕೆ ಸಣ್ಣದು, ಹೊರಲಿಕ್ಕೆ ದೊಡ್ಡದು!

ತಾಯಿಯ ಗದರಿಕೆಯನ್ನು ಕೇಳಿ ಅವಳೆಲ್ಲಾದರೂ ಆ ಕಂದನ್ನು ಎಸೆದು ಬಿಸಾಡುವಳೋ ಎಂದು ಅವಳ ಹಿಂದೆಯೇ ಓಡಿಯೋಡಿ ನಡೆಯುತ್ತಿದ್ದ ನಾಲ್ಕು ವರುಷದ, ಹರಕು ಪಾವಡೆಯ, ಕಾಡಿಗೆಗಣ್ಣಿನ ಹುಡುಗಿಯೊಂದು ಅಣ್ಣನ ಕೈಯಿಂದ ಅದನ್ನು ತೆಗೆದುಕೊಂಡು ಅವನು ಮಾಡಿದಂತೆ ತಲೆ ಹೆಗಲು ಕೈ ಕಂಕುಳುಗಳನ್ನೆಲ್ಲ ಉಪಯೋಗಿಸಿ ಹೆಣಗಾಡಿ ಅಂತೂ ಸ್ವಲ್ಪ ದೂರ ತಂದಿತು. ಅಷ್ಟರಲ್ಲಿ ತುಸು ಸುಧಾರಿಸಿಕೊಂಡ ಅಣ್ಣನು ತಿರುಗಿ ತಲೆಗೊಟ್ಟ ಆ ಕಂದಿಗೆ ಹೀಗೆ ಅಣ್ಣ ಸೋತಾಗ ತಂಗಿ, ತಂಗಿ ಸೋತಾಗ ಅಣ್ಣ, ಎಂದು ಹಾಗೂ ಹೀಗೂ ಆ ಕಂದು ಬಂದಿಳಿಯಿತು ಅವರ ಗುಡಿಸಲ ಬಾಗಿಲಲ್ಲಿ.

ಅದೊಂದು ರಸಬಾಳೆಯ ಕಂದು. ಅವರಜ್ಜಿಯ ಮನೆಯಲ್ಲಿ ರಸಬಾಳೆಯ ಚಿಕ್ಕದೊಂದು ಗೊನೆ ಬಲಿದಿತ್ತು. ಮೊಮ್ಮಕ್ಕಳು ಬರುವಾಗ ಹಣ್ಣಾಗಲೆಂದು ಆ ಮುದುಕಿ ಅದನ್ನು ಕಡಿಸಿ ತೂಗಿಸಿದ್ದಳು. ಆದರೆ ಇವರು ಅಜ್ಜಿಯ ಮನೆ ಸೇರುವುದಕ್ಕೆ ಎರಡು ದಿನ ಮುಂಚಿತವಾಗಿಯೇ ಅದು ಚೆನ್ನಾಗಿ ಮಾಗಿತ್ತು. ರಸಬಾಳೆಯ ಹಣ್ಣಲ್ಲವೆ? ಮಾಗಿದ ಮೇಲೆ ಗೊನೆಯಲ್ಲಿ ನಿಲ್ಲಲಿಲ್ಲ; ಮಗನ ಮಕ್ಕಳು ತಿನ್ನದೆಯೂ ಕೇಳಲಿಲ್ಲ. ಆದರೂ ಆ ಮುದುಕಿಯು ನಾಲ್ಕು ಹಣ್ಣುಗಳನ್ನು ಎಲ್ಲೋ ಮಡಕೆಯೊಳಗೆ ಅಡಗಿಸಿಟ್ಟಿದ್ದು, ತುಂಬಿ ತಿಂದಿದ್ದ ಆ ಮಕ್ಕಳ ಕಣ್ಣು ತಪ್ಪಿಸಿ, ಈ ಮೊಮ್ಮಕ್ಕಳಿಗೆ ಕೊಟ್ಟಳು. ಊರ ಜಾತ್ರೆಯಲ್ಲಿ ಅಂಗಡಿಯಿಂದುದುರು ತೂಗಿಸಿದ್ದ

ಬಾಳೆಯ ಗೊನೆಗಳನ್ನು ಈ ಮಕ್ಕಳು ಕಂಡಿದ್ದರಲ್ಲದೆ ತಿಂದು ನೋಡಿದವರಲ್ಲ. ಜಾತ್ರೆಗೆ ಹೋದಲ್ಲಿ ಒಂದೆರಡು ಮುಂಡಕ್ಕಿಯುಂಡೆ ಚಕ್ಕುಲಿಗಳಿಗಿಂತ ಹೆಚ್ಚಿನದೇನನ್ನೂ ಕೊಂಡು ಕೊಡಲಾರದಷ್ಟು ಕಡುಬಡತನ ಆ ಮಕ್ಕಳ ತಂದೆ ತಾಡನಿಗೆ. ಆದುದರಿಂದ ಹಣ್ಣು ಹಣ್ಣಾದ ಆ ಬಾಳೆಯ ಹಣ್ಣು ಅಮೃತಪ್ರಾಶನದಂತಾಯಿತು ಅವರಿಗೆ. ಅಜ್ಜಿಯ ಬಳಿ ಕುಳಿತು ಆದರ ಕತೆ ಕೇಳಿದರು. ಅಜ್ಜಿಯೂ ಹೇಳಿದಳು. ಆ ಉದ್ದದ ಕತೆಯನ್ನು ಗಿಡ್ಡಾಗಿ ಹೇಳುವುದಾದರೆ—ಒಂದೂ ವರಷದ ಹಿಂದೆ ಅವರ ಮಾವನೊಂದು ರಸಬಾಳೆಯ ಕಂದನ್ನು ತಂದು ನೆಟ್ಟಿದ್ದ. ಅದು ಗೊನೆ ಹಾಕಿತ್ತು. ಆದರೆ ಆ ಗೊನೆ ಬೇಗ ಹಣ್ಣಾಯಿತು; ಇವರು ಬಂದುದು ತಡವಾಯಿತು ಈಗ ಆ ಬಾಳೆಯ ನಾಲ್ಕು ಕಂದುಗಳಿವೆ. ಅವೂ ಬೆಳೆದು ಗೊನೆಹಾಕುವುವು. ಆಗ ಒಂದು ಗೊನೆಯನ್ನೇ ಅವರಿಗೆ ಅವಳು ಕಳುಹಿಸಿಕೊಡುವಳು—ಇದನ್ನು ಕೇಳಿದ ಆ ಮಕ್ಕಳಲ್ಲಿ ಒಂದು ಯೋಚನೆ ಮಿಂಚಿತು—ತಾವೂ ಅಲ್ಲಿಂದ ಒಂದು ಕಂದನ್ನು ಕೊಂಡುಹೋಗಿ ತಮ್ಮ ಮನೆಯೆದುರು ಮೋರೆ ತೋಳೆವಲ್ಲಿ ನೆಟ್ಟರಾಗದೆ?—ಎಂದು. ಎರಡು ಮೂರು ದಿನ ಅದೇ ಹಂಬಲ ಅವರಿಗೆ. ಕೊನೆಗೆ ಮಾವನು ಅವರಿಗೊಂದು ಕಂದು ಕೊಡುತ್ತೇನೆಂದಾಗ ಅವರಿಗಾದ ಆ ಆನಂದ! ಬರೆದು ಬಣ್ಣಿಸಲಾದೀತೆ? ಮುಂದೇನಾಯಿತೆಂಬುದು ಗೊತ್ತೇ ಇದೆಯಲ್ಲ?

ತಮ್ಮ ಗುಡಿಸಲು ಸೇರಿದ ಆ ಮಕ್ಕಳು—ಬೂದ ತುಕ್ರಿಯರು—ಮರುದಿನ ಬೆಳಗ್ಗೆ ಎಲ್ಲರಿಗಿಂತ ಮೊದಲು ಎಚ್ಚತ್ತು ತಾಡನನ್ನು ಬೇಡಿ ಕಾಡಿ ಅದನ್ನು ನೆಡಿಸಿದರು. ತಾಡನು ದಿನಗೂಲಿ ಮಾಡಿ ಸಂಸಾರ ಹೊರುವ ಕಡುಬಡವ. ಆದರೆ ಇರಲಿಕ್ಕೊಂದು ಮಾಡು ಬೇಕಲ್ಲ? ಅದಕ್ಕಾಗಿ ಕೋಟೆ ಮನೆ ನಾಗಪ್ಪನವರ ನಾಲ್ಕಾರು ಜೋಕು ತೆಂಗಿನ ಪಾಳು ತೋಟದ ಆ ಗುಡಿಸಲಲ್ಲಿ ಇದ್ದ. ಅದಕ್ಕೂ ಆರು ರೂಪಾಯಿ ಗೇಣಿಕೊಟ್ಟು ಗುಡಿಸಲು ಚಾವಣಿಮಾಡಿಕೊಳ್ಳಬೇಕಿತ್ತು. ಮೇಲಾಗಿ ಧನಿಯರ ಬಿಟ್ಟಿ ಬೇಗಾರಿಯೆಂತೂ ಇದ್ದದ್ದೇ. ಆ ಜಾಗದಲ್ಲಿ ಏನಾದರೂ ಬಾಳೆ ತರಕಾರಿಗಳನ್ನು ಬೆಳೆಯಿಸಬಹುದೆಂದರೆ ತಾಡನ ಪಾಳು ತೋಟವು ನೆರೆಹೊರೆಯ ಆಢ್ಯರ ಆಕಳುಗಳ ವಿಹಾರ ಕ್ಷೇತ್ರ. ಅವನ್ನು ಹಾಗೆಲ್ಲ ಬಿಟ್ಟುಬಿಡಬಾರದೆಂದು

ಹೇಳುವ ಅಥವಾ ಹೊಡೆದೋಡಿಸುವ ಎದೆಗಾರಿಕೆಯು ಬಡ ತೌಡನಿಗೆಲ್ಲಿಂದ? ನಾಳೆ ಅವರಲ್ಲಿಯೇ ದುಡಿದು ಎರಡು ಸೇರಕ್ಕಿಯ ಪಥ್ಯ ತರಬೇಕಲ್ಲ ಅವನಿಗೆ? ಅಲ್ಲದೆ ಅಯ್ಯರ ಅವಕೃಪೆಗೆ ಈಡಾಗಿ ಬಡವನು ಅವರೆಡೆಯಲ್ಲಿ ದಿನ ದೂಡಲಾಪನೆ? ಅದರಿಂದಾಗಿ ತೌಡನಾವುದನ್ನೂ ನೆಡುತ್ತಿದ್ದಿಲ್ಲ. ಆದರೆ ಈಗ ಈ ಮಕ್ಕಳ ಕಾಟಕ್ಕಾಗಿ ನೆಟ್ಟ. ನೆಟ್ಟ ಮೇಲೆ ಕಾಪಾಡಿಕೊಡದಿದ್ದರೆ ಇವರ ಅನುದಿನದ ಗೋಳಾಟ ಅವನು ಮನೆ ಹೊಕ್ಕಾಗಲೆಲ್ಲ ತಪ್ಪುವಂತಿದ್ದಿಲ್ಲ. ಆದುದರಿಂದ ಒಲೆಯೊಟ್ಟುವ ಅನಿವಾರ್ಯ ಆವಶ್ಯಕತೆಗಾಗಿ ಕೂಡಿಟ್ಟ ಕೊತ್ತಳಿಗೆಗಳನ್ನು ಆ ಕಂದಿನ ಸುತ್ತ ನೆಟ್ಟು ಗಟ್ಟಿಮುಟ್ಟಿನ ಬೇಲಿ ಮಾಡಿದ. ಅಷ್ಟಾದ ಮೇಲೆಯೇ ಆ ಮಕ್ಕಳು ಅಂದು ಗಂಜಿಯೂಟಕ್ಕೆ ಒಳಗೆ ಹೋದುದು.

* * * * *

ಅಂದಿನಿಂದ ಬೂದ-ತುಕ್ರಿಯರು ಹೊತ್ತಾರೆ ಎದ್ದು ಕಣ್ಣೊರಸೊತಸಿಕೊಳ್ಳುತ್ತ ಹೋಗಿ ಮೊದಲು ನೋಡುವುದು ಆ ಕಂದನ್ನು. ದಿನದಲ್ಲಿ ಅದನ್ನೆಷ್ಟು ಸಲ ನೋಡುತ್ತಿದ್ದರೋ ಲೆಕ್ಕವಿಟ್ಟವರಾರು? ಮೂಸಂಜೆಗೆ ಗುಡಿಸಲು ಸೇರುವ ಮೊದಲೊಮ್ಮೆ ಅದನ್ನು ನೋಡಿಕೊಂಡು ಬಾರದಿದ್ದರೆ ಅವರಿಗೆ ನಿದ್ದೆ ಹತ್ತದು. ಹೀಗ ಅವರು ದಿನ-ದಿನ ನೋಡು-ನೋಡುತ್ತಿದ್ದಂತೆ, ಅದರ ಬುಡದಲ್ಲಿ ಹೋಗಿ ನಿಂತು ಅದರ ಬೆಳವಣಿಗೆಯ ಕುರಿತು ಮಾತುಕತೆಯಾಡುತ್ತಿದ್ದಂತೆ, ಆ ಕಂದು ಸುಳಿಸುಳಿಯಾಗಿ ಬೆಳೆಬೆಳೆದು ಬಾಳೆಯ ಮರವಾಯಿತು. ಬೇಸಿಗೆಯು ಬಂದಾಗ ಬೂದ-ತುಕ್ರಿಯರಿಗೆ ಕುಡಿಕೆ ಹಿಡಿದು ಕೆರೆಯಿಂದ ನೀರು ಹೊತ್ತು ಬಾಳೆಯ ಬುಡಕ್ಕೆ ಸುರಿದಷ್ಟು ಸಾಲದು. ಅದರಿಂದಾಗಿ ಆ ಮಕ್ಕಳ ಮೈಯಿಂದೆಷ್ಟು ಬೆವರು ಸುರಿದಿತ್ತೋ ಅಳೆದವರಾರು?

ಬೇಸಿಗೆಯು ಹೋಗಿ ಮುಂಗಾರು ಮಳೆಯ ನೋಡವೆದ್ದಿದ್ದ ಅದೊಂದು ರಾತ್ರೆ ಬೂದನೆದ್ದು ಅಳತೊಡಗಿದ— "ಅಯ್ಯೋ ಗಾಳೀ! ಗಾಳೀ! ನಮ್ಮ ಬಾಳೆ ಮುರಿದು ಬಿದ್ದರೆ!" ಎಂದು ಬಿಕ್ಕಿ ಬಿಕ್ಕಿ ಕೂಗಿದ. ತೌಡನೆದ್ದು ಹೋಗಿ ಅದಕ್ಕೆ ಸುತ್ತಲೂ ನಾಲ್ಕು ಕೊತ್ತಳಿಗೆಗಳನ್ನು ಊತುಕೊಟ್ಟು ಕಟ್ಟಿ ತೋರಿಸಿ ಸಮಾಧಾನಗೊಳಿಸಿದ ಮೇಲೆ ಹುಡುಗನು ಹೋಗಿ ತಿರುಗಿ ನಿದ್ದೆ ಮಾಡಿದ.

ಒಂದು ದಿನ ತುಕ್ರಿಯು ಬಾಳೆಯ ಬುಡದಲ್ಲಿ ನಿಂತು ಕುಣಿಕುಣಿದು "ಅಣ್ಣಾ! ಅಣ್ಣಾ!" ಎಂದು ಕೂಗಿದಳು. ಬೂದನು ಓಡಿಹೋಗಿ ನೋಡು ತ್ತಾನೆ—ಬಾಳೆಯ ತುದಿಯಲ್ಲಿ ಹೂವಿನ ಮೂತಿ! ದಿನ ಹೋದಂತೆ ಹೂವು ಹೊರ ಬಂತು; ಬೆರಳು ಬಿಟ್ಟಿತು. ಬೆರಳುಗಳು ಬಲಿಬಲಿತು ತೋರ ಕಾಯಿಗಳಾದುವು. ಬೂದತುಕ್ರಿಯರೊಂದಿಗೆ ಚಿಕ್ಕ ದೂಮನೂ ಹೋಗಿ ಗೊನೆಯನ್ನು ನೋಡುತ್ತ ನಿಲ್ಲುತ್ತಿದ್ದ. ಅದು ಹಣ್ಣಾದಾಗ ಅವನಿಗೂ ಪಾಲು ಕೊಡುವುದಾಗಿ ಅಕ್ಕ ಅಣ್ಣಂದಿರು ಹೇಳುತ್ತಿದ್ದರು. ಅವರು ಹೊತ್ತು ತಂದ ಕಂದು; ಅವರಪ್ಪ ನೆಟ್ಟ ಕಂದು; ಅವರು ನೀರೆರೆದು ಬೆಳೆಯಿಸಿದ ಕಂದು; ಅದು ಬಿಟ್ಟ ಗೊನೆಯು ಅವರದು. ಅದು ಹಣ್ಣಾದಾಗ ಅದನ್ನೆಲ್ಲರಿಗೆ ಪಾಲುಮಾಡಿ ಹಂಚುವವರೂ ಅವರೇ. ಅವರಜ್ಜಿಗೂ ಒಂದು ಪಾಲಿದೆ ಅದರಲ್ಲಿ!

* * * * *

"ತೌಡಾ, ಆ ಗೇಣಿ ಬಾಕಿ ಎರಡು ರೂಪಾಯಿ ಯಾವಾಗ ಕೊಡ ವುದೊ? ಅದೇನು ನಿನ್ನ ವರ್ಗದ ತೋಟವೆಂದು ತಿಳಿದೆಯಾ?" ಎಂದು ಗುಡುಗುಡಿಸಿ ನುಡಿದರು ನಾಗಪ್ಪಯ್ಯ. ತೌಡನು ಅವರ ಮೋರೆ ನೋಡದೆ ಕತ್ತು ತಗ್ಗಿಸಿಕೊಂಡೇ ದೀನತೆಯ ಬೀಳುದನಿಯಲ್ಲಿ "ಈ ಮಳೆಗಾಲದ ಬರಗಾಲ ಸಾಗಲಿ! ಕಬ್ಬು ಹೂಡುವ ಆಲಿಯ ಕಾಲದಲ್ಲಿ ಹೇಗಾದರೂ ದುಡಿದು ಉಳಿಸಿ ತೀರಿಸುತ್ತೇನೆ" ಎಂದ. ಧನಿಯರು ಏನೇನೋ ಸಿಟ್ಟಿನ ಮಾತಾಡಿ ಕೊನೆಗೆ, "ಯಾವಾಗ ಕೇಳಿದರೂ— ಇಂದಿಲ್ಲ ಮುಂದೆ—ಎಂದೆ ನ್ನುವ ನಿನ್ನ ರೋಗ ಇದ್ದೇ ಇದೆ! ಆಗಲಿ. ಆಲಿಯ ಕಾಲದ ವರೆಗೂ ಕಾದುಬಿಡುತ್ತೇನೆ," ಎಂದು ಸಮಾಧಾನಕ್ಕೆ ಬಂದು, "ಆಗ ತೋಟ ದತ್ತ ಕಡೆಯಿಂದ ಬರುತ್ತಿದ್ದಾಗ ಆ ಬಾಳೆಯ ಗೊನೆಯನ್ನು ನೋಡಿದೆ. ನಾಡದು ಹುಣ್ಣಿಮೆ ನಮ್ಮಲ್ಲೊಂದು ಸತ್ಯನಾರಾಯಣ. ನಾಳೆಯೇ ಅದನ್ನು ಕಡಿದಿಟ್ಟರೆ ಅಂದಿಗೆ ಹಣ್ಣಾದೀತು. ಹುಣ್ಣಿಮೆಯ ಬೆಳಗ್ಗೆ ತಂದು ಕೊಟ್ಟುಬಿಡು! ತಿಳಿಯಿತೇ?" ಎಂದರು. ತೌಡನಿಗೆ ಸಿಡಿಲುಬಡಿ ದಂತಾಯಿತು! ಅವನೇನು ಹೇಳಿಯಾನು? ಮೌನವಾಗಿದ್ದ. "ಏನು, ಹೇಳಿದ್ದು ಕೇಳಿತೇ?" ಎಂದರು ತುಸು ಬಿರುಸಿನ ದನಿಯಲ್ಲಿ ಧನಿಯರು.

ತೌಡನು ಅಂಜುತ್ತಂಜುತ್ತ ನಾಲಿಗೆ ತಡವರಿಸುತ್ತ, "ಮಕ್ಕಳು ಬಹಳ ಆಶೆಯಿಂದ ಬೆಳೆಸಿದ್ದು. ಕೆಳಗಿನ ಒಂದೆರಡು ಸಣ್ಣ ಹಣ್ಣಿಗೆಯಾದರೂ ಆ ಮಕ್ಕಳಿಗೆ. . . . ." ಎನ್ನುವಷ್ಟರಲ್ಲೇ ಧನಿಯರು, "ಮಕ್ಕಳಿಗೆ ರಸ ಬಾಳೆ ಹಣ್ಣೋ, ಮಣ್ಣೊ! ದೇವರ ಬಾಯಿಗೆ ಬೀಳಲಿ! ಮಕ್ಕಳ ಮೈಕೆ ಸುಖಕೊಡುತ್ತಾನೆ ಸತ್ಯನಾರಾಯಣ! ಮಕ್ಕಳಿಗಿಟ್ಟುಕೊಂಡು ದೇವರಿಗೆ ಕೊಡೋದೇ? ಹೀಗೆಲ್ಲ ಮಾಡೋದ್ರಿಂದ್ಲೇ ನಿತ್ಯ ದರಿದ್ರ ತಪ್ಪೋದಿಲ್ಲ ನಿಮಗೆಲ್ಲ!" ಎನ್ನುತ್ತ ತಿರುಗಿ ಕೆಂಪೇರತೊಡಗಿದರು.

* * * * *

ತೌಡನು ಗುಡಿಸಲಿಗೆ ಬಂದ ನಡೆದ ಸಂಗತಿಯನ್ನೆಲ್ಲ ಹೆಂಡತಿ ದೆಯ್ಯಿಗೆ ಗುಟ್ಟಾಗಿ ಹೇಳಿದ. ಅವಳು "ಅಯ್ಯೋ ದೇವರೇ, ಮಕ್ಕಳು ಒಂದು ವರ್ಷದಿಂದ ಬೆವರು ಸುರಿದು ನೀರೆರೆದು ಹಣ್ಣು ತಿಂದೇವೆಂದು ಆಶೆ ಮಾಡಿ ಮಾಡಿ ಕಡೆಗೆ. . . . ." ಎನ್ನುವಷ್ಟರಲ್ಲೇ ಅವಳಿಗೆ ಕಣ್ಣೀರು ಬಂತು, ಕುತ್ತಿಗೆ ಬಿಗಿಯಿತು, ಮಾತು ಮುಂದುವರಿಯದಂತಾಯಿತು. ಆದರೇನು ಮಾಡುವುದು? ಹಣ್ಣಿನ ಗೊನೆಯು ಹುಣ್ಣಿಮೆಯ ದಿನ ಧನಿಯರ ಅಂಗಳವೇರಲೇ ಬೇಕು! ತೌಡನು ಗೊನೆಯನ್ನು ಕಡಿದ. ಮಕ್ಕಳು ಸಂತೋಷದಿಂದ ಕುಣಿದಾಡಿದುವು. ಹಲವು ಪ್ರಶ್ನೆಗಳನ್ನು ಕೇಳಿದುವು. "ನೀವೆಲ್ಲ ರಗಳೆಮಾಡಬೇಡಿರಿ ನೋಡೋಣ" ಎಂದೊಂದೇ ಮಾತಿನಿಂದ ತನ್ನ ರಗಳೆಯನ್ನು ನುಂಗಿಕೊಳ್ಳುತ್ತ ಅವರ ಬಾಯಿ ಕಟ್ಟಿಸಿ, ಗೊನೆಯನ್ನು ಒಳಗೆ ತೂಗಹಾಕಿ ಹರಕು ಬಟ್ಟೆ ಸುತ್ತಿದ. ಮಕ್ಕಳು ದಿನದಿನವೂ ಅದು ಹಣ್ಣಾಯಿತೋ ಎಂದು ಹಲವು ಹದಿನೆಂಟು ಸಲ ಎಡೆಯಿದ್ದಲ್ಲಿ ಇಣಿಕಿ ನೋಡುತ್ತಿದ್ದುವು. ಹುಣ್ಣಿಮೆ ಗೆರಡುದಿನ ಮುಂಚೆ ಬಟ್ಟೆಯ ಹರುಕಿನೆಡೆಯಲ್ಲ ಕಾಯಿಯೊಂದು ಅರಸಿನ ಬಣ್ಣ ತಾಳಿದುದನ್ನು ಬೂದ ಕಂಡು ಹಿರಿಹಿರಿ ಹಿಗ್ಗಿ ತಂದೆಯ ಬಳಿಗೋಡಿ ಹೇಳಿದ. "ಇಲ್ಲ, ಅದಿನ್ನೂ ಚೆನ್ನಾಗಿ ಹಣ್ಣಾಗಿಲ್ಲ. ನೀವು ನಡುನಡುವೆ ಹೀಗೆಲ್ಲ ರಗಳೆ ಮಾಡಿದರೆ ನಾನದನ್ನು ತೆಗೆದು ತೋಡಿಗೆ ಬಿಸಾಡುತ್ತೇನೆ" ಎಂದು ತೌಡನೆಂದುದೇ ತಡ, ಮಕ್ಕಳು ಬೆದರಿ ಮೌನವಾದರು.

ಹುಣ್ಣಿಮೆಯ ದಿನ ಹೊತ್ತಾರೆ ಮಕ್ಕಳೆದ್ದು ನೋಡುತ್ತಾರೆ, ಬಾಳೆಯ

ಗೊನೆಯೂ ಇಲ್ಲ! ತಂದೆಯೂ ಇಲ್ಲ! ಗೋಳೋ ಗೋಳು ಮೂರು ಮಕ್ಕಳದು! ದೆಯ್ಯಿಯು ಅವರನ್ನು ಸಮಾಧಾನಗೊಳಿಸುವುದಕ್ಕೆ ಏನೇನೋ ಕಾಳಬೆಕ್ಕು ತಿಂದು ಹೋದ ಕತೆ ಹೇಳಿದಳು. ಅದನ್ನು ಕೇಳಿ ಚಿಕ್ಕ ದೂಮನು, "ಆ-ಆ-ಆ-ಆ ಕಾಲ ಬೆಬ್ಬೆಬ್ಬೆಕ್ಕೊ ಸ-ಸ-ಸ್ಸತ್ತೋ ಒ-ಒ-ಒಗ್ಲ್ಯೋ!" ಎಂದರೂ, ಬೂದತುಕ್ರಿಯರು ಅಂತಹ ಕತೆಯನ್ನು ನಂಬಿ ಸಮಾಧಾನವಾಗುವಂತಿದ್ದಿಲ್ಲ. ಕೊನೆಗೆ ದೈಯಿಯು, "ಅದನ್ನು ಧನಿಯರಲ್ಲಿಗೆ ಅಪ್ಪ ಕೊಂಡುಹೋದರು. ಅಲ್ಲಿ ಸತ್ನಾರ್ಣ ದೇವ್ರಿಗೆ ಅದು ಬೇಕಂತೆ!" ಎಂದಳು. "ದೇವ್ರು ಅದನ್ನು ತಿನ್ನುತ್ತಾರೆಯೆ?" ಎಂದು ಬೂದನ ಪ್ರಶ್ನೆ. "ದೇವ್ರಿಗೆ ಅಷ್ಟೊ ಬೇಕಿತ್ತೆ? ನಮಗೆ ಎರಡೆರಡು—ಒಂದೊಂದು ಆದರೂ ಇಡಬಾರದಾಗಿತ್ತೆ?" ಎಂದು ತುಕ್ರಿಯ ತರ್ಕ. "ಹೋಗಲಿ, ಆ ಆಲೋಚನೆ ಬಿಡಿ, ಅದರ ಎರಡು ಮೂರು ಕಂದುಗಳಿವೆ. ಯಾವುದಾದರೊಂದು ಬೇಗನೆ ದೊಡ್ಡದಾಗಿ ಗೊನೆ ಹಾಕೀತು. ಅದು ಪೂರಾ ನಿಮಗೇ," ಎನ್ನುತ್ತ ಮಕ್ಕಳ ಆ ಅಳುಮೋರೆಯನ್ನು ನೋಡಲಾರದೆ ಒಳಗೆ ಹೋಗಿಬಿಟ್ಟಳು ತಾಯಿ. ಆದರೆ ಆ ಮಕ್ಕಳು ಮನೆಯಲ್ಲಿ ಏನೋ ಮಹಾವಿಪತ್ತು ಸಂಭವಿಸಿದ್ದಂತೆ ತಲೆಗೊಂದು ಕೈಗೊಟ್ಟು ಜೋಲುಮೋರೆ ಹಾಕಿ ಕಣ್ಣೀರೊರಸಿಕೊಳ್ಳುತ್ತ ಜಗಲಿಯಲ್ಲಿ ಕುಳಿತಿದ್ದುವು. ತುಸು ಹೊತ್ತಾದ ಮೇಲೆ ಅದೇನು ಯೋಚನೆ ಹೊಳೆಯಿತೋ ಆ ಬೂದನಿಗೆ- ನೋಡಿ, ಅವನು ಅಂಗಳಕ್ಕೆ ಹಾರಿದ! "ತುಕ್ರೀ, ಬಾ" ಎನ್ನುತ್ತ ಬಾಳೆಯ ಕಂದುಗಳಿರುವೆಡೆಗೆ ಧಾವಿಸುತ್ತಿದ್ದಾನೆ, ತುಕ್ರಿಯೂ ಓಡಿ ಸೇರಿದ್ದಾಳೆ. ನೋಡಿ, ಬೂದನು ಆ ಕಂದುಗಳನ್ನು ಒಂದೊಂದಾಗಿ ಹಿಡಿಹಿಡಿದು ಬಗ್ಗಿಸಿ, ತಿರುತಿರುವಿ ಮುರಿಯುತ್ತ, "ಇ ಇ ಇ ಇ ಇವು ಗೊನೆ ಹಾಕೋದೋ ಬೇಡಾ! ಆ ಆ ಆ ಆ ಸತ್ತ್ ನಾರ್ಣ್ಣಾ ತಿ ತಿ ತಿ ತಿ ತ್ತಿನ್ನೋದೋ ಬೇಡ!" ಎನ್ನುತ್ತ ಅವನ್ನೆಲ್ಲ ಸೀಳಿ ಸೀಳಿ ಮುರಿಮುರಿದು ಹಾಕಿ ಅಲ್ಲೆಲ್ಲ ಕೆಸರೇಳುವಂತೆ ಅವುಗಳ ಮೇಲೆ ತಕತಕ ಕುಣಿಯುತ್ತಿದ್ದಾನೆ! ತುಕ್ರಿಯು.. ಕುಣಿಯುತ್ತಿದ್ದಾಳೆ! ಅದೇನು ಆವೇಶ! ಅದೆಂತಹ ನೃತ್ಯ!

---

# ಆಪದ್ಬಾಂಧವ?

"ಒಂದಿಷ್ಟೂ ಕರುಣೆಯಿಲ್ಲದವಳು ಅಂತೀರಲ್ಲಾ ನನ್ನ? ನಿಮಗೊಂದಿಷ್ಟು ಮುಂದಿನ ವಿಚಾರ ಯಾಕೆ ಬರಲೊಲ್ಲದೂ ಅಂತೇನೆ ನಾನು! ನಾಗು ನಿಮ್ಮ ತಂಗೀನೂ ಹೌದು; ಗಂಡನ್ನ ಕಳಕೊಂಡು ನಿರ್ಗತಿಕಳಾಗಿ ಕೂತಿರೋದೂ ನಿಜ; ನಾವೇನಾದರೂ ಕೈಲಾದಷ್ಟು ಸಹಾಯಮಾಡಬೇಕೆಂಬೋದೂ ನ್ಯಾಯವೇ. ಆದರೆ ನಮಗೇ ತಿಂಗಳದ್ದು ತಿಂಗಳಿಗೇ ನಾಕಾಗೋದಿಲ್ಲ ಎಂಬಂತಿರುವಾಗ . . . ."

"ಹಾಗಂದರೇನೆ? ತಿಂಗಳಿಗೆ ಒಂದು ನೂರಂತೂ ಬರುತ್ತಾ ಇಲ್ವೆ? ಇರೋದು ನಾವಿಬ್ಬರು, ಎರಡು ಮಕ್ಕಳು, ಸಣ್ಣ ಸಂಸಾರ! . . . . . . ."

"ಸಂಸಾರ ಸಣ್ಣದೂಂತ ಇನ್ನೊಬ್ಬರದನ್ನು ತಂದು ತುಂಬಿಸಿಕೊಂಡು ಪೇಚಾಡಬೇಕೂಂತೀರಾ? ಅದೂ ಒಂದೆರಡು ದಿನವೇ? ಒಂದೆರಡು ತಿಂಗಳೆ? ಅವಳಾದರೂ ಒಂದು ಜೀವಾಂತ ಉಂಟೆ? ಬೆನ್ನ ಹಿಂದೇ ಇದ್ದಾವೆ—ಒಂದು ಹೆಣ್ಣು ಒಂದು ಗಂಡು! ಬಂದ ಮೇಲೆ ಹಿಟ್ಟು ಬಟ್ಟೆಯೆಲ್ಲ, ನಮಗಾದಂತೆ ನಮ್ಮ ಮಕ್ಕಳಿಗಾದಂತೆ, ಅವರಿಗೂ ಆಗ್ಬೇಕು. ಮಾತ್ರವೆ? ನಾಳೆ ಆ ಹುಡುಗನಿಗೆ ವಿದ್ಯೆ! ಆ ಹೆಣ್ಣಿಗೆ ಮದುವೆ! ಅಷ್ಟರಲ್ಲಿ ನಿಮ್ಮ ಈ 'ಸಣ್ಣ ಸಂಸಾರ' ಎಂಬೋದು ಸಣ್ಣದಾಗಿಯೇ ಇದ್ದುಬಿಡುತ್ತೆಯೇ? ಆಗ ನಿಮ್ಮ ಈ ಒಂದು ನೂರು ಏನೆಲ್ಲ ಮಾಡೀತು? ಏನೋ ಮನೆಯಲ್ಲಿ ಒಂದಿಷ್ಟು ನೆಮ್ಮದಿ ಇತ್ತು ಇಷ್ಟರ ತನಕ. ಮುಂದೆ ಈ ಮನೆ, ಈ ಸಂಸಾರ ಎಂಬೋದರಲ್ಲಿ ಒಂದು ರವಷ್ಟು ಸುಖಶಾಂತಿ ನಾನು ಬೇರೆ ಕಾಣೆ ಅನ್ನೋ ಹಾಗಿನ ಗೋಳಿನ ಬಾಳಲ್ಲಿ ಹೊರಳಾಡಬೇಕೂಂತ ಬ್ರಹ್ಮ ನನ್ನ ಹಣೇಲಿ . . . . . ."(ಕಣ್ಣೀರು!)

ಶಂಕರರಾಯನು ತನ್ನ ಹೆಂಡತಿಯ ಮಾತಿನ ಸರಣಿಗೆ ಮೆಚ್ಚಲಿಲ್ಲ. ತನ್ನ ತಂಗಿಯನ್ನೂ ಅವಳ ಮಕ್ಕಳನ್ನೂ ಕರೆದುಕೊಂಡು ಬರುವುದರಿಂದ

ತಮ್ಮ ಅಚ್ಚುಕಟ್ಟಿನ ಸಂಸಾರದ ಸವಿಗಟ್ಟು ತುಸು ಕೆಡುವುದಿದ್ದರೂ, ಅನಾಥಳಾಗಿ ಸಂಕಷ್ಟದಲ್ಲಿ ಬಿದ್ದಿರುವ ಸೋದರಿಯನ್ನು ಕೈಬಿಟ್ಟುಬಿಡುವುದು ಅವನಿಗೆ ಸರಿದೋರಲಿಲ್ಲ. ಆದುದರಿಂದ, ‘‘ಮುಂದೆ ಅಂತಹ ಬಿಕ್ಕಟ್ಟಿನ ಪ್ರಸಂಗ ಬಂದಾಗ, ಏನಾದರೊಂದು ದಾರಿ ಯೋಚಿಸಿದರಾಯಿತು. ಈಗೇಕೆ ಕರಕರೆ ಹಚ್ಚಿಕೊಳ್ಳುವೆ?" ಎಂದು ಸಮಾಧಾನವಾಗದ ಹೆಂಡತಿಗೆ ಸಮಾಧಾನ ಹೇಳಿ ಮರುದಿನ ಬೆಳಿಗ್ಗೆ ನಾಗುವಿನ ಊರಿಗೆ ಹೊರಟು ಹೋದ ಆತ.

* * * *

ತಂಗಿಯು ಅಣ್ಣನ ಮೋರೆ ನೋಡಿದುದೇ ತಡ -- ಕಟ್ಟೆಗಟ್ಟಿ ಅಳುವು ಏರಿಮುರಿದು ಹರಿಯಿತು. ಅಣ್ಣನ ಕಣ್ಣೂ ನೀರಾಯಿತು. ಇವರನ್ನು ಕಂಡು ಮಕ್ಕಳೂ ಮರುಗಿದುವು. ಕೊನೆಗೆ ಅಣ್ಣನೇ ಎದೆಗಟ್ಟಿ ಮಾಡಿಕೊಂಡು, ‘‘ನಾಗೂ, ಈ ಮಕ್ಕಳನ್ನು ನೋಡಿ ದುಃಖವನ್ನು ಮರೆ. ಇವರಿಗಾಗಿ ಬಾಳು!" ಎಂದ.

‘‘ಇವರಿಲ್ಲದಿದ್ದರೆ ಅಂದೇ ಅವರೊಂದಿಗೆ ನಡೆಯುತ್ತಿದ್ದೆ. ಆ ದಿನ ಅಳಿಯಲಾರದೆ ಉಳಿದುದು ಇವರಿಗಾಗಿಯೇ. ಆದರೆ ಅಂದು ಮುಗಿಸಲಾರದ ಈ ಬಾಳನ್ನು ಮುಂದೆ ಹೇಗೆ ಸಾಗಿಸುವುದೆಂಬುದು ಮಾತ್ರ ಇನ್ನೂ ನಿರ್ಧಾರವಾಗಿಲ್ಲ," ಎಂದು ನಿಟ್ಟುಸಿರುಬಿಟ್ಟಳು ಆಕೆ.

‘‘ಅದೇನೂ ಅಂತಹ ಬಿಡಿಸಲಾಗದ ಸಮಸ್ಯೆಯಲ್ಲ. ಮಕ್ಕಳೊಡನೆ ನನ್ನೊಟ್ಟಿಗೆ ಹೊರಟು ಬಾ. ಇನ್ನು ಮುಂದೆ ನಿನ್ನದೂ ನನ್ನದೂ ಎಲ್ಲ ಎಲ್ಲ ಒಟ್ಟು ನಮ್ಮದೊಂದು ಸಂಸಾರ!’’

‘‘ಅಣ್ಣಾ, ಬೇಡ, ನಾನೆಲ್ಲಾದರೂ ಇಲ್ಲಿಯೇ ಇದ್ದುಕೊಳ್ಳುತ್ತೇನೆ.’’

‘‘ಅದು ಹೇಗಾದೀತು? ಬಾವನೇನಾದರೂ ದುಡ್ಡು ಕೂಡಿಟ್ಟಿರಲಾರ; ಈ ಮಕ್ಕಳನ್ನು ಕಟ್ಟಿಕೊಂಡು ಹೇಗೆ ಜೀವಿಸಲಾಪೆ ನಾಗೂ?"

‘‘ಕಟ್ಟೆಗಟ್ಟಿ ಕಾಸಿಲ್ಲದಿದ್ದರೂ ರಟ್ಟೆಯಲ್ಲಿ ಕಸುವಿದೆ. ಹೊತ್ತುಗಳೆಯುವುದಕ್ಕಾಗಿ ಅವರೇ ಕಲಿಸಿಕೊಟ್ಟ ವಿದ್ಯೆ ಮುಂದೆ ಹೊಟ್ಟೆ ಹೊರುವುದಕ್ಕೂ ನೆರವಾದೀತು. ಅದೇನೆಂಬೆಯಾ? ರಾಟೆ! ಸಾಕಾಗದಿದ್ದರೆ ಬೀಸುಗಲ್ಲೂ ಇದೆ!’’

"ಅಯ್ಯೋ, ನಾಗೂ, ನಾನಿರುತ್ತ ನೀನು ಹಾಗೂ ದುಡಿದು ಜೀವಿಸ ಬೇಕಾಗಿದೆಯೇ? ಈ ಹುಚ್ಚುತನ ಬಿಡು. ನನ್ನೊಡನೆ ಹೊರಡು."

"ಇಲ್ಲಣ್ಣಾ, ನಾನು ಬರಲಾರೆ ನೀನು ಕೋಪಿಸಿಕೊಳ್ಳಬೇಡ. ಅನ್ಯಥಾ ಯೋಚಿಸಬೇಡ. ನಿನ್ನ ಹೃದಯ ಬಲ್ಲೆ; ನಮ್ಮದೊಂದು ಕರುಳು ನಿಜ. ಆದರೆ. . . . . .ಆದರೆ. . . . . .ಬೇಡ, ಅಣ್ಣಾ ನಾನು ಬರಲಾರೆ. ತೌರು ಎಷ್ಟೇ ಒಳ್ಳೆಯದ್ದಿರಲಿ, ಸಿರಿವಂತಿಕೆಯದ್ದಿರಲಿ, ಗತಿಗೆಟ್ಟು ತೌರು ಸೇರಬಾರದು. ದುಡಿದಷ್ಟು ದಿನ ದುಡುತ್ತೇನೆ. ಆದರೆ ಎಲ್ಲಾದರೂ ನಾನೂ ಅವರ ದಾರಿ ಹಿಡಿದರೆ, ಆಗ ಮಾತ್ರ, ಅಣ್ಣಾ, ಈ ಮಕ್ಕಳನ್ನು ನಿನ್ನ ಸೆರಗಿನಲ್ಲ ಹಾಕಿಹೋಗಿದ್ದೇನೆಂದು ತಿಳಿದು ಓಡಿಬಂದು ಕರೆದು ಕೊಂಡು ಹೋಗು. ನಿನ್ನ ಮಕ್ಕಳೇ ಎಂತ ತಿಳಿ! ಎಂತಹ ಸಂದರ್ಭ ದಲ್ಲಿಯೂ ಮರೆಯಬೇಡ. . . . . . ."(ಕಣ್ಣೀರು)

*　　*　　*　　*

ಶಂಕರರಾಯನು ಅನಿರೀಕ್ಷಿತವಾಗಿ ಒಬ್ಬನೇ ಹಿಂತಿರುಗಿ ಬಂದುದು ಅವನ ಹೆಂಡತಿಗೆ ಆಶ್ಚರ್ಯವಾಯಿತು. ಮಾತ್ರವಲ್ಲ, ತುಸು ಸಮಾ ಧಾನವೂ ಆಗಿದ್ದಿರಬೇಕು. ಆದರೆ ಸಮಾಚಾರವೇನೆಂದು ತಾನಾಗಿ ಕೇಳಲು ಧೈರ್ಯ ಬರಲಿಲ್ಲ. ಅಂತೂ ಊಣಬಡಿಸುತ್ತಿದ್ದಾಗ ಆತನ ಪ್ರಸನ್ನ ಮುಖಮುದ್ರೆಯನ್ನು ಕಂಡು, "ಬಂದು ಇಷ್ಟು ಹೊತ್ತಾದ್ರೂ ಅಲ್ಲಿನ ಸಮಾಚಾರವೇನೂಂತ ತುಟಿಯೆತ್ತಬೇಕೇ! ಅಷ್ಟು ಬೇಸರ ನನ್ನ ಮೇಲೆ!" ಎಂದು ಕೊಂಕುನುಡಿದಳು.

"ಬೇಸರವೇನೂ ಇಲ್ಲ. ಅವಳು ಎಷ್ಟಕ್ಕೂ ಬರೋದಿಲ್ಲಾಂದ್ಳು. ಅಲ್ಲೇ ಇರುವಂತೆ ಏನಾದರೂ ಒಂದಿಷ್ಟು ವ್ಯವಸ್ಥೆ ಮಾಡಿಕೊಟ್ಟು ಬಂದೆ. ಇನ್ನು ಕೆಲವು ದಿನ ಬಿಟ್ಟು ತಿರುಗಿ ಹೋಗಬೇಕಾಗಿದೆ."

"ಚೆನ್ನಾಯ್ತು! ಇಷ್ಟು ದಿನ ಒಂದು ಮನೆ, ಒಂದು ಸಂಸಾರ ಅಂತ ಇತ್ತು. ಇನ್ನು ಎರಡು ಮನೆ, ಎರಡು ಸಂಸಾರ! ಅತ್ತ ಐವತ್ತು; ಇತ್ತ ಐವತ್ತು! ಬೇಡಪ್ಪಾ ಈ ಪಿಕಲಾಟ; ಎಲ್ಲ ಇಲ್ಲಿಗೇ ಬರ್ಲಿ. ನೀವು ಹೋದ ಮರುದಿನವೇ ಆ ಅಡಿಗೆ ಹೆಂಗ್ಸೂ ಬಿಟ್ಟು ಹೋದ್ಳು; ಮಕ್ಕಳನ್ನು ಹಿಡಿಯೋ ಹುಡುಗನೂ ಮೈ ಚೆನ್ನಾಗಿಲ್ಲಾಂತ ಊರಿಗೆ ಹೋಗಿಬಿಟ್ಟ!. ."

“ಅದೇನು! ಬರುವವರಿಗೆ ಮೊದಲಾಗಿ ಜಾಗಾ ಸಿದ್ಧ ಮಾಡಿಟ್ಟ್ಹಾಗಿದೆಯಲ್ಲ? ಆದರೆ ಅವಳು ಬರೋದೂ ಇಲ್ಲ; ಅತ್ತ ಐವತ್ತು ಇತ್ತ ಐವತ್ತು ಆಗಬೇಕಾಗಿಯೂ ಇಲ್ಲ! ಬಾವನ ಲೆಕ್ಕದ ಪುಸ್ತಕ ತೆಗೆದು ನೋಡಿ ಯಾರದಾದರೂ ಋಣವಿದ್ದರೆ ತನ್ನ ಚಿನ್ನಾಭರಣ ಮಾರಿ ತೀರಿಸಿಕೊಡು ಅಂದ್ಳು. ಲೆಕ್ಕದ ಪುಸ್ತಕ ತೆರೆದು ನೋಡಿದಾಗ ಅದರಲ್ಲೇನಿತ್ತು ಬಲ್ಲೆಯಾ? ಐದು ಸಾವಿರ ರೂಪಾಯಿನ ಲೈಫ್ ಇನ್ಶ್ಯೂರೆನ್ಸ್ ಪಾಲಿಸಿ! ಅದು ಬಂದು ಹೆಚ್ಚು ದಿನ ಆಗಿದ್ದಿಲ್ಲ; ನಾಗೀಗೂ ಕೂಡಾ ಗೊತ್ತಿದ್ದಿಲ್ಲ! ಅವಳಿಗೇನೋ ಆ ಹಣ ಸಿಕ್ಕಿಬಿಡುತ್ತೆ. ಆ ಸಂಬಂಧ ತಿರುಗೊಮ್ಮೆ ಹೊಗ್ಬೇಕೊಂದೆ. ವ್ಯವಸ್ಥೇಂದ್ರೆ ಅದು! ಅತ್ತ ಐವತ್ತು, ಇತ್ತ ಐವತ್ತಲ್ಲ, ತಿಳೀತೆ! ಅಂತೂ ಸಿಸ್ನಿಂದಾಂತ ಬಾವನಿಂದಾಂತ ಸಂಸಾರಿಯಾದವರೆಲ್ಲ ಒಂದು ಪಾಠ ಕಲಿಯೋಕಿದೆಯೆಂದು ತೋರಿತು ನನಗೂವ! ಹಾಗೇ ಆ ಇನ್ಶ್ಯೂರೆನ್ಸ್ ಕಂಪ್ನಿ ಏಜಂಟರ ಆಫೀಸಿಗೆ ಹೋದವನೇ ನಾನೂ ಒಂದೈದು ಸಾವಿರ ರೂಪಾಯಿನ ವಿಮಾ ಅರ್ಜಿ ಕೊಟ್ಟು ಬಂದು ಬಿಟ್ಟೆ. ಆಪದ್ಧನವಾಗಿ ಇದ್ದುಕೊಂಡು ಬಿಡ್ಲಿ! ಈಗಿನ ಕಾಲದಲ್ಲಿ ಆಪದ್ಬಾಂಧವಾಂದ್ರೆ ಲೈಫ್ ಇನ್ಶ್ಯೂರೆನ್ಸ್ ಪಾಲಿಸಿ!”

# ಅಜ್ಜಯ್ಯನ ಮದುವೆ

'ಅಜ್ಜಯ್ಯಾ!' ಎಂದರೆ ರಾಮಯ್ಯನವರಿಗೆ ಬಹಳ ಸಿಟ್ಟು. ಅದು ಊರ ಮಕ್ಕಳಿಗೆ ಗೊತ್ತು. ಆ ಸಿಟ್ಟಿನ ಸೊಗಸು ನೋಡುವುದೆಂದರೆ ಅವರಿಗಿಷ್ಟ. ಆದುದರಿಂದ ರಾಮಯ್ಯನವರು ಎತ್ತ ಸಾಗಲಿ, ಬೀದಿಯ ಎಡದಿಂದ ಬಲದಿಂದ, ಹಿಂದಿಂದ ಮುಂದಿಂದ, 'ಅಜ್ಜಯ್ಯಾ! ಅಜ್ಜಯ್ಯಾ!' ತನ್ನ ಊರುಗೋಲನ್ನು ಎತ್ತಿ ಹಿಡಿದು ರಾಮಯ್ಯನವರು ಆ ಸ್ವರದವನ್ನು ಹಿಡಿಸಿದರೆ, ಅವು ಮಂಗಗಳಂತೆ ಕಿರುಚುತ್ತ ಓಡಿ ಬಿಟ್ಟು, ಮನೆಸೇರುತ್ತವೆ. ಆದರೆ ಬಾಗಿಲ ಎದುರಿಂದ ಓಣಿಯ ತಿರುವಿನಿಂದ ಉಪ್ಪರಿಗೆಯ ಮೇಲಿಂದ ಬಿತ್ತಲಿನ ಕಡೆಯಿಂದ—ಎಲ್ಲಿಂದ ಇಲ್ಲಿಂದ ಎಂದನ್ನಲು ಬರುವುದಿಲ್ಲ—ಎಲ್ಲೆಲ್ಲಿಂದಲೂ 'ಅಜ್ಜಯ್ಯಾ! ಅಜ್ಜಯ್ಯಾ! ಕೂಸು!' 'ಕೂಸೂ' ಎಂದಾಗ ನನಗಾಯಿತು ಇನ್ನೊಬ್ಬರ ಮಾತು: ನಮ್ಮೂರಲ್ಲಿ 'ಹೇಮಿಬಾಟ'ನ ಊರ ದನಗಳು ಬಿದ್ದರು. 'ಕೂಸೂ!' ಎಂದರೆ ತನ್ನನ್ನ ಗೇಲಿಮಾಡುತ್ತಾರೆಂದು ಅವರ ಕೋಪ. ಅದು ಊರಿನ ಮಕ್ಕಳಿಗೆ ಗೊತ್ತಾಯಿತು. ಮತ್ತೆ ಕೇಳಬೇಕೆ? ಅವರು ಹೊರಟಿದ್ದು ಕಾಣುವುದೇ ತಡ, ಎಲ್ಲೆಲ್ಲಿಂದಲೂ 'ಕೂಸು! ಕೂಸು!' ಹಾಗೆಯೇ ರಾಮಯ್ಯನವರ ಪಾಡು. ಮಕ್ಕಳು ಮೊದಮೊದಲು ಅವರನ್ನು 'ಅಜ್ಜಯ್ಯ' ಎಂದಿದ್ದಾಗ ಅವರು ಸಿಟ್ಟಿಗೆ ಏಳದೆ ಸುಮ್ಮಗಿದ್ದುಬಿಟ್ಟಿದ್ದರೆ ಈ ಚಟ ಬೆಳೆತ್ತಲೇ ಇದ್ದಿಲ್ಲ. ಮಕ್ಕಳು ಅವರನ್ನು 'ಅಜ್ಜಯ್ಯ' ಎನ್ನಲು ಕಾರಣವಿತ್ತು. ರಾಮಯ್ಯನವರು ಸಿಟ್ಟಾಗಲು ಕಾರಣವಿತ್ತೆನ್ನಲು ಬರುವುದಿಲ್ಲ.

ಅಜ್ಜನೆನಿಸುವವರನ್ನು ಮಕ್ಕಳು 'ಅಜ್ಜಯ್ಯ' ಎನ್ನುವುದು ಮಾಮೂಲಿನ ಮಾತು. ಮಕ್ಕಳು ಮೊದಮೊದಲು ರಾಮಯ್ಯನವರನ್ನು ಹಾಗೆಂದು ಕರೆದುದು ಆ ಭಾವದಿಂದಲೇ. ಅವರಿಗೆ ವಯಸ್ಸು ಸುಮಾರು ೬೦. ಆ ವಯೋಧರ್ಮದ ಲಕ್ಷಣಗಳು ಅವರ ಅಂಗಾಂಗಗಳಲ್ಲೆಲ್ಲ ತೋರಿ ಬರುತ್ತಿದ್ದುವು. ಎಂದ ಮೇಲೆ ಮಕ್ಕಳು ಅವರನ್ನು 'ಅಜ್ಜಯ್ಯಾ!' ಎನ್ನದಿರು

ವರೇ? ಆದರೆ ರಾಮಯ್ಯನವರಿಗೆ ಅದನ್ನೊಪ್ಪಿಕೊಳ್ಳಲಿಕ್ಕೆ ಮನಸ್ಸಿದ್ದಿಲ್ಲ. ಏಕೆಂದರೆ ಅವರಿಗಿನ್ನೂ ಮದುವೆಯಾಗಬೇಕೆಂದಿತ್ತು. ಈ ವರೆಗೆ ಮದುವೆಯಾಗಿದ್ದಿಲ್ಲವೆಂದಲ್ಲ. ಆಗಿದ್ದ ಮೂರೂ ಕೈತಪ್ಪಿಹೋಗಿದ್ದುವು! ಈಗ ನಾಲ್ಕನೆಯದಕ್ಕಾಗಿ ಕನ್ಯಾನ್ವೇಷಣವು ಭರದಿಂದ ಸಾಗುತ್ತಿದೆ. ಅದುಕಾರಣ ಬಾಗಿದ ಬೆನ್ನನ್ನು ಕೂಡಿದಷ್ಟು ಮಟ್ಟಿಗೆ ನೆಟ್ಟಗೆಮಾಡಿ ನಡೆಯುತ್ತಾರೆ. ಬಿದ್ದ ಸಾಲುಹಲ್ಲುಗಳ ಜಾಗದಲ್ಲಿ ಕೃತಕ ಹಲ್ಲುಗಳ 'ಸೆಟ್ಟು' ಇದೆ. ಕೂದಲಿಗೆ ಕಪ್ಪುರಂಗು ಬಳಿದಿದೆ. ಮೇಲಾಗಿ ತನಗೆ ವೃದ್ಧಾಪ್ಯವು ಬಂದಿದೆಯೆಂದು ಅವರೆಂದೂ ನಂಬಲಾರರು. ಅದೇನೋ ಒಂದು ಶನಿ. ಕೆಮ್ಮಿನಿಂದ ಕೃಶವಾಗಿದ್ದಾರೆ, ಅಷ್ಟೆ! ಅದು ಬಂತೆಂದರೆ ಪ್ರಚಂಡ ಮಾರುತನೆಬ್ಬಿಸಿದ ಶರಧಿಯ ತರಂಗಮಾಲೆಗಳಂತೆ ಮೇಲುಮೇಲು ಅವರನ್ನಪ್ಪಳಿಸುತ್ತದೆ. ಆದರೆ ಅದನ್ನು ನಿರ್ಮೂಲಗೊಳಿಸಿ ನವಯೌವನವನ್ನು ಹೊಂದುವುದು ದೊಡ್ಡದಲ್ಲವೆಂದು ಅವರ ಗ್ರಹಿಕೆ: ಬೇಕಾದಷ್ಟು ದುಡ್ಡಿದೆ, ವೈದ್ಯರಿದ್ದಾರೆ; ಅವರಿಂದಾಗದಿದ್ದರೆ, ಪತ್ರಿಕೆಗಳ ಜಾಹಿರಾತಿನಿಂದ ಪ್ರಸಿದ್ಧಿ ಪಡೆದ ಔಷಧಗಳಿವೆ. ತಾರುಣ್ಯವನ್ನು ಬರಿಸುವ ಗ್ಯಾರಂಟೀಯಿರುವ ಮದ್ದುಗಳೆ ಅವೆಲ್ಲ! ತರಿಸಿಕೊಂಡರಾಯಿತು; ನಿಸ್ಸಂದೇಹವಾಗಿ ಬಂದೇ ಬಿಡುತ್ತೆ ಯೌವನ! ಈ ವಿಷಯದಲ್ಲಿ ಗಾಬರಿಯೇ ಇಲ್ಲ ಅವರಿಗೆ. ಆದರೆ ಈಗ ಬರಬೇಕಾದುದು ಆ ಬರುವ ತಾರುಣ್ಯಕ್ಕೆ ಸರಿಹೋಗುವ ತರುಣೀಮಣಿ! ಮೂರಾದ ಮೇಲೆ ಏಕೆಂಬಿರಾ! ಇನ್ನೂ ಅಪುತ್ರರು! 'ಅಪುತ್ರಸ್ಯ ಗತಿರ್ನಾಸ್ತಿ' ಎಂದು ಶಾಸ್ತ್ರೋಕ್ತಿಯಿದೆಯಲ್ಲ! ಅಷ್ಟು ಮಾತ್ರವಲ್ಲ, ಅವರ ಕೈ ಹಿಡಿವವಳಿಗೆ ಏನೂ ಕಡಮೆಯಾಗದು: ಚಿನ್ನಾಭರಣಗಳು ಪೆಟ್ಟಿಗೆ ತುಂಬ ಇವೆ, ಸೀರೆ ರವಕೆಗಳೂ ರಾಶಿರಾಶಿ ಬಿದ್ದಿವೆ. ನಗದು ಹಣವಿದೆ, ಜಮೀನಿದೆ, ಉಪ್ಪರಿಗೆಯ ಮನೆಯಿದೆ! ಇನ್ನೇನು ಬೇಕಯ್ಯಾ ಹುಡುಗಿಗೆ? ರಾಮಯ್ಯನವರ ಆಶಾಕಾಂಕ್ಷೆಗಳು ಹೀಗಿರುವಾಗ ಮಕ್ಕಳೆಲ್ಲ 'ಬಾವಯ್ಯಾ! ಬಾವಯ್ಯಾ!' ಎಂದು ಕೂಗಿ ಕೂಗಿ ಕರೆಯುವ ಬದಲಾಗಿ 'ಅಜ್ಜಯ್ಯಾ! ಅಜ್ಜಯ್ಯಾ' ಎಂದರೆ ಅವರಿಗೆ ಕೆಂಡದಂಥಾ ಸಿಟ್ಟು ಬಾರದಿದ್ದೀತೇ, ನೀವೇ ಹೇಳಿ. 'ಆ ಪರಿಸ್ಥಿತಿಯಲ್ಲಿ ಮಕ್ಕಳು ಕೂಗುವುದೂ, ಸಹಜ, ಅವರಿಗೆ ಸಿಟ್ಟು ಬರುವುದೂ ತಪ್ಪಲ್ಲ, ಆದರೆ ಮುಂದೇನಾಯಿತು ಎನ್ನುವಿರಾ? ಕೇಳಿ:—

ರಾಮಯ್ಯನವರಿಗೆ ಈ ಚಿಕ್ಕ ಪೋರರ ಕಾಟಕ್ಕಿಂತಲೂ ದೊಡ್ಡ ಪಟಿಂಗರ ಉಪಟಳವು ಕಳವಳವನ್ನುಂಟುಮಾಡಿತು. ಇವರೆಲ್ಲಿ ಹೆಣ್ಣಿಗೆ ಕಣ್ಣಿಟ್ಟರೂ ಅಲ್ಲಿ ಅವರ ಕಲ್ಲು ಬೀಳುತ್ತಿತ್ತು. ಈ ಹರೆಯದವರಿಗೆ, ಪಾಪ! ಮುದುಕನ ಸಂಕಷ್ಟ ಒಂದಿಷ್ಟಾದರೂ ಬಗೆಮುಟ್ಟಬೇಡವೇ? ಸುಧಾರಕರ 'ಲೆಕ್ಚರ'ನ್ನು ಕೇಳಿ ತಲೆತಿರುಗಿ ಈ ಚಂದ್ರಪುರದ ಯುವಕರು 'ಕನ್ಯಾ ಸಂರಕ್ಷಣಾ ಸಂಘ' ಎಂಬುದನ್ನೇರ್ಪಡಿಸಿಕೊಂಡಿದ್ದರು. 'ಶಾರದಾ ಬಿಲ್' ಅಂಗೀಕೃತವಾದಂದು ಊರಲ್ಲೆಲ್ಲ ಇವರ ಉಪನ್ಯಾಸಗಳೇನು? ಮೆರವಣಿಗೆಯೇನು! ಜಯಘೋಷವೇನು! ಸಾಲದುದಕ್ಕೆ ರಾಮಯ್ಯನವರಲ್ಲಿಗೆ ಹೋಗಿ ಅವರಿಗೊಂದು 'ಅಲ್ಟಿಮೇಟಮ್' ಕೊಟ್ಟೇ ಬಿಟ್ಟರು! 'ನೀವೆಲ್ಲಾದರೂ ಚಿಕ್ಕ ಹುಡುಗಿಯನ್ನು ಮದುವೆ ಮಾಡಿಕೊಂಡರೆ ಜಾಗ್ರತೆ! ನಮ್ಮ ಸಂಘವಿದೆ! ಹುಡುಗಿಯನ್ನು ನಿಮ್ಮ ಐಶ್ವರ್ಯಕ್ಕೆ ಧಾರೆಯೆರೆಯಿಸಿಕೊಳ್ಳುವ ಬದಲಾಗಿ ನಿಮ್ಮ ಐಶ್ವರ್ಯವನ್ನೇ ನಮ್ಮದರಂತಹ ಸಾರ್ವಜನಿಕಹಿತ ಸಂಘಕ್ಕೆ ದಾನಮಾಡಿಬಿಡಬಾರದೇಕೆ? ಸಂಘವು ನಿಮ್ಮನ್ನು ಚೆನ್ನಾಗಿ ಕಾಪಾಡುವುದು. ನಿಮಗಂತೂ ಮದುವೆಯಾಗಬೇಕೆಂದೇ ಇದ್ದರೆ ನಿಮ್ಮಂಥ ಮುದಿವಿಧುರನಿಗೆ ತಕ್ಕ ಐವತ್ತು ವರುಷದ ವಿಧವೆಯನ್ನು ನಾವು ಗಂಟು ಹಾಕಿಕೊಡುವೆವು. . . . .' ಎಂಬಷ್ಟರಲ್ಲಿ ಕೇಳಿ ಸಹಿಸಲಾರದ ರಾಮಯ್ಯ ನಡನಡುಗುತ್ತ—'ಐವತ್ತು ವರುಷದ ವಿಧವೆಯನ್ನು ನೀವೇ ಕೈಹಿಡಿದು ಸುಧಾರಕರೆಂಬುದನ್ನು ಕಾರ್ಯತಃ ತೋರಿಸಿ! ಸಾಕು ನಿಮ್ಮ ಪರೋಪದೇಶಪಾಂಡಿತ್ಯ! ಕಾಸು ಕೈಯಲ್ಲಿಲ್ಲದ ನಿರುದ್ಯೋಗಿ ಪೋಲಿಗಳಿಗೆಲ್ಲ ಸಂಘ! ಇಂತಹ ಒಂದಲ್ಲ—ನೂರು ಸಂಘಗಳು ಈ ಚಂದ್ರಪುರಿಯಲ್ಲೇಳಲಿ, ಅವುಗಳ ಇದಿರಿದಿರೇ ಹುಡುಗಿಯೊಂದನ್ನು ಮದುವೆಯಾಗದಿದ್ದರೆ ನಾನು ರಾಮಯ್ಯನೇ ಅಲ್ಲ!' ಎಂದು ಗುಡುಗುಡಿಸಿದರು. ಆ ಯುವಕರು ಬಿಟ್ಟುಕೊಡುವವರೇ? 'ಮದುವೆ ಸಾಕೋ ಸಾಕು ಎಂದು ನಿಮ್ಮಿಂದೆನ್ನಿಸದಿದ್ದರೆ ನೀವು ಹೇಳುವಂತೆ ನಾವು ಪೋಲಿಗಳೇ ಸರಿ!' ಎಂದು ಪಂಥ ತೊಟ್ಟೇ ಹಿಂದೆ ಕಾಲಿಟ್ಟರು.

ಆದುದರಿಂದ ರಾಮಯ್ಯನವರು ಹಲವು ಕಡೆಗಳಲ್ಲಿ ಪ್ರಬಲ ಪ್ರಯತ್ನ ಮಾಡಿದರು. ಅನೇಕ ಪುರೋಹಿತ ಭಟ್ಟರ—ಕಡುಸನಾತನಿಗಳ—ಕೈ

ಕಾಲು ಕಟ್ಟಿದರು ದುಡ್ಡು ಕೊಟ್ಟು ಅಷ್ಟಬಿಟ್ಟರು. ಬಹು ದೂರದವರೆಗೂ ಅವರ ಕನ್ಯಾನ್ವೇಷಣಯತ್ನ ಸಾಗಿತು. ಬಹಳ ರಹಸ್ಯವಾಗಿಯೂ ನಡೆಯಿತು ಆದರೆ ಅದೆಲ್ಲ ಆ ಯುವಕಕೂಟಕ್ಕೆ ಹೇಗೋ ಗೊತ್ತಾಗಿ ಸಾಗದೆ ಹೋಯಿತು. ಮಾತ್ರವಲ್ಲ, ಹುಣ್ಣಿನ ಮೇಲೆ ಬರೆಯೆಳೆದಂತೆ ಅವರು ರಾಮಯ್ಯನನ್ನು ನೋಡಿದಾಗೆಲ್ಲ, ‘ಏನ್ರೀ, ನೀವು ಮದುವೆಮಾಡಿಕೊಂಡಿರೆಂದು ಊರೆಲ್ಲ ಸುದ್ದಿ! ಹೌದೇ?’ ಎಂದು ಗೇಲಿ ಮಾಡುವುದು ಬೇರೆ. ಅದುದರಿಂದ ಎಷ್ಟು ಹೆಚ್ಚು ವೆಚ್ಚವಾದರೂ ಆಗಲಿ, ಒಮ್ಮೆಗೆ ಒಂದು ಹುಡುಗಿಯನ್ನು ಮದುವೆಯಾಗಿ ಆ ಪೋಲಿಗಳ ಮೂಗು ಮುರಿಯಬೇಕೆಂಬ ಛಲವು ರಾಮಯ್ಯನವರಲ್ಲಿ ದಿನಗಳೆದಂತೆ ಪ್ರಬಲವಾಯಿತು.

* * * *

ಒಂದು ದಿನ ರಾಮಯ್ಯನವರು ತನಗೆ ವಕ್ಕರಿಸಿದ ಶನಿ ತೊಲಗಿ ಹೋಗುವ ಕಾಲ ಬಂತೆಂದು ಹಿಗ್ಗಿದರು. ಏಕೆಂದರೆ ಆ ದಿನ ಸಾಯಂಕಾಲ ರುದ್ರಪುರದ ಯಾವುದೋ ಒಂದು ಶಿವಾಲಯದ ಜೀರ್ಣೋದ್ಧಾರಕ್ಕಾಗಿ ಧನಸಂಗ್ರಹ ಮಾಡುತ್ತ ಊರೂರು ತಿರುಗುತ್ತ ಒಬ್ಬ ಬ್ರಾಹ್ಮಣನು ಅವರ ಮನೆಗೆ ಬಂದನು. ಊಟೋಪಚಾರಗಳಾದ ತರುವಾಯ ರಾಮಯ್ಯನವರು ಅತಿಥಿಯೊಡನೆ ತನ್ನ ಮನಸ್ಸಿನ ಬಯಕೆಯನ್ನು ಹೇಳಿಕೊಂಡರು. ‘ಆ ಶಿವನು ನನ್ನ ಮನೋಭೀಷ್ಟ ನಡೆಸಿಕೊಟ್ಟರೆ, ನಾನೊಬ್ಬನೇ ಆ ಜೀರ್ಣೋದ್ಧಾರಕಾರ್ಯವನ್ನು ನೆರವೇರಿಸುವೆನು’ ಎಂದು ಹರಕೆ ಹೊತ್ತರು. ಬ್ರಾಹ್ಮಣನ ಮುಖವರಳಿತು. ‘ಹಾಗಾದರೆ ಆ ಶಿವನೇ ನನ್ನನ್ನು ತಮ್ಮ ಬಳಿಗೆ ಕಳುಹಿಸಿರಬೇಕು! ಆ ಶಿವಾಲಯದ ಅರ್ಚಕರಲ್ಲಿ ಒಂದು ಹೆಣ್ಣಿದೆ—ಅವರ ಸೋದರ ಸೊಸೆ. ತಂದೆತಾಯಿಗಳ್ಯಾರೂ ಇಲ್ಲ. ಅವರ ಕುತ್ತಿಗೆಗೆ ಕೊರಡಾಗಿದ್ದಾಳೆ; ಪ್ರಾಯ ತುಂಬಿದೆ. ಲಿಂಬೆಯ ಹಣ್ಣಿನಂಥ ಬಣ್ಣ ಆ ಹುಡುಗಿಯದು! ರೂಪದಲ್ಲಿ ರತಿ .......’ ಎಂಬಷ್ಟರಲ್ಲಿ ರಾಮಯ್ಯನವರ ಮೋರೆ ಅರಳಿ ಅರಳಾಯಿತು!

‘ಸ್ವಾಮಿ, ಬೇಗನೆ ಮಾತಾಡಿ! ಹೇಗಾದರೂ ಮಾಡಿ ಆ ಹುಡುಗಿಯನ್ನು ಈ ಮನೆ ಸೇರಿಸಿ! ಈ ಮನೆಯ ದೀಪ ಉಳಿಸಿ! ನಿಮಗೆ ಏನು ಬೇಕಾದರೂ ......’

‘ಹಾಗಾದರೆ ಕೇಳಿ. ನಾನೇ ಆ ಅರ್ಚಕ! ತಮ್ಮಿಂದ ನನ್ನ ದೇವಸ್ಥಾನ ಉದ್ಧಾರವಾಗಿ ನನಗೊಂದು ಜೀವನದ ಮಾರ್ಗವಾಗುವುದಿದ್ದರೆ...’

‘ಸ್ವಾಮಿ, ಮೆಲ್ಲಗೆ ಮಾತಾಡಿ, ಮೆಲ್ಲಗೆ! ಇಲ್ಲಿ ಗೋಡೆಗಳಿಗೂ ಕಿವಿಯಿದೆ! ಇಲ್ಲೊಂದು ಪ್ರೇಮಿಗಳ ಸಂಘ ಉಂಟು! ಅವರಿಗೆ ಗೊತ್ತಾದರೆ ಹುಡುಗಿಯನ್ನೇ ಹಾರಿಸಿಬಿಟ್ಟಾರು! ಸುಧಾರಕರ ಕೂಟ! . . . . .’

‘ಸತ್ತರಯ್ಯಾ ಅವರು! ನಮ್ಮೂರಿಗೆ ಬಂದು ನನ್ನ ಸೊಸೆಯನ್ನು ಹಾರಿಸುವುದೆ? ಏನೋ ನಿಮ್ಮೂರಲ್ಲಿ ಅವರನ್ನು ಬೆಳೆಯಿಸಿಟ್ಟಿದ್ದೀರಿ! ಕೊಬ್ಬಿ ಹೋಗಿದ್ದಾರೆ! ನಮ್ಮೂರಲ್ಲಾಗಿದ್ದರೆ ನಮ್ಮ ಅಗ್ರಹಾರದ ಸನಾತನಿಗಳು ಅವರ ಟೊಂಕ ಮುರಿದುಹಾಕಿಬಿಡುತ್ತಿದ್ದರು! ಸುಧಾರಕರು! ಧರ್ಮದ್ರೋಹಿಗಳು! ನಾಸ್ತಿಕರು! ನರಕಕ್ಕೆ . . . . . .’

ಅವರೊಳಗಾದ ಗುಪ್ತದ ಮಾತುಕತೆಯನ್ನು ಗಿಡ್ಡಾಗಿ ಹೇಳುವುದಾದರೆ, ಅಂದಿನಿಂದ ಮೂರನೆಯ ದಿನವಾದ ಗುರುವಾರ ಸಾಯಂಕಾಲ ಎಂಟು ಗಂಟೆಯ ರೈಲಿನಲ್ಲಿ ರಾಮಯ್ಯನವರು ಗುಟ್ಟಾಗಿ ರುದ್ರಪುರದ ಸ್ಟೇಶನಿನಲ್ಲಿ ಇಳಿಯಬೇಕು; ಹತ್ತು ಗಂಟೆಗೆ ಮದುವೆ; ಹನ್ನೆರಡು ಗಂಟೆಯ ರೈಲು ಹತ್ತಿ ಬೆಳಗಾಗುವುದರೊಳಗೆ ರಾಮಯ್ಯನವರು ಹುಡುಗಿಯೊಡನೆ ಮನೆಮುಟ್ಟಬೇಕು; ಎಲ್ಲವೂ ರಹಸ್ಯವಾಗಿ ಶೀಘ್ರವಾಗಿ ನಡೆಯಬೇಕೆಂದೇ ರಾಮಯ್ಯನವರ ಹಟ. ಹಾಗೇನೂ ಬೆದರಬೇಕಾಗಿಲ್ಲವೆಂದೂ ತಾನು ಬಡವನಾದರೂ ತನ್ನಲ್ಲಿಗೆ ರಾಯರು ಬ್ರಾಹ್ಮಣನಂತೆ ಬಂದು ನಾಲ್ಕು ದಿವಸದ ಮದುವೆಯನ್ನು ಶಾಸ್ತ್ರೋಕ್ತವಾಗಿ ನಡೆಯಿಸಿಕೊಂಡು ಹೋಗಬೇಕೆಂದೂ ಬ್ರಾಹ್ಮಣನ ಅಗ್ರಹಾರಾರ್ಚಕ ವಿನಂತಿ. ಅದಕೆ ಬಾಗಿಲಿಗೊಂದೇ ಸ್ವರವೆಂಬಂತೆ ರಾಮಯ್ಯನವರು ಹಿಡಿದ ಹಟ ಬಿಡಲೊಲ್ಲರು. ಮಾತ್ರವಲ್ಲ, ತಾನು ಹೇಳಿದಂತೆ ಶೀಘ್ರವಾಗಿ ಹುಡುಗಿಯನ್ನು ಮದುವೆಮಾಡಿಸಿ ಕಳುಹಿಸಿಕೊಡುವುದಾದರೆ, ಅಂದೇ ಅಲ್ಲಿ ಜೀರ್ಣೋದ್ಧಾರದ ಕಾರ್ಯಕ್ಕೆ ಮುಂಗಡವಾಗಿ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ಬರುವುದಾಗಿ ಬ್ರಾಹ್ಮಣನಿಗೆ ಆಸೆ ಹುಟ್ಟಿಸಿ ತನ್ನ ದಾರಿಗೆ ತಂದುಬಿಟ್ಟರು. ರುದ್ರಪುರವು ಅಷ್ಟೊಂದು ದೂರವಿಲ್ಲ—ಚಂದ್ರಪುರದಿಂದ ಆರು ತಾಸಿನ ರೈಲುಪ್ರಯಾಣದೊಳಗೆ.

ಶುಕ್ರವಾರದ ದಿನ ಬೆಳಗ್ಗೆ ಎಂಟೊಂಬತ್ತು ತಾಸಿನೊಳಗೆ ಊರ ಲ್ಲೆಲ್ಲ ಸುದ್ದಿ—ರಾಮಯ್ಯನವರ ಕೈ ನನೆಯಿತೆಂದು! ಮದುಮಗಳನ್ನು ನೋಡುವುದಕ್ಕಾಗಿ ಊರು ಊರೇ ಅಲ್ಲಿ ಕೂಡಿತು. ಮುದುಕನ ಹೆಂಡತಿಯನ್ನು ನೋಡುವುದರಲ್ಲಿ ಮಂದಿಗಷ್ಟೊಂದು ಕುತೂಹಲ. ಬೆಳ ಗಿನ ಮನೆಗೆಲಸವನ್ನಲ್ಲೇ ಬಿಟ್ಟು ಓಡಿದರು ಹೆಂಗಸರು; ಹೊಲದತ್ತ ಹೊರಟ ಗಂಡಸರು ಸುದ್ದಿ ಕೇಳಿ ರಾಮಯ್ಯನಲ್ಲಿಗೆ ನಡೆದರು. ಶಾಲೆಗೆ ಹೊತ್ತಾಗು ವುದೆಂದೆಣಿಸದೆ ಬಾಲಕಬಾಲಕಿಯರೂ ಸಾಗಿದರು ಆ ಕಡೆಗೆ. ರಾಮಯ್ಯ ನವರಿಗೂ ಊರೆಲ್ಲ ಬರಬೇಕೆಂದಿತ್ತು; ತನ್ನ ಪರಾಕ್ರಮವನ್ನು ತೋರ ಬೇಕೆಂದಿತ್ತು; ಆ ಪೋಲಿಗಳ ಕೂಟವನ್ನು ಜರೆಯಬೇಕೆಂದಿತ್ತು. 'ಶಾರದಾ ಬಿಲ್ಲು! ಅವರ ಎದೆಗೆ ಬಿಟ್ಟುಕೊಳ್ಳಲಿ! ಹುಡುಗಿಗೆ ೧೫'ವರುಷ ದಾಟಿದೆ; ೧೬-೧೭ ಎಂದರೂ ನೀವೇನೋ ಒಪ್ಪುತಿರಿ; ಹಾಗಿಲ್ಲವೆ ಆ ತುಂಬಿದ ಮೈಯೊಡ್ಡು? ನಾನು ಮದುವೆಯಾಗಲು ನಿಶ್ಚೈಸಿದ ಹುಡುಗಿಯನ್ನು ಹಾರಿ ಸಿಯಾದರೂ ಮದುವೆ ತಪ್ಪಿಸುತ್ತಾರಂತೆ! ಇನ್ನು ಬರಲಿ ತಪ್ಪಿಸುವವರು! ಹಾರಿಸಲಿ ನೋಡೋಣ! ಕ್ರಿಮಿನಾಲ್, ಲೋಕಪ್ಪ್! ಹಾರಿಸುವುದ ಮೈದಾನಿಗೆ ಹೋಗಿ ಗಾಳಿಪಟ ಹಾರಿಸಲಿ ಆ ನಿರುದ್ಯೋಗಿ ಪೋಲಿಗಳು!' ಎಂದೆಲ್ಲ ಬಂದವರೊಡನೆ ರಾಮಯ್ಯನವರು ಆಟೋಪದಿಂದ ಮಾತಾಡು ತ್ತಿರಲು ಆ ಕೂಟದ ರಂಗ ಬಂದ, ಗೋಪ ಬಂದ, ಅವರ ಹಿಂದೆ ಶ್ಯಾಮು, ಭೀಮು, ರಾಮು, ವೆಂಕ್ಯ ಇತ್ಯಾದಿ ಕೂಟಕೂಟವೇ ಬಂದಂತಾಯಿತು. 'ಏನ್ರೀ, ರಾಮಯ್ಯನೋರೇ, ಕಡೆಗೂ ನೀವೇ ಗೆದ್ದುಬಿಟ್ಟರಲ್ಲಾ! ಎಂಥಾ ಹರೆಯದ ಹುಡುಗಿಯನ್ನೇ ಕೈಹಿಡಿದುಬಿಟ್ಟರಿ!' ಎಂದ ರಾಮು.

'ಅಲ್ಲ ಮತ್ತೆ! ನಿಮ್ಮಂಥ ಪೋಲೀ ಹುಡುಗರ ಬೊಗಳಿಕೆಗೆ ಹೆದರಿ ಸುಮ್ಮಗೆ ಕೂತುಬಿಡುತ್ತೇನೆಂತ ತಿಳಿದ್ರ್ಯೋ ನೀವೆಲ್ಲ?' ಎನ್ನುತ್ತ ರಾಮಯ್ಯ ನವರು ಬಗ್ಗಿದ ಬೆನ್ನು ನೆಟ್ಟಗೆ ಮಾಡಿ ಇಲ್ಲದ ಮೀಸೆಯ ಕಡೆಗೆ ಬೆರಳು ಏರಿಸಿ 'ಇನ್ನೇನಾದರೂ ಪೋಕಾಟಿಗೆ ಎಬ್ಬಿಸಿದಿರೆಂದರೆ ಕ್ರಿಮಿನಾಲ್! ನಿಮ ಗೆಲ್ಲ ಲೋಕಪ್ಪ್! ಜಾಗ್ರತೆ!' ಎಂದು ಎಚ್ಚರಿಸಿದರು.

ಆದರೆ ಭೀಮನು, ನೋಡಿದಿಯಾ, ಶ್ಯಾಮಾ, ರಾಮಯ್ಯನವರ ಹೆಂಡತಿ ನಾಟಕದ ಪಾರ್ಟಿನಂತೆ ಎಷ್ಟು ಮುದ್ದುಮುದ್ದಾಗಿ ಕಾಣುತ್ತಾಳೆ!'

ಎನ್ನುತ್ತ ಮುಂದುರಿವದು ಮದುಮಗಳ ಸೆರಗಿಗೇ ಕೈಕೊಟ್ಟ! ಮುದುಕನು ತನ್ನ ದೊಣ್ಣೆಯ ಕಡೆಗೆ ಕೈಚಾಚಿದ. ನೆರೆದವರು ಭೀಮನನ್ನು ತಡೆಯಲು ಮುಂದಾದರು. ಮದುಮಗಳು ಬಿಕ್ಕಿ ಬಿಕ್ಕಿ ಅಳುತ್ತ 'ಮುದುಕನ ಹೆಂಡತಿಯಾಗಿ ಸಿಕ್ಕವರಿಂದ ಸೆರಗಿಗೆ ಕೈಯಿಕ್ಕಿಸಿಕೊಳ್ಳುವ ಈ ದುಃಖ ಬೇಡಾ!' ಎಂದು ಮೊರೆಯಿಡುತ್ತಿದ್ದಂತೆಯೇ ಭೀಮನು ಸೆರಗನ್ನು ಎಳೆದುಹಾಕಿ ಶೀರೆಯನ್ನು ಬಿಚ್ಚುತ್ತಿದಾನೆ! ಅಯ್ಯೋ! ಏನನ್ಯಾಯ! ಏನನ್ಯಾಯ! ಎಂದು ಅಲ್ಲಿದ್ದವರೆಂದಂತೆ ನೀವೂ ಹೇಳುವಿರಾ? ಅನ್ಯಾಯವೆಲ್ಲಿಂದ ಬಂತು? ನೋಡಿ, ಶೀರೆಯು ಭೀಮನ ಕೈಯಲ್ಲಿದೆ! ತಾಲೀಮು ಉಡುಗೆಯಿಂದೊಪ್ಪುವ ಹುಡುಗನಾಗಿ ನಿಂತಿದ್ದಾನೆ—ಆ ಮದುಮಗಳು! ಕೈಚಪ್ಪಾಳೆಯ ಹೊಡೆತವೇ ಹೊಡೆತ. ಕೆಲವರು ಕಿಬ್ಬದಿ ಹಿಡಕೊಂಡು ನಗುತ್ತಿದ್ದಾರೆ! ಕೆಲವರು ತೆರೆದ ಕಣ್ಣು ಬಾಯಿ ಮುಚ್ಚದೆ ನೋಡುತ್ತಿದ್ದಾರೆ! 'ರಾಮಯ್ಯನೋರೇ, ಈ ಹುಡುಗನಿಗೆ ಶೀರೆ ಉಡಿಸಿ ಕುಳ್ಳಿರಿಸಿಕೊಂಡು ನಮಗೆಲ್ಲ ಇಷ್ಟು ಗಿಲೀಟು ಹಚ್ಚಿದಿರಿ! ಇನ್ನು ಇವನನ್ನೇ ದತ್ತ ಸ್ವೀಕಾರಮಾಡಿಕೊಂಡು ಬಿಡಿ! ನಮ್ಮ ಸಂಘವು ಉದ್ಧಾರವಾಗುತ್ತೆ'. ಎಂದು ನಗುತ್ತಿದ್ದಾನೆ ಭೀಮ. 'ನಿಮ್ಮ ಸಂಘ ಹಾಳಾಗಿ ಹೋಗಲಿ!' ಎನ್ನುತ್ತ ನೆಲಕ್ಕೆ ಕೈಹೊಡೆಯುತ್ತಿದ್ದಾನೆ ಮುದುಕ. ಕೂಟದವರು ನಗುತ್ತ ಹೋಗುತ್ತಿದ್ದಾರೆ!

# ದೇವಸ್ಥಾನ ಪ್ರವೇಶ

ಏಡು ಬೈಲಲ್ಲಿ ಒಮ್ಮೆಂದೊಮ್ಮೆ ದೊಡ್ಡ ಬೊಬ್ಬೆ ಎದ್ದಿತು. 'ಪಿಜಿನ ಪೂಜಾರಿ ಬಿದ್ದ! ಮರದಿಂದ ಬಿದ್ದ!' ಎಂದು. ಉಳುತ್ತಿದ್ದ ಬೊಗ್ಗು ಕೋಣಗಳನ್ನು ನಿಲ್ಲಿಸದೆ ಓಡಿದ; ನೀರು ಮೊಗೆಯುತ್ತಿದ್ದ ಚಾರು ಮುಳುಗಿಸಿದ ಮರಿಗೆಯನ್ನು ಅಲ್ಲೇ ಬಿಟ್ಟೋಡಿದ; ಗದ್ದೆಯ ಅಂಚಿನಲ್ಲಿ ಹುಲ್ಲು ಕೆರೆಯುತ್ತಿದ್ದ ರಂಗು ಕೈಯಲ್ಲಿದ್ದ ಮುಷ್ಟಿ ಹುಲ್ಲನ್ನು ಹಿಡಿದುಕೊಂಡೇ ಹಾರಿದಳು. ಹೀಗೆ ಬೈಲಿನ ನಾಲ್ಕು ಕಡೆಗಳಿಂದಲೂ ಜನರು ಓಡುತ್ತಿದ್ದರು. ಧಾನ್ಯದ ಗದ್ದೆಗೆ ಇಳಿದು, ಬಿತ್ತಿದ ಗದ್ದೆಯನ್ನು ತುಳಿದು, ಕಬ್ಬಿನ ಏರಿಯನ್ನು ಜಿಗಿದು, ನೇರವಾಗಿ ಪಿಜಿನ ಪೂಜಾರಿಯ ಮನೆಯೊಂದಿನ ಕಡೆಗೆ ಧಾವಿಸುತ್ತಿದ್ದರು ಬೈಲಿನ ಜನರೆಲ್ಲ. ಮುದಿ ಉಮ್ಮಕ್ಕ ಕೆತ್ತಿಯೂ ಊರ ಗೋಲು ಊರಿಕೊಂಡು ತನ್ನ ಅಂಗಳದ ತುದಿಗೆ ಬಂದು ಓಡುವವರನ್ನು ಕರೆದು, 'ಯಾರಪ್ಪಾ ಬಿದ್ದುದು? ಪಿಜಿನನೆ? ಹೋಗಿಯಪ್ಪಾ ಬೇಗ, ಗಡಿಸುದ್ದಿ ಹಾಕಿ' ಎಂದು ಕೂಗಿದವನ್ನು ಕೂಗಿ ಹೇಳಿದಳು. 'ಅಯ್ಯೋ, ಪಿಜಿನಾ, ಅವರು ತಕ್ಕೊಂಡು ಮರಕ್ಕೇರಬೇಡಾ ಎಂದು ಹೇಳಲಿಲ್ಲವೇ ನಾನು ಎಷ್ಟೋ ಸಲ? ಒಂದೊಮ್ಮೆ ಬಿದ್ದೂ ಬುದ್ಧಿ ಬಾರದೆ ಹೋಯಿತೇ ನಿನಗೆ?' ಎಂದು ನಿಟ್ಟುಸಿರು ಬಿಡುತ್ತಾ ಏನು ಸುದ್ದಿ ಬರುವುದೋ ಎಂದು ಅಲ್ಲೇ ಅಂಗಳದ ತುದಿಯಲ್ಲಿ ಕಾದು ಕುಳಿತಳು; ಕುಳಿತು ಕಾದಳು.

ಪಿಜಿನ ಪೂಜಾರಿಯನ್ನು ಎತ್ತಿಕೊಂಡು ಹೋಗಿ ಚಾವಡಿಯಲ್ಲಿ ಮಲಗಿಸಿದರು. ಅವನ ಪಕ್ಕೆಲುಬು ಮುರಿದಿತ್ತು. ತಲೆಗೆ ಪೆಟ್ಟಾಗಿತ್ತು; ನೆರೆದ ನೂರಾರು ಮಂದಿ ನಾನಾ ಮದ್ದು ಹೇಳಿದರು. ಸಿಕ್ಕಿದ ಏನೇನೋ ಮದ್ದು ಹಾಕಿ ಕಟ್ಟಿದರು. 'ಏನೋ ಪ್ರಾಣ ನಿಲ್ಲುವುದೆ ಹೀಗೆ ಬೀಳುತ್ತದೆಂದವರೇನು? ಕೋಳಿ ಸುಳಿಸುವ' ಎಂದರು ಹಲವರು. ಪಿಜಿನನು ಕ್ಷೀಣ ಸ್ವರದಿಂದ ತನ್ನ ಮಗನನ್ನು ಕರೆದನು; 'ಚೀಂಕ್ರಾ, ನನ್ನನ್ನು ನೋಡು; ಆಣೆ ಇಡು ಹೆಂಡ ಕುಡಿಯುವುದಿಲ್ಲ ಎಂದು, ಸ್ಥಾನದ ಆಣೆಯಿದು!' ಎಂದನು. ಚೀಂಕ್ರನು ಪ್ರತಿಜ್ಞೆ ಮಾಡಿದ; ತಂದೆಯು ತೀರಿಕೊಂಡ.

ಚೀಂಕ್ರನು ತಂದೆಯ ನುಡಿಯಂತೆ ನಡೆದನು. ಮೂರ್ತಿಯನ್ನು ಬಿಡಲಿಲ್ಲ; ಆದರೆ ಹೆಂಡ ಕುಡಿಯಲಿಲ್ಲ. ಚಿಕ್ಕ ಗುತ್ತಿಗೆಯನ್ನು ವಹಿಸಿಕೊಂಡು ಒಂದು ದಾರಿಗೆ ಬರುವಂತಿದ್ದ. ಆದರೆ ಮಾಡುವುದೇನು? ಪಿಜಿನನು ಸತ್ತು ನಾಲ್ಕು ವರ್ಷಗಳಾಗಿಲ್ಲ; ನಿರಪರಾಧಿ ಚೀಂಕ್ರನು ಅಬ್ಕಾರಿ ಮೊಕದ್ದಮೆಯೊಂದರ ತಿಕ್ಕಿನಲ್ಲಿ ಸಿಕ್ಕಿಬಿದ್ದು ಆರು ತಿಂಗಳು ಜೈಲನ್ನು ಸೇರಿದ. ಹಿಂತಿರುಗಿ ಬರುವಷ್ಟರಲ್ಲಿ ಅವನ ತಾಯಿಯು ತೀರಿಕೊಂಡಿದ್ದಳು. ಇದ್ದ ಮನೆ ಈಗ ಗುತ್ತಿಗೆಯ ಹಣಕ್ಕೆ ಏಲಂ ಆಗಿ ಹೋಗಿತ್ತು! ಇದನ್ನೆಲ್ಲಾ ಕಂಡು ಚೀಂಕ್ರನಿಗೆ ತಡೆಯಲಾರದ ದುಃಖವಾಯಿತು. ಸ್ವಲ್ಪ ಸಮಯ ಅಲ್ಲಿ ಇಲ್ಲಿ ತನ್ನವರೆಂಬವರಲ್ಲೆಲ್ಲಾ ಅಲೆದಲೆದು ಕೊನೆಗೆಲ್ಲೊ ಮಾಯವಾದ.

* * * * *

ಅಂದಿನಿಂದ ಇಂದಿಗೆ ಇಪ್ಪತ್ತು ವರುಷಗಳು ದಾರಿ ಹೋಗಿವೆ! ನೋಡಿರಿ, ಚೀಂಕ್ರನು ತಿರುಗಿ ಊರಿಗೆ ಬಂದಿದ್ದಾನೆ. ಈಗ ಚೀಂಕ್ರನ ರೀತಿಯೇ ಬೇರೆ. ತಾನು ಚೀಂಕ್ರನೆಂದು ಹೇಳಿಕೊಳ್ಳದಿರುತ್ತಿದ್ದರೆ ಅವನ್ಯಾರೋ ಮೇಲು ಜಾತಿಯ ದೊಡ್ಡ ಮನುಷ್ಯನೆಂದು ಆ ಹಳ್ಳಿಯವರೆಲ್ಲ ಅವನೊಡನೆ ಬೆರೆಯುತ್ತಿದ್ದರೋ ಏನೋ! ಹಾಗಿತ್ತು ಅವನ ನಡೆ ನುಡಿ ವೇಷ! ಈಗ ಅವನಿಗೆ ಹೆಂಡತಿ, ಎರಡು ಗಂಡು ಮಕ್ಕಳೂ ಇವೆ. ಹೇರಳ ಹಣವನ್ನು ಸಂಪಾದಿಸಿಕೊಂಡು ಬಂದಿದ್ದನು. ಊರು ಬಿಟ್ಟವನು ದೂರದ ಸಂಬಂಧಿಕನೊಬ್ಬನಿದ್ದ ರಂಗೂನಿಗೆ ಅವನೊಡನೆ ಹೋಗಿದ್ದನಂತೆ. ಅಲ್ಲಿಂದು ಕಾಮಗಾರಿಕೆಯಲ್ಲಿದ್ದು ದುಡ್ಡು ಗಂಟುಕಟ್ಟಿಕೊಂಡು ಬಂದಿದ್ದನಂತೆ.

ಊರಿಗೆ ಬಂದ ಚೀಂಕ್ರನು ಅದೇ ತನ್ನ ಹಿರಿಯರ ಮನೆ ಜಾಗವನ್ನು ಕೊಂಡುಕೊಂಡ. ದೊಡ್ಡ ಮಹಡಿಯ ಮನೆಯನ್ನು ಕಟ್ಟಿಸಿದ; ಆಸ್ತಿ ಪಾಸ್ತಿ ಮಾಡಿದ. ಈಗ ಚೀಂಕ್ರನು ಊರಲ್ಲೊಬ್ಬ ದೊಡ್ಡ ಮನುಷ್ಯ. ಅವನ ಹಣ, ಅವನ ಸಹಾಯ, ಮೇಲು ಜಾತಿಯವರಿಗೂ ಬೇಕು; ಅವಕ್ಕೆಲ್ಲಾ ಅವನು ಹತ್ತಿರದವ. ಆದರೆ ಹತ್ತು ಕೂಡಿದಲ್ಲಿ ಅವನು ದೂರದವ! ಅನೇಕರಲ್ಲಾಗುವ ಮದುವೆಮುಂಜಿಗಳಿಗೆ ಸಾಲ ಕೊಡಬೇಕು

ಚೇಂಕ್ರಪೂಜಾರಿ. ಊರಲ್ಲಿಯ ವರಾಡ ವಂತಿಗೆಯಲ್ಲಿ ಚೇಂಕ್ರಪೂಜಾರಿಯ ಅಂಕೆ ದೊಡ್ಡದು. ಆದರೆ ಅಂತಹ ಕಾರ್ಯಕಲಾಪಗಳಲ್ಲಿ ಮಾತ್ರ ಚೇಂಕ್ರಪೂಜಾರಿಯು ದೂರದವ! ಚಪ್ಪರದೊಳಗೆ ತಲೆ ಹಾಕಲಿಕ್ಕೂ ಅಯೋಗ್ಯ! ಅಷ್ಟೇಕೆ? ಆ ಹಳ್ಳಿಯಲ್ಲಿ ಎಲ್ಲರಿಗಿಂತ ಹೆಚ್ಚು ತೀರ್ವೆ ತೆರುವ ದೊಡ್ಡ ವರ್ಗದಾರ ಚೇಂಕ್ರಪೂಜಾರಿ; ಆದರೆ ಬ್ರಾಹ್ಮಣ ಪಟೇಲರಲ್ಲಿ ಸರಕಾರ ಹಣ ತೆರಲಿಕ್ಕೆ ಹೋದಾಗ ಅವನು ನಿಂತು ಕಾಯಬೇಕು ಹೊರಗಿನ ಅಂಗಳದಲ್ಲಿ! ಆದರೆ ಚೇಂಕ್ರನು ಇದನ್ನೆಲ್ಲಾ ಸಹಿಸಿಕೊಂಡನು. ಊರ ಕಟ್ಟಳೆಯೆಂದು ತಲೆ ಬಗ್ಗಿಸಿದನು. ಸಂದು ಬಂದ ರೂಢಿಯೆಂದು ಸುಮ್ಮಗಿದ್ದನು.

ಒಂದು ದಿನ ಚೇಂಕ್ರನ ಹೆಂಡತಿಯು ಊರ ಜಾತ್ರೆಯ ಸಂತೆಗೆ ಬಳೆಯಿಡಿಸಿಕೊಳ್ಳಲು ಹೋಗಿದ್ದಳು. ಗಾಳಿಗೆ ಅವಳ ಸೆರಗು ಹಾರಿತು; ಅಲ್ಲೆ ಬಳೆಯಿಡಿಸಿಕೊಳ್ಳುತ್ತಿದ್ದ ಮೇಲು ಜಾತಿಯವಳೊಬ್ಬಳ ಮೈಗೆ ತಾಗಿತು! ಕೂಡಲೆ ಗದ್ದಲವೆದ್ದಿತು. ಮೇಲು ಜಾತಿಯ ಹೆಂಗಸರೆಲ್ಲಾ ಒಟ್ಟಾದರು; ಅವಳನ್ನು ಬೈದು ಹಂಗಿಸಿದರು—'ದುಡ್ಡಿನ ಸೊಕ್ಕು! ಹೆಂಡದ ಸೊಕ್ಕು!' ಎಂದರು. ಚೇಂಕ್ರನ ಹೆಂಡತಿ ಮಾನವಂತೆ; ರಂಗೂನಿನಲ್ಲಿ ಗೌರವಸ್ಥರ ಸ್ತ್ರೀಯರೊಂದಿಗೆ ತಿರುಗಿದವಳು. ಈ ಅಪಮಾನವನ್ನು ಸಹಿಸಲಾರದೆ ನೆಟ್ಟಗೆ ಮನೆಗೆ ಬಂದು ನಡೆದ ವಿಚಾರವನ್ನೆಲ್ಲ ತನ್ನ ಗಂಡನೊಡನೆ ಹೇಳಿ ಗೊಳ್ಳೆಂದು ಅತ್ತುಬಿಟ್ಟಳು. 'ನಮಗೆ ಇಷ್ಟು ಸಂಪತ್ತಿದ್ದರೂ, ನಾವಿಷ್ಟು ನಿರ್ಮಲವಾಗಿದ್ದರೂ, ನಾಯಿಗಿಂತ ಕೀಳಾದೆವಲ್ಲಾ!' ಎಂದು ಕಣ್ಣೀರಿಟ್ಟಳು. ಈ ಮಾತು ಚೇಂಕ್ರನ ಎದೆಗೂ ನಾಟಿತು.

ಚೇಂಕ್ರನು ಯೋಚಿಸಿ ಯೋಚಿಸಿ ಇಟ್ಟನು. ಕೊನೆಗೊಂದು ಸಂಕಲ್ಪಮಾಡಿದನು. ತನ್ನ ಇಬ್ಬರು ಮಕ್ಕಳನ್ನು ಮಿಶನ್ ಶಾಲೆಗೆ ಕಳುಹಿಸತೊಡಗಿದ. ತಿಂಗಳು ವರ್ಷಗಳು ಕಳೆದುವು. ಮಕ್ಕಳಿಬ್ಬರೂ ವಿದ್ಯಾಭ್ಯಾಸದಲ್ಲಿ ನಿಪುಣರಾಗುತ್ತ ಹೋದರು. ಹಿರಿಯವನಾದ ಸುಂದರನು ಬಿ. ಎ. ಬಿ. ಎಲ್. ಆಗಿ ಮದ್ರಾಸಿನಲ್ಲೆ ಪ್ರಖ್ಯಾತ ವಕೀಲನೆನಿಸಿಕೊಂಡ. ಚೇಂಕ್ರನ ಊರಿನ ಹಲವು ಮೇಲು ಜಾತಿಯವರೂ ಅವನಲ್ಲಿಗೆ ಹೋಗಿ 'ಅಪ್ಪೀಲು ನಂಬ್ರ'ಗಳನ್ನು ಕೊಟ್ಟು ಬರುತ್ತಿದ್ದರು.

ಚೀಂಕ್ರನ ಕಿರಿಯ ಮಗ ರಾಮುವು ಇಂಗ್ಲೆಂಡಿಗೆ ಹೋಗಿ ಐ. ಸಿ. ಯಸ್. ಪಾಸಾಗಿ ಬಂದನು. ಮದ್ರಾಸಿನಲ್ಲಿ ತನ್ನ ಸಹಪಾಠಿಯಾಗಿದ್ದ ಮಿಶನ್ ತರುಣಿಯೊಬ್ಬಳಲ್ಲಿ ಅವನಿಗೆ ಪ್ರೀತಿ ಬಿತ್ತು. ಕೊನೆಗೆ ಅವಳನ್ನು ಮದುವೆಯಾಗಲೂ ಬೇಕಾಯಿತು. ಪರಿಣಾಮವಾಗಿ ಈಗ ಅವನ ಹೆಸರು ಆರ್. ಜೋರ್ಜ್ ರೋಬರ್ಟ್ಸ್ ಐ. ಸಿ. ಯಸ್. ಕೆಲವು ಸಮಯ ಮಧುರೆಯಲ್ಲಿ ಕಲೆಕ್ಟರನಾಗಿದ್ದು ತನ್ನೂರಾದ ಚಂದ್ರಪುರಿಗೆ ವರ್ಗವಾಗಿ ಬಂದನು. ಚಂದ್ರಪುರಿಯಲ್ಲಿ ಮೊದಲ ಸಲ ಬಂದಾಗ ಆ ಕಲೆಕ್ಟರರನ್ನು ಇದಿರುಗೊಳ್ಳುವ ಸಂಭ್ರಮವೇನು? ಮಠದಿಂದ ಗಗ್ಗರ ಕೋಲು, ಮಕರ ತೋರಣ, ಆನೆ, ಬ್ಯಾಂಡು ಮುಂತಾದ ಬಿರುದಾವಳಿಗಳು ಜೋಡುಕಟ್ಟೆಯಲ್ಲಿ ಎದುರುಗೊಳ್ಳಲು ಸಜ್ಜಾಗಿ ನಿಂತಿದ್ದುವು. ಆಚಾರವಂತರು ವಿಚಾರವಂತರು ಊರ ಪ್ರಮುಖರು ಸಾಹುಕಾರರು ಎಲ್ಲರೂ ಅಲ್ಲಿ ನೆರದಿದ್ದರು.

ಕಲೆಕ್ಟರರು ಬರುವ ಆ ಮೂರು ಗಂಟೆಯ ಸಮಯವಾಯಿತು. ಎಲ್ಲರೂ ಕುತ್ತಿಗೆ ಎತ್ತಿ ಎತ್ತಿ ದಾರಿನೋಡುತ್ತಿದ್ದರು. ಅಷ್ಟರಲ್ಲಿ ಬಂತೇ ಬಂತು ನಾಗಯ್ಯ ಶೆಟ್ರ ಜಟ್ಕಾ ಕಂಪೆನಿಯ ದೊಡ್ಡ ಜಟ್ಕ. ಎದುರಲ್ಲಿ ಕುಳಿತಿದ್ದರು ಕಲೆಕ್ಟರ್ ದೊರೆಗಳು! ದೊರೆಗಳು ಜಟ್ಕದಿಂದ ಇಳಿದರು. ಅಲ್ಲೇ ಸಮೀಪ ತನ್ನ ತಂದೆಯು ಇತ್ತೀಚೆಗೆ ಕೊಂಡುಕೊಂಡಿದ್ದ ಬಂಗಲೆಗೆ ಎಲ್ಲರನ್ನೂ ಕರೆದುಕೊಂಡು ಸಾಗಿದರು. ಆಚಾರವಂತರೂ ವಿಚಾರವಂತರೂ ತಾನು ಮುಂದು ತಾನು ಮುಂದು ಎಂಬು ನಡದೇ ಬಿಟ್ಟರು ಚೀಂಕ್ರಪೂಜಾರಿಯ ಬಂಗ್ಲೆಗೆ!

ಬಂಗ್ಲೆಯ ಮುಂಭಾಗದಲ್ಲಿ ಅಂದವಾದ ದೊಡ್ಡ ಚಪ್ಪರ, ಅದರಲ್ಲಿ ದೊಡ್ಡ ಸಭೆಗೂಡಿತು. ಚೀಂಕ್ರ ಮತ್ತು ತಹಶೀಲ್‌ದಾರರ ನಡುವೆ ಕಲೆಕ್ಟರರು ಸುತ್ತು ತಿರುಗಿ ಸಭಿಕರ ಪರಿಚಯ ಮಾಡಿಕೊಂಡರು. ಅನಂತರ ಚೀಂಕ್ರನು (ಈಗ ಚೀಂಕ್ರಪ್ಪನವರು!) ತನ್ನ ಕೈಯಿಂದಲೇ ಸಭಿಕರಿಗೆಲ್ಲಾ ಪನ್ನೀರು ಚಿಮುಕಿಸಿ ತಾಂಬೂಲ ಫಲ ಪುಷ್ಪ ಕೊಟ್ಟು ಉಪಚರಿಸಿದನು.

ನಾಲ್ಕು ತಿಂಗಳು ಕಳೆದುವು. ಮಠದಲ್ಲಿ ದೊಡ್ಡ ರಥೋತ್ಸವ. ಚಂದ್ರಪುರಿಯಲ್ಲಿ ಅಂತಹ ರಥೋತ್ಸವವಾಗುವುದು ಏಳು ವರ್ಷಕ್ಕೊಮ್ಮೆ. ಭಾರಿ ಜನ ಕೂಡುವುದು. ಅದೊಂದು ದೊಡ್ಡ ಜಾತ್ರೆ. ನೆಮ್ಮದಿ ಭಂಗ

ವಾಗದಂತೆ ನೋಡಿಕೊಳ್ಳುವುದಕ್ಕೆ ಕಲೆಕ್ಟರರು ಬರುವ ಪದ್ಧತಿ. ಎಂದ ಮೇಲೆ ಮಠದಿಂದ ಮುಂಚಿತವಾಗಿ ಆಮಂತ್ರಣ ಹೋಗಿತ್ತು. ಹಿಂದಿನಿಂದ ನಜರು ಕಾಣಿಕೆ ಒಲಿಪೆಯೂ ಸಾಗಿದ್ದವು. ಬೇಸಿಗೆಯ ರಜೆಗೆಂದು ಮದ್ರಾಸಿನಿಂದ ವಕೀಲ್ ಸುಂದರನ್‌ರವರೂ ಅವರ ಪತ್ನಿಯೂ ಬಂದಿದ್ದರು. ಎಲ್ಲರೂ ಕಲೆಕ್ಟರರ (ಚೀಂಕ್ರಪೂಜಾರಿಯರ) ಬಂಗ್ಲೆಯಲ್ಲಿದ್ದರು. ಚೀಂಕ್ರಪ್ಪನವರು ರಥೋತ್ಸವ ನೋಡಲಿಕ್ಕೆ ತನ್ನ ಮಗಂದಿರಿಬ್ಬರೊಡನೆ ಹೊರಟರು. ಹೆಂಗಸರು ಹೊರಟರು, ಮಕ್ಕಳು ಹೊರಟರು, ಎಲ್ಲರೂ ಹೊರಟರು! ಕಲೆಕ್ಟರರ ಮನೆಯ ಹೆಂಗಸರೆಂದಾದ ಮೇಲೆ ಅಲ್ಲಿ ಅವರಿಗೆ ಸನ್ಮಾನವೇನು! ರಥದ ಎದುರಲ್ಲಿ ಎಲ್ಲರಿಗೆ ಮುಂದಾಗಿ ಅವರಿಗೆ ನಿಲ್ಲಲು ಮಠದಿಂದ ಜಾಗಮಾಡಿಕೊಡುವ ಸಂಭ್ರಮವೇನು! ಮಠದ ಆಚಾರವಂತರಿಬ್ಬರು 'ಅಮ್ಮಾ, ಅಮ್ಮಾ' ಎಂದು ಅವರ ಬಳಿಯಲ್ಲೇ ನಿಂತು ಎಲ್ಲವನ್ನೂ ವಿವರಿಸಿ ಹೇಳುವ ರೀತಿಯೇನು! ರಥವು ಸುತ್ತು ಬಂದು ಗುತ್ತಿನಲ್ಲಿ ನಿಂತಿತು. ಬಲಿಮೂರ್ತಿ ಒಳಗೆ ಹೋಯಿತು. ಆಗ 'ನಾವೂ ಒಳಗೆ ಹೋಗಿ ನೋಡೋಣವೆ?' ಎಂದಳು ಕಲೆಕ್ಟರರ ಪತ್ನಿ. 'ಅದಕ್ಕೇನು? ಮೊನ್ನೆ ನನಗೆ ಎಲ್ಲ ತೋರಿಸಿದ್ದರು. ನಾನು ಹೋಗಿ ನೋಡಿದ್ದೆ; ಅಲ್ಲೆಲ್ಲ ಬಹಳ ಚಂದ ಉಂಟು. ಬಾ,' ಎಂದು ಮುಂದಾದರು. ತಂದೆಯನ್ನೂ ತಮ್ಮನನ್ನೂ ಬನ್ನಿಯೆಂದರು. ಅಕ್ಕ ಬನ್ನಿ, ಅತ್ತೇ ಬನ್ನಿ, ಎಲ್ಲಾ ಬನ್ನಿ! ಎಂದು ತನ್ನೊಡನಿದ್ದ ಹೆಂಗಸರು ಮಕ್ಕಳನ್ನೆಲ್ಲ ಕರೆದುಕೊಂಡು ಕಲೆಕ್ಟರರ ಪತ್ನಿಯು ಗಂಡಸರನ್ನು ಹಿಂಬಾಲಿಸಿದಳು. ಗಲಭೆಯಿಲ್ಲದೆ ಆಯಿತು ದೇವಸ್ಥಾನಪ್ರವೇಶ!

---

# ದೊಡ್ಡವರ ವಜ್ರ

"ಹಾಕಿದುದು ಅರಮನೆಯ ಅಡಿಗಟ್ಟು; ಕಟ್ಟಿದುದು ಗುಡಿಸಲು! ಹೀಗೇಕಾಯಿತು? ವಿಧಾತನ ಕ್ರೂರತನವೊ, ತಂದೆಯ ಬಡತನವೊ? ವಿಧಿಯನ್ನಲೇ? ವಿಧಿಯು ಉದಾರಿಯು; ಸೃಷ್ಟಿಯಲ್ಲಿ ಮೈಮರುಳುಗೊಳಿಸುತ್ತ, ಬಗೆಗೆ ಆನಂದ ಬೀರುತ್ತ, ಸೊಬಗಿನ ಆಗರಗಳಾಗಿ ಇರುವವುಗಳ ಸಾರವನ್ನೆಲ್ಲ ಹೀರಿ ನನ್ನನ್ನು ರೂಪಿಸಿರುವನು ಆ ವಿಧಿಯು! ಬರೇ ಮೂವತ್ತೈದು ರೂಪಾಯಿಯ ಗುಮಾಸ್ತೆಯ ಪಾಣಿಗ್ರಹಣಕ್ಕಾಗಿದ್ದರೆ, ವಿವಿಧ ವಸ್ತುಗಳ ಸೌಂದರ್ಯಸಾರದ ಎರಕದಿಂದ ಈ ಕೈಯನ್ನು ನಿರ್ಮಿಸುತ್ತಿದ್ದನೆ? ಮುಸುರೆತಿಕ್ಕುವ ಸೆಗಣಿಸಾರಿಸುವ ನೀರುಸೇದುವ ಬಟ್ಟೆಯೊಗೆಯುವ ಬೆರಣಿತಟ್ಟುವ ಕೈಗಳೇ ಇವು? ಬೆಂಕಿಯೂದಿಯೂದಿ ಹೊಗೆತುಂಬಿ ಕೆಂಪೇರಿ ಉರಿಗೊಳ್ಳುವುದಕ್ಕಾಗಿ ಈ ಕಣ್ಣುಗಳೇ? ಮನೆಗೆಲಸದಲ್ಲಿ ತೊಳಲಿ ಬಳಲಿ ಕಂದಿ ಕುಂದುವುದಕ್ಕಾಗಿ ಈ ದೇಹವನ್ನು ತಿದ್ದಿ ಮಿರುಗುಗೊಟ್ಟನೆ ಆ ವಿಧಿಯು? ಇಲ್ಲ, ಇಲ್ಲ; ಹಾಗಾದರೆ ನನ್ನನ್ನು ದಿಕ್ಕುತಪ್ಪಿಸಿ ಕೈಹಿಡಿಸಿದುದು ಯಾವುದು? ತಂದೆಯ ಬಡತನವೇ? ಹೌದು, ತಂದೆಯ ಬಡತನ!" ಇದೀಗ ರಾಮಿಗೆ ಹಲವು ವೇಳೆ ಹೊಳೆದ ವಿಚಾರ.

ರಾಮಿಯು ರಾಮರಾಯನ ಹೆಂಡತಿ; ಆತನು ಚಂದ್ರಪುರ ಮುನ್ಸೀಫ ಕೋರ್ಟಿನ ನೌಕರ; ಅವರ ಮನೆಯು ಆ ಪಟ್ಟಣದ 'ಅಪ್ರಾಮುಖ್ಯ' ಬೀದಿಯೊಂದರಲ್ಲಿ. ಆ ಬೀದಿಯಲ್ಲಿ ಮನೆಗಳಿಗೆ ಕಡಿಮೆಯಿದ್ದಿಲ್ಲ; ಜನಸಂಚಾರಕ್ಕೆ ಬಿಡುವಿದ್ದಿಲ್ಲ. 'ಮೋಟರ್ ಬಸ್ಸು'ಗಳಿಗೂ ಅವುಗಳ ಸಹೋದರ ವರ್ಗದ 'ಕಾರು ಲೋರಿ'ಗಳಿಗೂ ಇನ್ನು ಇವುಗಳ ವ್ಯವಸಾಯ ಬಂಧುಗಳಾದ 'ಸ್ಟೈಕಲ್' ಕುದುರೆಗಾಡಿ ಮುಂತಾದ ಬಹುತರದ ವಾಹನಗಳಿಗೂ ಸಂಚಾರಕ್ಕೆ ನಿಶ್ಚಿತವಾದ ಹಾದಿಯು ಬೇರೆ ಇದ್ದರೂ ಅವುಗಳ ನಿಲ್ದಾಣಕ್ಕೆ ರಾಮರಾಯನ ಬೀದಿಯೇ ಹತ್ತಿರದ ಹಾದಿ; ಆ ಅಡ್ಡದಾರಿಯಲ್ಲಿಯೆ ಅವುಗಳ ಸವಾರಿ; ಹೀಗಿದ್ದೂ ಅದು 'ಅಪ್ರಾಮುಖ್ಯ' ಬೀದಿಯೆ?

ಎಂದು ಆಕ್ಷೇಪಿಸಬಹುದು. ಆದರೆ ಯಾರೇನು ಮಾಡಲಿ? ಚಂದ್ರಪುರದ ಮುನಿಸಿಪಾಲಿಟಿಯ ಬೀದಿಯ ಪಟ್ಟಿಯಲ್ಲಿ ಅದು 'ಅಪ್ರಾಮುಖ್ಯ' ಬೀದಿಗಳ ಸಾಲಿನಲ್ಲಿ ಬಿದ್ದುಹೋಗಿದೆ! ಹಾಗೆ ಬಿದ್ದುಹೋದುದನ್ನು ತಿದ್ದಲಾಗುವುದೆ? ಆದುದರಿಂದ ಮುನಿಸಿಪಾಲಿಟಿಯ ತುಂಬಿದ 'ನೀರಿನ ಲೋರಿ'ಯು ಆ 'ಅಪ್ರಾಮುಖ್ಯ' ಬೀದಿಗಾಗಿ ಬಂದು ತನ್ನನ್ನು ಹಗುರಮಾಡಿಕೊಳ್ಳಲಾರದು. ಆದರೂ ತಾನು ಬರಿದಾಗಿ ಹಿಂತಿರುಗುವುದಕ್ಕೆ ಅದೇ ಹತ್ತಿರದ ದಾರಿ ಎಂಬುದನ್ನು ಅದೂ ಮರೆತಿದ್ದಿಲ್ಲ.

ಇಂತಹ ದೂಳೀಗಲ್ಲಿಯಲ್ಲಿ ರಾಮ ರಾಮಿಯರ ಮೂರು ರೂಪಾಯಿ ಬಾಡಿಗೆಯ ಮನೆ, ಅದರಲ್ಲಿರುವುದು ಎರಡೇ ಕೋಣೆ-ಒಂದು ಅಡಿಗೆಗೆ; ಮತ್ತೊಂದು ಕಾಲಕ್ಷೇಪಕ್ಕೆ; ಹೊಗೆಯದೊಂದು ದೂಳಿಯದೊಂದು ಎಂದರೇ ಇದ್ದದ್ದು ಇದ್ದಂತೆ ಹೇಳಿದಂತಾಗುವುದು. ಆ ಎರಡನೆಯ ಕೋಣೆಯ ಬಾಗಿಲ ಮುಂದಿನ ಎರಡು ಮೆಟ್ಟಲುಗಳನ್ನಿಳಿದರೆ ಮೂರನೆಯ ಹೆಜ್ಜೆಯನ್ನಿಡಬೇಕು ಆ-ಬೀದಿಯಲ್ಲಿಯೆ. ಬಾಗಿಲ ಎಡಕ್ಕೆ ಗೋಡೆಯಲ್ಲಿರುವ ಕಿಟಕಿಯಿಂದ ನೋಡಿದರೆ ಕಾಣುವುದೂ ಆ ಬೀದಿಯೆ. ಆ ಹಾದಿಯಲ್ಲಿ ಬಗೆಬಗೆಯ ವಾಹನಗಳನ್ನೇರಿ ಸಂಚರಿಸುವ ಶ್ರೀಮಂತ ಸ್ತ್ರೀಯರ ವಿಲಾಸವೈಭವಗಳನ್ನು ಕಂಡಾಗಲೆಲ್ಲ ರಾಮಿಯು ತನ್ನ ಪಾಡು ಹೀಗೇಕಾಯಿತು? ಎಂದು ನಿಟ್ಟುಸಿರುಗರೆಯುತ್ತಿದ್ದಳು.

ರಾಮಿಯು ಸುಂದರಿ; ಅವಳಂತಹ ಚಲುವೆಯು ನೋಡಸಿಗುವುದು ದುರ್ಲಭ; ರೂಪವತಿಯರು ಎಂದೆನಿಸಿಕೊಂಡವರ ಅಂದವೆಲ್ಲಿದೆಯೆಂದು ಪರಿಶೀಲಿಸಿದರೆ ಒಬ್ಬಳದು ಮೋರೆಯಲ್ಲಿ, ಮತ್ತೊಬ್ಬಳದು ಮೈಗಟ್ಟಿನ ಸೌಷ್ಠವದಲ್ಲಿ, ಇನ್ನೊಬ್ಬಳದು ಬಿಳಿಗೆಂಪಿನ ಮೈಬಣ್ಣದಲ್ಲಿ, ಮಗುದೊಬ್ಬಳದು ಲಜ್ಜೆಯೇ ಬಲ್ಲ ಬೆಡಗಿನಲ್ಲಿ! ಇನ್ನು ಮುಗುಳ್ನಗುವಿನ ಕಿರುಬಾಯಿಯಿಂದ, ಮಿಂಚುಗಣ್ಣಿನಿಂದ, ಮುಂಗುರುಳ ಹಣೆಯಿಂದ, ನುಣ್ಗಲ್ಲದಿಂದ, ಸುಳಿಗೆನ್ನೆಯ ಮಿರುಗಿಂದ, ಇವುಗಳೊಂದೊಂದರಿಂದಲೇ ಸುಂದರಿಯರೆಂದೆನ್ನಿಸಿಕೊಂಡವರೂ ಇರುವರು. ತೆರೆಯಂತೆ ಬಿದ್ದೇಳುವ ಕೊಂಕುಗೂದಲಸಿರಿಯಿಂದಾಗಲಿ, ಬಡನಡುವಿಂದಾಗಲಿ, ಬೆಡಗಿನ ನಡೆಯಿಂದಾಗಲಿ, ಅಲ್ಲವೇ ದುಂಡುದುಂಡಾದ ಕೈಕಾಲುಗಳಿಂದಲೋ, ಸಿಡಿದರೆ ಕೆನ್ನೀರು

ಮಿಡಿಯಬಹುದೆಂಬ ಭ್ರಮೆಗೊಳಿಸುವ ತುಂಬಿದ ತನುಕಾಂತಿಯಿಂದಲೋ, ಕೊಳಲ ಮೆಲುನುಡಿಯಿಂಪಿನಿಂದಲೋ, ಓರೆನೋಟಕ್ಕೆ ಕಳೆಯೇರಿಸುವ ಹುಬ್ಬಿನ ಹಬ್ಬುಗೆಯಿಂದಲೋ, ಅವುಗಳ ನಡುವಿಂದ ಸರಕ್ಕನೆ ಜಗುಳ್ದು ಜಗ್ಗನೆದ್ದು ನೇರಾಗಿ ಮುಂದರಿದು ನಸುವರಳಿದ ತೆನೆಮೂಗಿಂದಲೋ, ಮನಮೋಹಿನಿಯರಾದವರು ಇರುವರು. ಹೀಗೆ ಹಲವರು ಸೌಂದರ್ಯದ ಒಂದೊಂದು ಲಕ್ಷಣದಿಂದಲೆ ಚೆಲುವೆಯರಾಗಿದ್ದರೆ ನಮ್ಮ ರಾಮಿಯು ಅವೆಲ್ಲವುಗಳ ಯೋಗದಿಂದಾದ ಸರ್ವಾಂಗ ಸುಂದರಿಯು. ಅವಳಲ್ಲಿ ಕೆತ್ತ ಬೇಕಾದುದಾಗಲಿ ಮೆತ್ತುವಂತಹದಾಗಲಿ ಕೇಸಿಪೂಸಿಯೊಪ್ಪೆಗೊಡತಕ್ಕು ದಾಗಲಿ ಯಾವುದೂ ಉಳಿದುಹೋಗಿದ್ದಿಲ್ಲ; ಅವಳು ಚೆಲುವಿನ ರಾಣಿ. ಹಾಗೆಂದು ಅವಳಿಗೆ ತಿಳಿದಿತ್ತು. ಮಾತ್ರವಲ್ಲ, ಚಂದ್ರಪುರದ ಕನ್ಯಾಮಠ (ಕನ್ವೆಂಟ್) ಶಾಲೆಯಲ್ಲಿ ಆರು ವರುಷ ಓದಿದ್ದುದರಿಂದ ಮೃದುಮಧುರವಾಗಿ ಇಂಗ್ಲೀಷು ಮಾತಾಡಲು ಅವಳು ಬೆದರುತ್ತಿದ್ದಿಲ್ಲ. ಅದುಕಾರಣ ಎಂತಹ ಸಿರಿವಂತನಿರಲಿ, ಕುಲವಂತನಿರಲಿ, ಪದವೀಧರನಿರಲಿ, ತಾನು ಆತನ ಮಡದಿ ಯಾಗಿ ನಡೆಯಲು ನಡುಗಬೇಕಾದ್ದಿಲ್ಲವೆಂದೂ ಅವಳಿಗೆ ನಿಶ್ಚಯವಿತ್ತು.

ತನ್ನ ತಂದೆಯು ಧನಿಕನಿರುತ್ತಿದ್ದರೆ, ತನಗಾಗಿ ಹತ್ತಾರು ಸಾವಿರ ರೂಪಾಯಿಗಳನ್ನು ವರದಕ್ಷಿಣೆಯಾಗಿ ಕೊಡಲು ಸಮರ್ಥನಿರುತ್ತಿದ್ದರೆ, ತಾನಿಂದು ಸುಂದರೋದ್ಯಾನದ ನಡುವೆ ಮಂಟಪದಂತೊಪ್ಪುವ ಉಪ್ಪರಿ ಗೆಯ ಮನೆಯಲ್ಲಿ, ವಿವಿಧ ಚಿತ್ರಪಠಗಳಿಂದಲಂಕೃತವಾದ ಕಡೆಗಟ್ಟಿನ ಮೇಲೆ, ಎದುರು ಪುಷ್ಪಪಾತ್ರೆಗಳಿಂದ ಸಿಂಗರಿಸಿದ ದುಂಡು ಮೇಜನ್ನಿಟ್ಟು, ಮೆತ್ತನೆಯ ಸುಂದರಾಸನದಲ್ಲೊರಗಿ, ಮಿರುಮಿರುಗಿ ಮೆರೆಯುತ್ತಿದ್ದೆನಲ್ಲದೆ, ಈ ದೂಳಿನ ಕೋಣೆಯ ದೂಳೊರಸಾಗಿ ಹೊರಳಾಡುತ್ತಿದ್ದೆನೆ? ಎಂಬ ಯೋಚನೆಯು ಕಿಟಕಿಯಿಂದ ರಾಮಿಯು ಬೀದಿಯನ್ನು ನೋಡಿದಾಗ ಹಲವು ಸಲ ಹೊಳೆಯುತ್ತಿತ್ತು. ಏಕೆಂದರೆ, ಅವಳ ಆ ಕನ್ಯಾಮಠದ ಗೆಳತಿ ಯರಲ್ಲನೇಕರು ಅಂದದ ಮೋಟಾರ್‌ಕಾರಿನ ಮೆದುವಾಸಿನಲ್ಲಿ ಕುಳಿತು, ನೆಗ್ಗಿ ಜಗ್ಗಿ ತಲೆಯನ್ನೊಲೆದೊಲೆದು, ಮೈಯನ್ನಲುಗಿಸಿ, ಕುಲುಕಿಸಿ, ಕೊರಳ ಹಾರಗಳನ್ನುಯ್ಯಾಲೆಯಾಡಿಸಿ, ಸೀರೆಯ ಸೆರಗಿಂದ ಗಾಳಿಪಟವಾಡಿಸಿ, ವಿಲಾಸದ ಬಾಳಿನ ಸಿರಿಯನ್ನು ಮೆರೆಸುತ್ತ, ಅದೇ ಬೀದಿಯ ಹಾದಿಯಾಗಿ

ಹಾದುಹೋಗುತ್ತಿದ್ದರು. ಅವರು ಕಿಟಕಿಯ ಎದುರಲ್ಲಿ ಮಿಂಚಿ ಮುಂದೆ ಸಂಚರಿಸಿದರೂ ರಾಮಿಗೆ ಅವರ ಗುರುತಾಗದೆ ಇರುತ್ತಿದ್ದಿಲ್ಲ. ಆಗ ರಾಮಿಯಲ್ಲಿ ತಾನೂ ಹಾಗಾಗಿರುತ್ತಿದ್ದರೆ ಎಂಬೊಂದು ವ್ಯಾಕುಲವು ಬಗೆಯಲ್ಲಿ ಮೂಡಿ ಕ್ಷಣದಲ್ಲಿ ಬಾಡಿ ನಿಟ್ಟುಸಿರೊಡನೆ ಇಳಿದು ಕಂಬನಿಯೊಡನೆ ಅಳಿದು ಹೋಗುತ್ತಿತ್ತು.

ಕುಲವೆಣ್ಣಾದ ರಾಮಿಯು ಬೆಲೆವೆಣ್ಣಿನಂತೆ ಹೀಗೆಲ್ಲ ಯೋಚಿಸಬಹುದೇ ಎಂದು ಆಕ್ಷೇಪಿಸುವಿರೇನು? ರಾಮಿಯ ಕನಸು ನೆನಸುಗಳೆಲ್ಲ ನಿರ್ದೋಷವಾದುವು. ಅವಳಿಗೆ ರಾಮರಾಯನಲ್ಲಿ ಅಸಂತೃಪ್ತಿಯಿದ್ದಿಲ್ಲ; ಅವಳ 'ಇದ್ದರೆ'ಗಳೆಲ್ಲ ರಾಮರಾಯನ ಪತ್ನಿಯಾಗಿದ್ದುಕೊಂಡೇ ಅನುಭವಕ್ಕೆ ಬಂದಿದ್ದರೆ ಎಂದಲ್ಲದೆ ಬೇರೆ ಬಗೆಯಲ್ಲಲ್ಲ. ರಾಮರಾಯನಲ್ಲಿ ಯೌವನವಿದೆ, ರೂಪವಿದೆ, ಪ್ರೇಮವಿದೆ, ಬುದ್ಧಿಯಿದೆ. ಅಂತಹ ಪತಿಯಿಂದೊಡಗೂಡಿದ ತನಗೆ ಸೊಬಗಿನ ಜೀವನದ ಸೊಗಸೂ ದೊರಕಿದ್ದರೆ, ಎಂಬುದೇ ಅವಳ 'ರೆ'ಯ ರಹಸ್ಯ. ಚುಟುಕಿನಿಂದ ಹೇಳಲೆ? ತಾನೂ ಶ್ರೀಮಂತಳಾಗಿ, ಶ್ರೀಮಂತರ ಆಟಕೂಟ ಆಗುಹೋಗುಗಳಲ್ಲಿ ಸೇರಿ, ಬೆರೆದು ಮೆರೆದು, ಸ್ತ್ರೀಪುರುಷರೆನ್ನದೆಲ್ಲರನ್ನೂ ದೂರದಿಂದಲೇ ತನ್ನ ರೂಪಧನದ ಮಿರುಗಿಂದ ಬೆರಗುಗೊಳಿಸಿ, ಆ ಅನುಭವದಿಂದ ಉದ್ಭವಿಸುವ ಅದೊಂದಾನಂದವನ್ನು ಹೊಂದಬೇಕೆನ್ನುವ ಹಂಬಲೊಂದು ಲಗ್ನವಾದ ಮೇಲೆಯೂ ರಾಮಿಯನ್ನು ಬೆಂಬಿಡದೆ ಹಿಂಬಾಲಿಸಿ ಬಂದಿತ್ತು. ಆ ಆಶಾಪಾಶದ ಉರುಲಿಂದ ಕೊರಳನ್ನು ತಪ್ಪಿಸಿಕೊಳ್ಳಲು ಅವಳಿಂದಾಗಿದ್ದಿಲ್ಲ; ಆ ತೃಷೆಯನ್ನೊಮ್ಮೆ ಮನದಣಿಯೆ ನಿವಾರಿಸಿಕೊಳ್ಳುವ ಅನುಕೂಲವೂ ದೊರೆತಿದ್ದಿಲ್ಲ; ಇಷ್ಟೆ ರಾಮಿಯ ಅವ್ಯವಸ್ಥಿತ ಮನಸ್ಸಿನ ರಹಸ್ಯ. ರಾಮರಾಯನಿಗೆ ರಾಮಿಯ ಮನದೊಲವು ತಿಳಿದಿತ್ತು. ಅದಕ್ಕಾಗಿ ಅವನು ಕೃತ್ರಿಮವಾದರೂ, ಪಟ್ಟೆಯ ಬಟ್ಟೆಯಂತಿರುವ ಹೊಳಪಿನ ಉಡುಗೆಗಳನ್ನೇ ಅವಳಿಗೆ ತಂದು ಕೊಡುತ್ತಿದ್ದ. ಚಿನ್ನದೊಡವೆಗಳ ನಡುವೆ ಮಿರುಗುಗೊಟ್ಟೆವುಗಳನ್ನೂ ಬೆರಕೆ ಹಾಕುತ್ತಿದ್ದ. ತಿಂಗಳಿಗೆರಡು—ಮೂರು ಸಲವಾದರೂ ನಾಟಕಗೃಹಕ್ಕೋ ಸಿನಮಾ ಮಂದಿರಕ್ಕೊ ಅವಳನ್ನು ಕರೆದುಕೊಂಡು ಹೋಗುವುದಿತ್ತು. ಆದರೆ ಇಂತಹ ವಿನೋದ ಗೃಹಗಳಲ್ಲಿ

ಸೇರುವ ಸಿರಿವಂತರ ಸಿಂಗಾರಗಳನ್ನು ಕಂಡು ರಾಮಿಯು ಒಮ್ಮೊಮ್ಮೆ ಬೆಪ್ಪಾಗಿ ಅವರನ್ನೆ ದಿಟ್ಟಿಸುತ್ತ, ನಿಟ್ಟಿಸಿರುಗರೆಯುತ್ತ ಬಗೆ ಬಂದಂತೆ ಯೋಚಿಸುತ್ತ, ಕುಳಿತುಬಿಡುತ್ತಿದ್ದಳು. ಒಮ್ಮೊಮ್ಮೆ ಅಲ್ಲಿ ನೆರೆದಿದ್ದ ಸ್ತ್ರೀ ಲೋಕವು ತನ್ನನ್ನೆ ತಿರುತಿರುಗಿ ನೋಡಿ ಬೆರಗುಗೊಳ್ಳುತ್ತಿದೆ ಎಂದು ಅವಳಿಗೆ ಬೋಧೆಯಾದರೆ, ತಾನಿನ್ನೂ ಚೆಲುವಿನ ರಾಣಿಯಾಗಿಯೇ ಇರುವೆನೆಂದು ಹಿರಿಹಿಗ್ಗುತ್ತಿದ್ದಳು. ಅವಳ ಅಂದಿನ ಆನಂದಕ್ಕೆ ಹಿಂದು ಮುಂದಿರುತ್ತಿದ್ದಿಲ್ಲ.

* * * * *

ಚಂದ್ರಪುರದ ಮುನ್ಸೀಫರಲ್ಲಿ ಮದುವೆಯ ಗದ್ದಲವೆದ್ದಿದೆ. ಆ ಮುನ್ಸೀಫರಿಗಿರುವದು ಒಂದೇ ಒಂದು ಮಗಳು. ಇದೀಗ ಆ ಮಗಳ ಮದುವೆ. ಆವಳನ್ನು ಧಾರೆಯೆರೆದು ಕೊಡುವುದು ರಂಗಪುರದ ಜಡ್ಜರ ಮಗನಿಗೆ. ಅವನೀಗ ತಾನ್ನೆ ಐ. ಸೀ. ಯಸ್. ಪರೀಕ್ಷೆಗೊಟ್ಟು ಇಂಗ್ಲಾಂಡಿನಿಂದ ಮರಳಿರುವನು. ಅವನು ಅಲ್ಲಿಂದೊಬ್ಬಳು ಬಿಳಿಗುವರಿಯ ಕರಹಿಡಿದು ಕರೆತಾರದೆ, ತನ್ನವರಿಗೆಲ್ಲ ಕರಕರೆಗೊಳಿಸದೆ, ಊರು ಸೇರಿದುದು ನಮ್ಮ ಮುನ್ಸೀಫಪುತ್ರಿಯ ಪುಣ್ಯವೆಂದು ಕೆಲವರನ್ನುತ್ತಿದ್ದರು. 'ಇಂದಿಲ್ಲದಿದ್ದರೆ ಮುಂದಾದರೂ ಎಂದಾದರೊಂದು ದಿನ ಗೌರಾಂಗಿಯೊಬ್ಬಳು ಅವನ ಅಲ್ಲಿಯ ಅರಸಿಯೆಂದು ಇಲ್ಲಿಗೂ ಅರಸುತ್ತ ಬಂದು ಐ. ಸೀ. ಯಸ್. (I see, yes! ಹೌದು! ಹುಡುಕಿ ಹಿಡಿದೆ!) ಎನ್ನುತ್ತ ಕಿರಿಚಿ, ತನ್ನ ಅರಸಿತನವನ್ನು ಮೆರೆಸಿ, ಅವನ ಮೋರೆಗೆ ಮಸಿಯೆರಚಿ, ಈ ಮದುವೆಯ ಗದ್ದಲಕ್ಕಿಂತಲೂ, ಮಿಗಿಲಾದ ಸುದ್ದಿಯ ಗದ್ದಲವನ್ನು ಎಬ್ಬಿಸದಿದ್ದರೆ!' ಎಂಬ ಮುಮ್ಮಾತಿನ ಗುಜುಗುಜೂ ಇತ್ತು. ಅಂತೂ ಪ್ರಕೃತದ ಗದ್ದಲವು ಮದುವೆಯದೇ. ಮುನ್ಸೀಫರ ಮನೆಯ ಮದುವೆಯೆಂದ ಮೇಲೆ ಆದನ್ನು ಬಣ್ಣಿಸತೊಡಗಿದರೆ ಅದೇ ಒಂದು ಪುರಾಣದುದ್ದವಾಗಿ ವಾಚಕರೋಚಕವಾಗಬಹುದು. ಅದುಕಾರಣ ಚುಟುಕಿಂದ ದಿಗ್ದರ್ಶನ ಮಾತ್ರ—ಲಕ್ಕಯ್ಯನ ಚಪ್ಪರ, ಮುಕ್ಕಯ್ಯನ ಮಂಟಪ, ಚಂದಯ್ಯನ ವಾಲಗ; ಮುಕ್ಕಣ್ಣನ ತಿಂಡಿ, ಸುಬ್ಬಣ್ಣನ ಅಡಿಗೆ, ಶೇಷಣ್ಣನ ಹೋಳಿಗೆ; 'ವಿಮಾನ್ ಎಂಡ್ ಕೋ' ರವರು ಕಾರುಗಳಿಗೆ, 'ಸೂರ್ಯ ಎಂಡ್ ಕೋ'ರವರು ದೀಪ

ಗಳಿಗೆ, ಇನ್ನು ಬಾಣ ಬಿರುಸುಗಳ ಜಳಕಕ್ಕೆ 'ದಿ ಶೂಟಿಂಗ್ ಸ್ಟಾರ್ ಎಂಡ್ ಕೋ'ರವರು! ಎಂದ ಮಾತ್ರಕ್ಕೇ ಆ ಜಿಲ್ಲೆಯವರಿರಲಿ, ಹೊರಗಿನವರೂ ಈ ವಿವಾಹದ ವೈಭವದ ಬಗೆಯನ್ನು ತಮ್ಮ ಬಗೆಯ ಹಲಗೆಯಲ್ಲಿ ಚಿತ್ರಿಸಿಕೊಳ್ಳಬಹುದು.

ಈ ಲಗ್ನಕಾರ್ಯನಿರ್ವಾಹಕ ಮಂಡಳಿಯು ಸ್ವಯಂಪ್ರೇರಿತವಾಗಿಯೆ ನಿರ್ಮಿತವಾದುದು. 'ಸೇವಕನಿಂದೇನಾದರೂ ಆಗಬೇಕೆಂದಿದ್ದರೆ ಅಪ್ಪಣೆಯಾಗಲಿ!' ಎಂದು ದೊಡ್ಡ ದೊಡ್ಡವರ ಬಾಯಿಯಿಂದಲೂ ಬಾಯಿಯುಪಚಾರಕ್ಕಾಗಿಯಾದರೂ ಮುತ್ತಿನಂತಹ ಮಾತುಗಳು ಉದುರುತ್ತಿದ್ದುವು. 'ಆಗಬೇಕಾದುದೇನೂ ಇಲ್ಲ, ತಾವೆಲ್ಲ ಬಂದು ಚಂದಗಾಣಿಸಿಗೊಟ್ಟರೆ ಸರಿ, ಎಂದು ಬಾಯಿಯುಪಚಾರಕ್ಕಾಗಿಯೆ 'ಖಾವಂದ'ರೆಂದರೂ 'ಅಮ್ಮನವರು' (ಮುನ್ಸೀಫರ ಪತ್ನಿ) ಜನನೋಡಿ, ಪತಿಯ ಕಣ್ಣು ನೋಡಿ, ಏನಾದರೊಂದು ಆಡಿಬಿಡುತ್ತಿದ್ದರು. ಅದು ನಿರಾಯಾಸವಾಗಿ ನೆರವೇರಿಯೆ ಹೋಗುತ್ತಿತ್ತು.

ಚಂದ್ರಪುರದ ಆರುವತ್ತನಾಲ್ಕು ವಕೀಲರಲ್ಲಿ ಮೂರೂ ಮುಕ್ಕಾಲುಪಾಲು ಈ ಮದುವೆ ಮುಗಿಯುವ ತನಕ ಬೇಕುಬೇಕೆಂದಾದರೂ ಕಕ್ಷಿಗಾರರಿಗೆ ತಡವಾಗಿಯೆ ಕಾಣಿಸಿಕೊಳ್ಳುತ್ತಿದ್ದರು. 'ನೋಡಿ, ನಮ್ಮ ಮುನ್ಸೀಫರಲ್ಲಿ ಭಾರೀ ಗೌಜಿಯ ಮದುವೆಯಿದ್ದಿದೆ, ಅಲ್ಲಿ ನಾನಿಲ್ಲದೆ ಯಾವುದೂ ನಡೆಯುವುದಿಲ್ಲ; ಮುನ್ಸೀಫರು ಏಳಲಿಕ್ಕೇ ಬಿಡುವುದಿಲ್ಲ ನನ್ನನ್ನು! ತನ್ಮಧ್ಯೆ ಮರ್ಯಾದೆಗಾಗಿ ಒಂದು ಹೊರೆಯ ಶಾಸ್ತ್ರವಾಗಬೇಕಾಗಿದೆ' ಎಂದಿಷ್ಟಾದರೂ ವಕೀಲರ ಬಾಯಿಯಿಂದ ಬಾರದೆ ಹೋದರೆ ಕಕ್ಷಿಗಾರರು ಕೂಡಲೆ ತೀರ್ಪು ಬರೆದೇ ಬಿಡುತ್ತಿದ್ದರು—'ಈ ವಕೀಲರ ಕಕ್ಷಿಯಲ್ಲಿ ಮುನ್ಸೀಫರು ಇಲ್ಲ' ಎಂದು! ವಕೀಲರಿಗೆ ಇಷ್ಟು ಹೇಳುವುದರಿಂದ ಕಷ್ಟವೂ ಇಲ್ಲ; ನಷ್ಟವೂ ಇಲ್ಲ. ಬದಲಾಗಿ ಕಕ್ಷಿಗಾರರ ದೃಷ್ಟಿಯಲ್ಲಿ ಅವರ ಇಷ್ಟಸಿದ್ಧಿಗೊಳಿಸಲಾಪ ಪ್ರತಿಷ್ಠೆಯುಳ್ಳ ಭಾರೀ ಇಷ್ಟರ್ (ಭಾರೀ ಇಷ್ಟರು—ಮುನ್ಸೀಫರಿಗೆ) ಎಂದಾಗಿ ಹೋಗುತ್ತಿದ್ದರು. ಹಾಗಾಗುವುದು ಯಾರಿಗೆ ಬೇಡವೆನಿಸೀತು? ಮಾತ್ರವಲ್ಲ, ಹಿಂದಿನಿಂದಲೇ ಬರುತಿತ್ತು ಹೊರೆಗಳ ಸಾಲೇ ಸಾಲು! ಇನ್ನು ಮೂರು ತಿಂಗಳೊಳಗೆ ಚಂದ್ರಪುರಿಯ ಸುತ್ತು ವಳಯದ ಹಳ್ಳಿಪಳ್ಳಿಗಳಲ್ಲಿ

ಕೇಂದಾಳಿಯ ಮಾತಿರಲಿ, ಕರಿದಾಳಿ ಸೀಯಾಳವಾಗಲಿ ಬಾಳೆಯ ಗೊನೆಯಾಗಲಿ ತದಿತರ ಫಲವಸ್ತುಗಳಾಗಲಿ ನೋಡಸಿಕ್ಕಿದರೆ ಅಲ್ಲಿ ಕೋರ್ಟಿನ ಮೆಟ್ಟಿಲೇರುವ ಧನಿಯು ಇಲ್ಲವೆಂದು ಆದೇ ನೇರಾಗಿ ಸಾರುತ್ತಿತ್ತು.

ಇನ್ನು ಕೋರ್ಟಿನ ನೌಕರರು ಮಣಿದು ಕುಣಿದು ಸೇವೆಯೊಪ್ಪಿಸುವುದು ದೊಡ್ಡ ವಿಷಯವೆ? ಅದರಲ್ಲಿಯೂ ರಾಮರಾಯನು 'ಖಾವಂದ'ರಿಗೆ ಸ್ವಜಾತಿಯವನು. ಸ್ವಜಾತಿಯ ನೌಕರರು ಇಂತಹ ಸಮಯದಲ್ಲಿ ಸೊಂಟಗಟ್ಟಿದಿದ್ದರೆ! ರಾಮರಾಯನೆಂತೂ 'ಅಮ್ಮನವರ' 'ಖಾಸಾ' ಬಂಟ! ಇತರ ಸಮಯದಲ್ಲಿಯೂ 'ಅಮ್ಮನವರ' ಚಿಕ್ಕ ಪುಟ್ಟ ಕೆಲಸಗಳಿಗೆಲ್ಲ ಪೇಟೆಗೋಡಿ ಚೀಟನೋಡಿ ನುಡಿಹಿಡಿದು ಮಾಡಿಕೊಡುವ 'ರಾಮು' (ಅಮ್ಮನವರು ಪೋಷಕ ದೃಷ್ಟಿಯಲ್ಲಿಯೂ ವಯೋದೃಷ್ಟಿಯಲ್ಲಿಯೂ ರಾಮರಾಯನಿಗೆ ಮಾತುಃಶ್ರೀಸಮಾನರಾಗಿರುವುದರಿಂದ) ಈಗಂತೂ ಒಳಗೂ ಹೊರಗೂ ಎಲ್ಲೆಲ್ಲಿಯೂ ಬೇಕೇಬೇಕು. 'ಅಮ್ಮನವರು' ನಿಜವಾಗಿಯೂ ಅಮ್ಮನವರೇ (A fairly old dame!). ಕೋಮಲಕಾಯವಾಗಲಿ ಹೊಳೆಸಿನ ಹೊಸ ಪ್ರಾಯವಾಗಲಿ ಅವರಲ್ಲಿ ತೋರದು. ಆದರೂ ಹಾಗೆಂದರೆ ಅವರು ಒಪ್ಪುವ ಹಾಗಿದ್ದಿಲ್ಲ. ಅದುಕಾರಣ ಅವರು ಹಿರಿಹೆಂಗಳ ಸೇರುಗೆಯಲ್ಲಿ ಬೆರೆಯುತ್ತಿದ್ದಿಲ್ಲ. ಅವರ ಹಿಂದೆ ಮುಂದೆ ಸುಳಿಯುವುದಕ್ಕೆ ಬೇಕಾದುದು ಚೆಲುವಿನ ಚಲ್ಲೆಯರೇ. ಆದುದರಿಂದ ಅಮ್ಮನವರ ಅಪ್ಪಣೆಯಾಯಿತು,—'ರಾಮೂ' ಲಗ್ನದ ದಿನ ನಿನ್ನ ಹೆಂಡತಿಯು ನನ್ನ ಬಳಿಯಲ್ಲಿಯೇ ಇರಬೇಕು. ಎಲ್ಲಿಯಾದರೂ ಬಿಟ್ಟುಬಂದೀಯೆ!' ಇದನ್ನು ಕೇಳಿ ರಾಮರಾಯನಿಗೆ ಉಸಿರುಗಟ್ಟಿದಂತಾಯಿತು. ಅಮ್ಮನವರಿಗೆ ಅದು ತಿಳಿಯದೆ ಹೋಗಲಿಲ್ಲ. ಕೂಡಲೆ ಅವರು 'ಖಾವಂದ'ರನ್ನು ಉದ್ದೇಶಿಸಿ, 'ನೋಡಿದಿರಾ? ರಾಮೂಗೆ ನನ್ನ ಹೇಳಿಕೆ ಸಾಕಾಗಿಲ್ಲವೋ ಏನೊ! ನಮ್ಮ ಮಹಿಳಾ ಸಭೆಯಲ್ಲಿ ಆಡ್ಡಾಡುವುದಕ್ಕೆ ಅಂತಹ ಚದುರೆಯರೇ ಬೇಕು. ಮೊನ್ನೆ ಕಾರಿನಲ್ಲಿ ಜವಳಿ ಸೇಟರ ಅಂಗಡಿಗೆ ಹೋಗುತ್ತಿದ್ದಾಗ ರಾಮೂನ ಬಿಡಾರ ತೋರಿಸಿದ ಶ್ಯಾಮು. ಒಳಗೆ ಇಣಿಕುವಷ್ಟರಲ್ಲಿ ಬಾಗಿಲ ಬಳಿಗೆ ಬರುತ್ತಿದ್ದಳು ಇವನ ಹೆಂಡತಿ, ಎಷ್ಟು ಲಕ್ಷಣವಾಗಿದ್ದಾಳೆ! ಸುಳಿಬಾಳೆಯ ಒಲವು! ಎಳೆ ಕಳಿಲೆಯ ಹೊಳವು!' ಎಂದರು. ರಾಮುಗೆ ಮತ್ತೊಮ್ಮೆ

ಉಸಿರುಗಟ್ಟಿದಂತಾಗಿ ಮೋರೆ ಕೆಂಪೇರಿತು. ಅಷ್ಟರಲ್ಲಿ, 'Did you hear, Rama Rao?' (ರಾಮರಾವ್, ಕೇಳಿದಿಯಾ?) ಎಂದು ಖಾವಂದರ ಮಾತೂ ಸೇರಿ ಬರಲು ಗಡಿಬಿಡಿಯಿಂದ ಸ್ವರಸರಿಗೈಯುತ್ತ 'ಹೂಂ' ಎನ್ನಲೆ ಬೇಕಾಯಿತು ರಾಮರಾಯ.

* * * * *

ಇಳಿಹೊತ್ತು. ಇನ್ನೂ ಒಂದೆರಡು ತಾಸು ಇರಬಹುದು. ರಾಮರಾಯನು ಕೋರ್ಟಿನಲ್ಲಿಯೋ ಖಾವಂದರ ಮನೆಯಲ್ಲಿಯೋ ಇನ್ನೆಲ್ಲಿಯೋ ಇದ್ದನು. ಹೊರಬಾಗಿಲೋರೆಮಾಡಿ ರಾಮಿಯು ಅಡುಗೆಗೆ ಒಲೆ ಹೊತ್ತಿಸುತ್ತಿದ್ದಳು. ಅಷ್ಟರಲ್ಲೊಂದು ಮೋಟರ್ ಕಾರ್ ಕೊಂಬು ಊದಿತು; ಬಂದು ನಿಂತಿತು. ತನ್ನ ಬಿಡಾರಕ್ಕೆ ಕಾರ್ ಬರುವುದೆಂಬ ಹಂಬಲಾದರೂ ರಾಮಿಗಿತ್ತೆ? ಅವಳು ಮತ್ತೂ ಮತ್ತೂ ಬೆಂಕಿ ಹತ್ತಲೊಪ್ಪದ ಹಸಿ ಕಟ್ಟಿಗೆಗೆ ಉಸ್ಸೆಂದು ಊದುತ್ತಿದ್ದಳು. ಆದರೆ ಯಾರೋ ಬಾಗಿಲು ತೆರೆದುಕೊಂಡು ಒಳಗೆ ಬಂದಂತಾಯಿತು. ನೆಟ್ಟಗೆ ಅಡಿಗೆಯ ಕೋಣೆಗೇ ಬರುವಂತಿತ್ತು. ರಾಮಿಯು ಚಟ್ಟನೆದ್ದು ಬರುವಷ್ಟರಲ್ಲಿ ಅಲ್ಲಿಗೇ ಬಂದು ಬಿಟ್ಟಿದ್ದರು ಮುನ್ಸೀಫರ ಪತ್ನಿ 'ಅಮ್ಮನವರು'! ದೊಡ್ಡವರು ಬಡವರು ಎಂದರೆ ಹೀಗುಂಟು ನೋಡಿ! ಬಡವರಿಗೆ ದೊಡ್ಡವರ ಸಂದರ್ಶನವಾಗಬೇಕಾದರೆ ತಲೆಬಾಗಿಲ (ಗೇಟಿನ) ದಳಿಯೊಳಗಿಂದ ಚೀಟಿಯು ಮುಂದೆ ಸಾಗಬೇಕು. ಆ ಮೇಲೆ ಅಪ್ಪಣೆ ದೊರೆತರೆ ಮುಂದುವರಿದು ದ್ವಾರಮಂಟಪ (Portico)ದ ಮೆಟ್ಟಲಲ್ಲಿ ನಿಂತು ಕಾಯಬೇಕು, ಕಾದು ನಿಲ್ಲಬೇಕು, ಎಂದಿಗೆ ತೆರೆಬಾಗಿಲ ಪರದೆಯು ಸರಿದು ಅಮ್ಮನವರು ನಡುವೆ ಪ್ರತ್ಯಕ್ಷವಾಗುವರೋ ಎಂದು ತೆರೆಗಣ್ಣಿಂದಲೆ ನೋಡುತ್ತಿರಬೇಕು ಬಾಗಿಲ ಕಡೆಗೆ! ಆದರೆ ದೊಡ್ಡವರು ಬಡವರ ಮೆಟ್ಟಲೇರುವುದೇ ಪರಮಾನುಗ್ರಹ! ಅವರ ಆಗಮನಕ್ಕೆ ಕಾಲಾಕಾಲವೆಂಬ ನಿರ್ಬಂಧವೇನೂ ಇಲ್ಲ. ಅವರು ಬಂದುದೇ ಸುಮುಹೂರ್ತ! ಅವರ ನಡೆಯೂ ಚಂದ, ನುಡಿಯೂ ಚಂದ! ಅವರು ಇಳಿದಷ್ಟು ಬಡವರ ಹೃದಯದಲ್ಲಿ ಏರುವರು. ಈ ರಹಸ್ಯವನ್ನು ತಿಳಿದ ಹಲವು ಸಿರಿವಂತರು ತಮ್ಮ ಸಂದರ್ಶನದಿಂದ ಬಡವರ ಮನೆಯನ್ನು ಬೆಳಗಿತೊಳಗಿ ಅವರ ನೆನಸುಕನಸಿನ ಇನಿಸಿನ ತಿನಿಸಾಗಿ ಬಾಳುವರು.

ನಮ್ಮ ಅಮ್ಮನವರಿಗೂ ಈ ಮರ್ಮವು ತಿಳಿದೇ ಇತ್ತು. ಆದುದರಿಂದಲೆ ಅವರು ನೆಟ್ಟಗೆ ಅಡಿಗೆಯ ಕೋಣೆಗೇ ಇಳಿದುಬಿಟ್ಟಿದ್ದರು. ಆದರೆ ರಾಮಿಗೆ ಮಂಕುಬಡಿದಂತಾಯಿತು; ಅವಳು ಕಂಗೆಟ್ಟು ಮುಂಗಾಣದಾದಳು. ಅವಳನ್ನು ಹಾಗೆ ಬೆರಗುಗೊಳಿಸಿ ಸಲುಗೆ ತೋರಿಸಿ ಸೆರಗಿನಲ್ಲಿ ಹಾಕಿಕೊಳ್ಳ ಬೇಕೆಂದೇ ಅಮ್ಮನವರ ಯತ್ನ. ಅದು ಕಾರಣ ಗೊಂದಲಗೊಂಡ ರಾಮಿಯನ್ನು ಕಂಡಾಕ್ಷಣವೆ ಅವಳ ಕೈಹಿಡಿದಾಯಿತು, ಬೆನ್ನು ತಟ್ಟಿಯಾಯಿತು, ಅವಳ ಕುತ್ತಿಗೆಯ ಮೇಲೆ ಇವರ ಸೊಂಡಿಲುಗೈ ಮಂಡಿಸಿಯೂ ಆಯಿತು! ಆಕೆಯ ಗಲ್ಲವನ್ನು ಹಿಡಿದೆತ್ತುತ್ತ, 'ಏನೆ, ಏಕಿಷ್ಟು ಗಲಿಬಿಲಿ? ಇಷ್ಟು ಸಂಕೋಚ? ನಾನೂ ನಿನ್ನಂತೆ ಹೆಂಗುಸಲ್ಲವೆ? ದೇವಲೋಕದಿಂದಿಳಿದು ಬಂದವಳೆಂದು ಬಗೆದೆಯಾ?' ಎಂದರು. ಪುನಃ ಅವಳ ಬೆನ್ನ ಮೇಲೆ ಕೈಯಾಡಿಸಿದರು. ಅವಳ ಮನಸ್ಸಿನ ಕಳವಳವನ್ನು ನೋಡಿ ಅವಳನ್ನೇ ಒತ್ತಿ ಆತುಕೊಂಡು ಗೊಳ್ಳೆಂದು ನಕ್ಕುಬಿಟ್ಟರು! ರಾಮಿಯ ಮೋರೆಯು ಒಮ್ಮೆ ಕೆಂಪೇರಿತು; ಮತ್ತೊಮ್ಮೆ ಬಿಳಿಪಿಗಿಳಿಯಿತು. ಒಳಗೆ ಮೊಳೆತ ಭಾವನೆಗೆ ತಕ್ಕಂತೆ ಕೆಂಪು, ಬಿಳಿಪು, ನಸುಬಿಳಿಗೆಂಪು, ಹೀಗೆ ಏನೇನೋ ವರ್ಣವ್ಯತ್ಯಾಸವನ್ನು ಹೊಂದುತ್ತ ಚಂದಚಂದವಾಗುತ್ತಿತ್ತು ಆ ವದನಾರವಿಂದ. ಅವಳ ಕಣ್ಣುಗಳು ಅರೆದೆರೆದು ಸುಳಿಸುಳಿದು ಸಿಕ್ಕೆಡೆಗೆ ಮಿಂಚು ಬೆಳಗು ಬೀಸುತ್ತಿದ್ದುವು. ಆ ಅನಿರೀಕ್ಷಿತ ಕೂಟದಚ್ಚರಿಯಲ್ಲಿ, ಆ ಅರೆಬಟ್ಟೆಯ ನಾಚಿಕೆಯಲ್ಲಿ, ಆ ಅರ್ಧಮರ್ಧ ಮುಸುಕಿನ ಮರೆಯಿಂದ ತೊಳಗಿ ಬೆಳಗುವ ಆ ಹುಟ್ಟುಚೆಲುವಿನ ಸೊಬಗಿನಲ್ಲಿ, ರಾಮಿಯು ಚೆಲುವಿನ ಕಣಿಯಂತಿದ್ದಳು. ಅವಳು ತನ್ನ ಬಳಿಯಿಂದ ಸರಿಯಲೆತ್ನಿಸುವುದನ್ನೂ ಅವಳ ದೃಷ್ಟಿ ಹರಿಪ ಕಡೆಯನ್ನೂ ಕಂಡು ಅಮ್ಮನವರು, 'ಚಾಪೆಗೀಪೆ ಏನೂ ಬೇಡ, ನೀನು ನನ್ನ ಬಳಿ ಹೀಗೆಯೇ ನಿಂತರೆ ಎಲ್ಲ ಬಂದಂತೆಯೆ. ಅದಿರಲಿ, ನಾನು ಬಂದುದೇಕೆಂದು ತಿಳಿದೆಯಾ? ನಮ್ಮಲ್ಲಿಯ ಮದುವೆಗೆ ನಿನಗೆ ಅಕ್ಷತೆ ಕೊಡುವುದಕ್ಕೆ, ಇಗೋ' ಎಂದು ಮಡಿಲಿಂದ ಬೆಳ್ಳಿಯ ಬಳ್ಳಿಯ ಕಿರಿಕರಡಿಗೆಯೊಂದನ್ನು ಹೊರತೆಗೆದು ಬದಿಯ ಬೊಟ್ಟನ್ನೊತ್ತಲು ಚಟ್ಟನೆ ಚಿಗಿಯಿತು ಅದರ ಮುಚ್ಚಳ! ಒಳಗೆ ಕುಂಕುಮಾಂಕಿತ ಮಂಗಲಾಕ್ಷತೆ! 'ಹಿಡಿಯೇ ಅಕ್ಷತೆಯನ್ನ' ಎಂದು ಆಕೆಯ ಕೈಯ

ಳಿದು ಮುಟ್ಟಿಸಿಯಾಯಿತು. 'ಮಗಳೆ, ಇನ್ನೂ ನಾಲ್ಕು ಕಡೆ ಹೋಗ ಲಿಕ್ಕಿದೆ, ಹೊತ್ತಾಯಿತು!' ಎನ್ನುತ್ತ ಹೊರ ಬಾಗಿಲ ಕಡೆಗೆ ಸರಿದೇ ಬಿಟ್ಟರು ಇಷ್ಟೆಲ್ಲ ನಡೆದುದು ಎರಡೇ ಎರಡು ನಿಮಿಷದೊಳಗೆ! ರಾಮಿಯು ಈ ಅಚ್ಚರಿಯಿಂದ ಎಚ್ಚತ್ತು ಬಾಗಿಲ ಬಳಿಗೋಡಿ ಅರೆಮರೆಯಲ್ಲಿ ನಿಂತು, 'ಆಹಾ! ಹೀಗೆಯೆ ಹೋಗುವ ಹಾಗಾಯಿತಲ್ಲ!' ಎನ್ನುವಷ್ಟರಲ್ಲಿ ಅಮ್ಮನ ವರು ಕಾರಿನಲ್ಲಿ ಕುಳಿತಾಯಿತು. ಕೆಲಬಲದ ಮನೆಯ ಹೆಂಗಸರೂ ಮಕ್ಕ ಳೂ ತಮ್ಮ ತಮ್ಮ ಬಾಗಿಲ ಮರೆಯಲ್ಲಿ ಕಿಟಕಿಯ ಎಡೆಯಲ್ಲಿ ನೋಡುತ್ತಿ ದ್ದಂತೆ, ಅವರೆಲ್ಲ ಕೇಳುವಂತೆ, ಅಮ್ಮನವರು, 'ಹೀಗೆಯೇ ಎಂದರೇನೆ? ನಾನು ಬಂದುದಕ್ಕೆ ಸನ್ಮಾನವೆ? ಅದಕ್ಕೆ ನೀನು ಮದುವೆಗೆ ಬಂದುದೇ ಗೊತ್ತು! ಎಲ್ಲಾದರೂ ಬಾರದೆ ಕುಳಿತೀಯೆ!' ಎನ್ನುತ್ತ ದೊಡ್ಡವರ ಸಲುಗೆಯ ಪುಸಿ ಮುನಿಸಿನ ನೋಟವನ್ನು ರಾಮಿಗೆ ಬೀರಿ ಡ್ರ್ಯಾವರ ಶ್ಯಾಮಗೆ ಹುಬ್ಬಿನಿಂದ ಸ್ಪಣೆಗೊಡಲು, ಊದಿತು ಕೊಂಬು, ಹೊರಟಿತು ಕಾರು!

ರಾಮಿಯು ಬಾಗಿಲಿಕ್ಕಿ ಅಡಿಗೆಯ ಕೋಣೆಗೆ ಹೋದಳು. ಅಲ್ಲಿಂದೀ ಚೆಗೆ ಬಂದಳು. ತಿರುಗಿ ಆಚೆಗೆ, ತಿರುಗಿ ಈಚೆಗೆ ಆವಳಿಗೇನು ಮಾಡುವು ದೆಂದು ತಿಳಿಯಲಿಲ್ಲ. ಅಷ್ಟು ತಳಮಳವಾಗಿಹೋಗಿತ್ತು ಅವಳ ಮನಸ್ಸು. ನೆರೆಹೊರೆಯವರೆಲ್ಲರೂ ನೋಡಿ ಮಚ್ಚರದ ಕಿಚ್ಚಿನಿಂದುರಿದು ಹುಚ್ಚೇಳುವಂತೆ ಮುನ್ಸೀಫರ ಪತ್ನಿಯು ತನ್ನೊಡನೆ ಅಷ್ಟೊಂದು ಸಲುಗೆಯಿಂದ ಮಾತಾ ಡಿದುದು ತಲೆಯಲ್ಲೇ ಸುಳಿಯುತ್ತಿತ್ತು. ಅವಳ ಕಣ್ಣೆದುರಿಗೆ ಕಟ್ಟಿದಂತಿದ್ದವು– ಅಮ್ಮನವರ ಹಮ್ಮರಿಯದ ನುಡಿ, ಬಗೆಗೊಳ್ಳುವ ಸಲುಗೆ, ಭೀತಿಗಳೆವ ಮಾತಿನ ರೀತಿ! ಅವರ ಇದೊಂದೇ ಸಂದರ್ಶನದಿಂದ ತಾನು ಸ್ತ್ರೀಲೋಕ ದಲ್ಲಿ ಒಮ್ಮೆಗೇ ಎಷ್ಟು ಮೇಲಕ್ಕಡರಿಬಿಟ್ಟೆನೆಂದು ರಾಮಿಯು ಹಿಗ್ಗಿ ಹೋದಳು. ಅಷ್ಟರಲ್ಲಿ, 'ರಾಮಕ್ಕಾ' ಎಂದು ಹೊರಬಾಗಿಲ ಬಳಿಯಿಂದ ಕೂಗಿದಳು ಮಾತಿನ ವೆಂಕಮ್ಮ. ರಾಮಿಯು ಬಾಗಿಲು ತೆರೆಯುವ ಮೊದಲೇ ಮೆಟ್ಟಿಲ ಮೇಲಿಂದಲೆ ಅವಳು ಮಾತು ತೊಡಗಿದಳು. 'ಮದ್ವೀಪ್ರಸ್ಥ ಶುಭ ಶೋಭನದಾಗೆ ಅರಸಿನ ಕುಂಕುಮ, ಹೂವುಗೀವು, ಗಂಧಕಸ್ತೂರಿ, ತಾಂಬೂಲ ಕೊಡೋಕೆ, ಮಾನಮರ್ಯಾದೆ ಮಾಡೋಕೆ, ನಿನ್ನಂಥ ಹುಡು ಗೇರು ಇದ್ದರೇನೇ ಚಪ್ಪರ ಬೆಳಗೀತು! ಎಲ್ಲೋರು ಹೆಂಗಳೇನು? ಯಾಕಾ

ದಾರು ಮಾರೀಗೊಂಬೆಗಳು! ನಿನ್ನಂಥಾ ಪುತ್ಳಿಗೊಂಬೆ ಎಲ್ಲಿ ಸಿಕ್ಕೀತು? ಸುಮ್ಮಗೆ ಬಂದಾರೇನು ಮುನ್ಸೂಪ್ರ ಹೆಂಡ್ತಿ ಇಲ್ಲಿತನಕಾವ್ರ? ಇಲ್ಲಿ ಕಾರು ನಿಂತಮ್ಯಾಲೆ ಇನ್ನು ತಮ್ಮ ಮನೀಗೆ ಬಾರದಿರೋರೆ ಅಂತ ತಯಾರಮಾಡ್ಯಾರ ಆ ಕಂಕಮ್ಮ--ಬಣ್ಣದ ಚಾಪೆ ಹಾಸಿ, ಲೋಡುಗೀಡು ಇಟ್ಟು, ಬೆಳ್ಳಿ ಹರಿವಾಣದೊಳಗೆ ತಾಂಬೂಲ, ಇನ್ನು ತಿಂಡಿಗಿಂಡಿ! ಬೋರ್ಡ್ ಪ್ರಜೇಂಟ್ರು ಧನಶೆಟ್ರ ಹೆಂಡ್ತಿ ಕಂಕಮ್ಮನ ಠೀವಿನ ಮುನ್ಸೂಪ್ರ ಹೆಂಡ್ತಿಗೆ ಕಾಣ್ಸೋಣ ಅಂತ! ಆದ್ರೆ ಮುನ್ಸೂಪ್ರ ಹೆಂಡ್ತಿ ಆ ಕಡೆ ಮೊಗ ತಿರುಗಿಸಬೇಕೆ? ಸರಸರನೆ ಮುಂದೇ ಸರೀತು ಕಾರ್, ಆಗ ಆಯಿತು ಕಂಕಮ್ಮನ ಮೋರೆ--ಉಪ್ಪೀಲಿಟ್ಟ ಮಾವಿನ ಮಿಡಿ'! ಆ ಬೀದಿಯ ಮೊದಲಲ್ಲಿ ಮುನ್ಸೀಫರ ಮನೆಯ ಕಾರ್ ತಲೆದೋರಿದಾಗ ವೆಂಕಮ್ಮನಿದ್ದಳು ಕನಕಮ್ಮನ ಮನೆಯ ಜಗುಲಿಯಲ್ಲಿ. ಅನಂತರ ಅದು ಆ ಬೀದಿಯ ಕೊನೆಯಲ್ಲಿ ಕಣ್ಮರೆಯಾಗುವ ವರೆಗೂ ಅದರ ಮೇಲಿಟ್ಟ ಕಣ್ಣನ್ನು ಅವಳು ತೆಗೆಯಲಿಲ್ಲ. ಅದುಕಾರಣ ಅದು ಮತ್ತೆಲ್ಲಿಯೂ ನಿಲ್ಲಲಿಲ್ಲವೆಂಬುದು ಅವಳಿಗೆ ನಿಶ್ಚಯ. ಆದರೂ ವೆಂಕಮ್ಮನು ಆ ಬೀದಿಯಲ್ಲಿ ದೊಡ್ಡವರೆಂಬ ದುಡ್ಡಿನ ಹೆಮ್ಮೆಯ ಏಳೆಂಟು ಹೆಮ್ಮಕ್ಕಳ ಮನೆಬಾಗಿಲಿಗೆ ಹೋಗಿ, 'ಏನಮ್ಮಾ, ಮುನ್ಸೂಪರ ಹೆಂಡ್ತಿ ಅಕ್ಷತೆ ಕೊಡೋಕೆ ಬಂದರೇನು ನಿಮ್ಮಲ್ಲಿಗೆ? ಅವರ ಕಾರು ನಿಮ್ಮ ಮನೀಕಡಿಯಿಂದಲ್ಲೇ ಕೆಳಗೆ ಹೋತು. ನಮ್ಮ ರಾಮೂ ಹೆಂಡ್ತೀಗೆ ಬಹಳ ಒತ್ತಿ ಹೇಳಿರೂ ಅಂದ ಮೇಲೆ ತಮ್ಮಂಥವರಿಗೆ ಅಕ್ಷತೆ ಕೊಡೋದು ಮಾತ್ರವೆ? ನಾಡದು ಕಾರೂನೂ ಕಳ್ಸ್ಯಾರು ನಿಮ್ನಾ ಕರೆದೊಯ್ಯೋಕೆ!' ಎಂದು ತನ್ನ ಅಧಿಕಪ್ರಸಂಗದಿಂದ ಅವರನ್ನು ಮುಚ್ಚುಮರೆಯಿಲ್ಲದೆ ಚುಚ್ಚುತ್ತ ನಡೆದಳು.

ಅಂದು ರಾತ್ರ ರಾಮರಾಯನು ಮನೆಗೆ ಬಂದಾಗ ತುಸು ತಡವಾಗಿತ್ತು. ಮದುವೆಯ ಮುಂದಿದ್ದುದು ಮರುದಿನವೊಂದೆ. ಅಕ್ಷತೆ ಕೊಡಲಿಕ್ಕೆ ಹೋಗಿದ್ದ ಅಮ್ಮನವರು ಹಿಂತಿರುಗಿ ಚಪ್ಪರದೊಳಗೆ ಕಾಲಿಟ್ಟವರೆ ಅಲ್ಲಿದ್ದ ರಾಮರಾಯನನ್ನು ಕಂಡು 'ರಾಮೂ, ನಿನ್ನ ಮನೆನುಗ್ಗಿ ಬಂದೆ!' ಎಂದಿದ್ದರು. 'ಶ್ಯಾಮುನ ಕೈಗೆ ಜೇನೆ ಬಡಿಸಲಿ' ಎಂದು ತನ್ನೊಳಗೇ ಹೇಳಿದ್ದ ರಾಮರಾಯ. ಇನ್ನು ತಪ್ಪಿಸಿಕೊಳ್ಳಲಾಗುವುದಿಲ್ಲ

ವೆಂದೂ ಆಗಲಿ ನಿಟ್ಟುಸಿರುಬಿಟ್ಟಿದ್ದ. ಗಂಡನಿಗೆ ಉಣಬಡಿಸುತ್ತ ರಾಮಿಯು ‘ಅಮ್ಮನವರ’ ಸಂದರ್ಶನದ ಪರಿಯನ್ನು ತನ್ನ ಟೀಕೆ ಟಿಪ್ಪಣಿಗಳೊಡನೆ ಹೇಳಿ ಮುಗಿಸಿದಳು. ರಾಮಿಗೆ ಊಟವೇ ಸೇರದು. ಇಬ್ಬರಿಗೂ ಯೋಚನೆ-ರಾಮಿ ಮದುವೆಗೆ ಹೋಗಬೇಕೋ ಬೇಡವೋ ಎಂಬುದು ವಿಷಯವಲ್ಲ; ಹೇಗೆ ಹೋಗುವುದು ಎಂಬುದೇ. ಉಡುವುದಕ್ಕೊಂದು ಸಜ್ಜಿನ ಸೀರೆ, ತೊಡುವುದಕ್ಕೊಂದು ಅಚ್ಚುಗಟ್ಟಿನ ರವಕೆ, ಇವೆರಡಾದರೂ ಇರಬೇಡವೆ? ಸೀರೆ ರವಕೆಗಳನ್ನು ಎರವಾಗಿ ಕೇಳುವುದೆಂತು, ತರುವುದೆಂತು!

ರಾಮರಾಯನು ಸೇವಿಂಗ್ಸ್ ಬ್ಯಾಂಕಿನಲ್ಲಿ ತೆರೆದ ಲೆಕ್ಕವು ಸುಮಾರು ಅರುವತ್ತೈದು ರೂಪಾಯಿಗೆ ಬಂದಿತ್ತು. ಬೆಳಗಾದರೆ ಅದು ಬರಿದಾಗದೆ ಗತ್ಯಂತರವಿಲ್ಲವೆಂದು ನಿರ್ಧಾರವಾಯಿತು. ‘ಅದರಿಂದ ನಸು ಮೇಘವರ್ಣದ ಜರಿಯಂಚಿನ ಗಚ್ಚು ಸೆರಗಿನ ಕಾಶೀರೇಶ್ಮೆ ಶೀರೆಗಾಗಿ ತಕ್ಕಷ್ಟು ವಿನಿಯೋಗಿಸಿರಿ. ಉಳಿದುದರಿಂದ ಅದಕ್ಕೊಪ್ಪುವ ತೆರೆಕೊರಳಿನ (open neck) ರೇಶ್ಮೆಯ ರವಕೆ, ತೆರೆಕೊರಳ ಬಳಿಗೆ ಮಿರುಗುವ ಜರಿ, ಕೈಗೆ ಲೇಸ್! ಮತ್ತೇನಾದರೂ ಉಳಿದರೆ ನಡುವೆ ಹರಳ ಕಮಲಿನ ರೋಲ್ಡ್‌ಗೋಲ್ಡ್ ಬ್ರೂಚ್, ಇಷ್ಟಿರಲಿ’ ಎಂದಳು ರಾಮಿ. ‘ಮತ್ತು . . ಮತ್ತು . . ಕೋಪಿಸಬೇಡಿ . . . . ಇನ್ನೇನಾದರೂ ಉಳಿದರೆ, ಮಾದರಿಸೀಸೆಗಳಾದರೂ ಸಾಕು, ಒಂದಿಷ್ಟು ಹೆರೋಯಿಲ್, ಒಂದಿಷ್ಟು ಸೆಂಟ್ಸ್, ಒಂದಿಷ್ಟು ಪೌಡರ್! ಮತ್ತು . . . ಮತ್ತು . . . ವೆಸ್ಲಿನ್. ಹಾ! ಮರೆತೆ, ಸಾಧ್ಯವಿದ್ದರೆ, ಒಂದು ಚಲೋ ಸಿಲ್ಕ್ ಟವೆಲ್!’ ಎಂದು ಅಳುಕುತ್ತ ಅಳುಕುತ್ತ ಪತಿಯ ಮುಖವನ್ನೆ ನೋಡಿ ನೋಡಿ ಕೂಡಿಸಿದಳು. ‘ಸರಿ, ಆಯಿತೆ?’ ಎಂದನು ರಾಮರಾಯ. ‘ಆದಂತೆಯೆ, ಇನ್ನೇನು? ಕೈಗೆ ನನ್ನದೆ ನಾಲ್ಕು ಬಳೆಗಳಿವೆ, ಸಾಕು! ಕೊರಳಿಗೆ ಗೋಧಿಮಣಿ ಸರವಿದೆ, ಕೆಳಗೆ ತೆರೆಕೊರಳ ರವಕೆಯ ಜರಿ ಬರುತ್ತದೆ, ಸಾಕು! ಬೆರಳಿಗೆ ನಿಮ್ಮ ಉಂಗುರವಿದೆ; ಸಾಕು! ಕಣಗಾಲನ್ನಪ್ಪುಗೈಯುತ್ತ ಅಂಕುಡೊಂಕಾಗಿ ಬಿದ್ದೇಳುವ ಕಾಲಂದುಗೆ ಇದೆ, ಸಾಕು! ಸಾಕು! ಯಾವುದೂ ಹೆಚ್ಚಿಗಿದ್ದರೆ ಸಜ್ಜಾಗುವುದಿಲ್ಲ. ಆದರೆ ಈ ಕೆಂಪಿನ ಬೆಂಡೋಲೆಯ ಬದಲಾಗಿ ವಜ್ರದ ಕಮಲು ದೊರಕಿದ್ದರೆ,

ಮೂಗಿಗೊಂದು ಚಿಕ್ಕ ವಜ್ರದ ಬೊಟ್ಟು ಇದ್ದಿದ್ದರೆ! . . ' 'ನೀನು ಚಲುವಿನ ರಾಣಿಯೇ ಆಗಿಬಿಡುವೆ!' ಎಂದು ಮಾತು ಮುಗಿಸಿದನು ರಾಮರಾಯ, 'ಹಾಗೆ ಬೇಕೆಂದಿದ್ದರೂ ಇದೇ ಬೀದಿಯ ತುದಿಯಲ್ಲಿ ತವರುಮನೆಯಲ್ಲಿ ಹೆತ್ತು ಮಲಗಿರುವಳು ನಿನ್ನ ಶಾಲೆಯ ಅಚ್ಚುಮೆಚ್ಚಿನ ಗೆಳತಿ, ಮದ್ರಾಸಿನ ಡಾಕ್ಟರರ ಹೆಂಡತಿ, ಎನ್ನುತ್ತಿದ್ದೆಯಲ್ಲ! ಕೇಳಿದರೆ ಒಂದು ಗಳಿಗೆಯ ಮಾತಿಗೆ ಕೊಡಲೊಲ್ಲಳೇನು?' ಎಂದು ರಾಮರಾಯನು ಸೂಚಿಸಲು ಕಮಲ ವರಳಿತು ರಾಮಿಯ ಮುಖದಲ್ಲಿ! ಅದಕ್ಕೆ ಮರುದಿನ ಕಳೆಯೇರಿತು. ಅದ ರಾಚೆಯ ದಿನ ಅದು ಕಳಕಳಿಸಿ ಕಂಡವರನ್ನೆಲ್ಲ ನಗಿಸಿತು.

* * * * *

ಅರಳಿದ ಹೂವು ನಗುವುದು, ನಗಿಸುವುದು, ಘಮಘಮಿಸಿ ಸಮೀ ಪಿಸಿದವರನ್ನೆಲ್ಲ ಆನಂದಗೊಳಿಸುವುದು. ಆದರೆ ಹಾಗೆಯೆ ಅರಳಿಯೆ ಪರಿ ಮಳಿಸಿಯೆ ಆನಂದಬೀರಿಯೆ ಎಂದೆಂದೂ ಇರಲಾಗುವುದೆ? ಅದರದು ಗಳಿಗೆಯ ಬಾಳು. ಆ ಮೇಲೆ ಅದು ಸೊರಗಿ ಹೊರಳುವುದು ದೂಳಲ್ಲಿ! ರಾಮಿಯ ಅರಳಿದ ಮುಖದ ಪಾಡೂ ಹಾಗೆಯೇ ಆಗಿಹೋಯಿತು. ನೋಡಿರಿ, ಮೊನ್ನೆತಾನೆ ಮದುವೆಗೆ ಹೊರಡುವ ಸನ್ನಾಹದಲ್ಲಿ ಅರೆಬಿರಿದ ಅರಳಂತಿದ್ದ ಅವಳ ಮುಗುಳು ಮುಖದ ಸೊಬಗಾಗಲಿ, ನಿನ್ನೆ ಮದುವೆಯ ಚಪ್ಪರದಲ್ಲಿ ಅರಳರಳಿ ಎಲ್ಲರ ಮನಸ್ಸನ್ನೂ ಮರುಳುಗೊಳಿಸಿದ್ದ ಮಲ್ಲಿ ಗೆಯರಳಿನಂಥ ಅವಳ ಸಿರಿಮೋರೆಯ ಬೆಡಗಾಗಲಿ, ಇಂದು ಅರುಣೋ ದಯಕ್ಕೆ ಉಳಿದಿದೆಯೆ? ಬೆಳಗಾಗುತ್ತ ಬರುತ್ತಿದೆಯಷ್ಟೆ, ಅಷ್ಟರಲ್ಲೆ ರಾಮಿ ಯು ಹೊರಬಾಗಿಲ ಬಳಿಯಲ್ಲಿ ನಿಂತಿರುವಳು; ಮುಖವು ಬಾಡಿ ಮುಸುಡಿ ಹೋಗಿದೆ! ಕೈಯ್ಯಲ್ಲಿದೆ ಕಿರಿಕರಡಿಗೆ. ಬೆಟ್ಟಿಂದ ಅದರ ಬೊಟ್ಟೊಂದನ್ನು ಆಗಾಗ ಒತ್ತುವಳು. ಚಟ್ಟನೆ ಮುಚ್ಚಳವು ಪುಟನೆಗೆವುದು. ಆಗ ಬೆಟ್ಟವೇ ಕಳಚಿಬಿದ್ದಂತಾಗುವುದು ಅವಳ ತಲೆಯ ಮೇಲೆ. ಕಾರಣ, ಅದರೊಳ ಗಿಂದ ಮಿಂಚು ಬೆಳಗನ್ನು ಹೊರಸೂಸುತ್ತಿದ್ದುದು ಒಂದೇ ಒಂದು ಕಮಲು ಡಾಕ್ಟರರ ಪತ್ನಿಯಿಂದ ಎರವಾಗಿ ತಂದಿದ್ದ ಎರಡು ಕಮಲುಗಳಲ್ಲಿ ಈಗಿರು ವುದು ಒಂದೇ ಒಂದು! ರಾಮಿಯು ನಿಂತಿದ್ದಂತೆ ಅವಳ ಹೃದಯವು ಮೊರೆಯಿಡುತ್ತಿತ್ತು—'ದೇವರೇ ಸಲಹು!' ಎಂದು.

ನಿನ್ನೆ ಮದುವೆಯ ಚಪ್ಪರದಿಂದ ರಾಮರಾಮಿಯರು ತಮ್ಮ ಮನೆಗೆ ಹೊರಡುವಷ್ಟರಲ್ಲಿ ಕತ್ತಲಾಗಿತ್ತು. ಚಪ್ಪರವು ಬರಿದಾಗುತ್ತ ಬಂದಿತ್ತು. ಆದರೂ ಮುನ್ಸೀಫರ ಕಡೆಯಿಂದ ಮನೆಗೆ ಕೊಂಡುಬಿಡುವ ಕೊನೆಯ ಆತಿಥ್ಯ ಸತ್ಕಾರವಿನ್ನಾರಿಗಾದರೂ ಆಗಲಿಕ್ಕಿದೆಯೋ ಏನೋ ಎಂದು ಕಾದು ನಿಂತಿತ್ತು 'ವಿಮೂನ್ ಎಂಡ್ ಕೋ'ರವರ ಅಲಂಕರಿಸಿದ ಕಾರುಗಳ ಲ್ಲೊಂದು. ರಾಮರಾಮಿಯರು ಅದನ್ನೇರಿದರು. ರಾಮಿಗೆ ಅಂದಿನ ಆನಂದದ ಅಮಲು ಹದಮೀರಿ ತಲೆಗೇರಿತ್ತು. 'ಹಿಂದಿನಾಸನದಲ್ಲಿ ನಾವು ಸತಿಪತಿಗಳು; ಮುಂದಿನದರಲ್ಲಿ ಡ್ರ್ಯಾವರ್; ಪತಿಪತ್ನಿಯರು ಗಾಳಿಗಲೆ ದಾಡುವ ರೀತಿಯೇ ಇದು!' ಎಂದು ರಾಮಿಯ ಮದವೇರಿದ ತಲೆಯಲ್ಲಿ ಮಿಂಚಿತು. ಆಗವಳು ಮೇಲೆ ನೋಡಿದಳು, ಆಚೆ ನೋಡಿದಳು, ಈಚೆ ನೋಡಿದಳು. ತನ್ನ ಸುತ್ತುಮುತ್ತು ನೋಡಿದಳು—ಮಲ್ಲಿಗೆಯ ಮಾಲೆ ಗಳಿಂದೊಪ್ಪಿ ಘಮಘಮಿಸುವ ಕಾರು! ಮೇಲಿರುವವನು ನಗುತ್ತ ಜಗವನ್ನೇ ನಗಿಸುವ ಚಂದಿರ! ಸುತ್ತಲೂ ಮಂದಮಂದವಾಗಿ ಬೀಸುವ ತಂಗಾಳಿ! ಮದುವೆಯ ಚಪ್ಪರದಲ್ಲಿ ಬೇಗೆ ಹಿಡಿದು ಬೆಂದು ಬೆವರಿಂದ ಮಿಂದ ರಾಮಿಯ ಮೈಗೆ ಬೀಸಿತು ತಂಪಾಗಿ ಇಂಪಾಗಿ ಆ ಕಂಪುಗೊಂಡ ಸಂಜೆಯ ತಂಗಾಳಿ! ಗಿಡಬಳ್ಳಿಗಳು ನಗುತ್ತಿವೆ, ಮನೆಮರಗಳು ನಗುತ್ತಿವೆ, ಎಲ್ಲವೂ ನಗುತ್ತಿವೆ ತೊಳಗಿ ಬೆಳಗುವ ಆ ಬೆಳ್ದಿಂಗಳಲ್ಲಿ! ಹೀಗೆ ಎಲ್ಲಿ ಕಣ್ಣೆಸೆದರೂ ಅಲ್ಲಿ ಆನಂದೋದ್ರೇಕಗೊಳಿಸುವ ಸನ್ನಿವೇಶಗಳೇ. ರಾಮಿಯು ಪೂರ್ಣ ಮತ್ತಳಾಗಿಯೇ ಹೋದಳು. ತಮ್ಮದೇ ಆ ಕಾರು ಎಂದು ಬಗೆದಳೋ ಏನೊ, ಅಂತೂ ಡ್ರ್ಯಾವರಗೆ ಹೇಳಿಯೇ ಬಿಟ್ಟಳು—ಬೀದಿ ಬೀದಿ ಹಾದು ಹೋಗುವುದು ಬೇಡ, ತುಸು ಸುತ್ತಾದರೂ ವ್ಯಥೆಯಿಲ್ಲ, ಗಾಳಿಗೋಪುರದ ಹಾದಿಯಿಂದ ಕಾರು ಹೋಗಲಿ!—ಎಂದು. ಸರಿ, ಕಾರು ಉರುಳಿತು; ಗಾಳಿಯು ತನ್ನಾಟವನ್ನು ತೊಡಗಿತು. ರಾಮಿಯ ಸೆರಗಿಂದೊಮ್ಮೆ ರಾಮ ರಾಯನ ಕೆನ್ನೆಗೋಂದೇಟು! ಮತ್ತೊಮ್ಮೆ ಅದರಿಂದಲೆ ಅವನ ಕೊರಳಿಗೆ ಮಾಲೆ! ಸೆರಗಿನ ಕರೆಯಿಳಿಗಳಿಂದ ರಾಮಿಯ ಕಮಲಕ್ಕೆ ಸಿಕ್ಕಿನ ಗಂಟು! ಅನಂತರ ಹಾಗೆಯೆ ರಾಮರಾಯನ ಕಿವಿಯೊಂಟಿಗೆ! ಇವರದನ್ನು ಬಿಡಿಸಿ ಕೊಂಡು ನಗುವಾಗ ತಾನೂ ಅವರೊಡನೆ ಹಹ್ಹ ಹ್ಹಾ! ಎನ್ನುವಂತೆ

ರಾಮಿಯ ಸೆರಗನ್ನು ಹಿಡಿದು ಹಿಂದೆಳೆದು ಧ್ವನಿ ಹುಟ್ಟುವಂತೆ ಕೊಡಹು ತ್ತಿತ್ತು ಆ ತುಂಟಗಾಳಿ! ರಾಮಿಯು ಅದಾವ ವಿಲಾಸ ವೈಭವದ ಸುಖಾನು ಭವಕ್ಕಾಗಿ ಅನುದಿನವೂ ಬಾಯಾರಿ ಹಾದೊರೆಯುತ್ತಿದ್ದಳೋ ಅದನ್ನಿಂದು ಮನದಣಿಯೆ ಕುಡಿದು ಮೈದಣಿಯೆ ಪಡೆದು ಮದವೇರಿ ತನ್ನೊಳಗಂದು ಕೊಂಡಳು.—ಇಂದಿನ ದಿನ ನನ್ನದು! ಎಂದು.

ರಾ ಮ ರಾ ಮಿ ಯ ರು ಕಾರಿನಿಂದ ಇಳಿದು ಮನೆಹೊಕ್ಕರು. ರಾಮಿಯು ಅ ಡಿ ಗೆ ಯ ಕೋ ೀ ಣೆ ಗೆ ಹೋಗಿ ದೀಪ ಹ ಚ್ಚಿ ಕೊಂ ಡು ಈಚೆಯ ಕೋಣೆಗೆ ಬಂದಳು. ದೀಪಕ್ಕಾಗಿ ಕಾಯುತ್ತ ಅಲ್ಲಿ ನಿಂತಿದ್ದ ತನ್ನ ಪತಿಯನ್ನು ಕಂಡು,—"ಆರ್ಯಪುತ್ರಾ, ಏನಪ್ಪಣೆ?" ಎಂದು ರಂಗಭೂಮಿಯ ಭೂಮಿಕೆಯನ್ನು ವಹಿಸುವಷ್ಟ ರಲ್ಲಿಯೇ ಆತನು ಗಾಬರಿಗೊಂಡು ಚೀರಿಬಿಟ್ಟನು,...'ಅಯ್ಯೋ, ನಿನ್ನ ಕಮಲು ಎಲ್ಲಿ? ಎರವಿನ ಕಮಲು!' ತಟ್ಟನೇ ಕಿವಿಗೆ ಹಾರಿದವು ರಾಮಿಯ ಕೈಗಳು. ಹೌದು, ಎಡಗಿವಿಯಲ್ಲಿ ಕಮಲು ಇರಲಿಲ್ಲ! ಆಗ ಅವರಿಬ್ಬರ ಮನಸ್ಸಿನಲ್ಲಿ ಒಮ್ಮೆಗೇ ಹೊಳೆಯಿತು. ಆ ಗಾಳಿಯ ಉಪಟಳ ದಿಂದ ಸೀರೆಯ ಕರೆಯು ಕಮಲಕ್ಕೆ ಸಿಲುಕಿಕೊಂಡುದು; ಅದನ್ನೆಳೆದು ಬಿಡಿಸಿದುದು; ಆಗ ಅದರ ತಿರುಪು ಸಡಿಲಾಗಿ ಮತ್ತೆಲ್ಲೋ ಅದು ಬಿದ್ದು ಹೋಗಿರಬಹುದೇ? ಅಲ್ಲಿಂದಲೆ ರಾಮರಾಯನು ನೆಟ್ಟಗೋಡಿದನು ವಿಮಾನ್ ಎಂಡ್ ಕೋರವರ ಗ್ಯಾರೇಜಿಗೆ. ಆ ಡ್ರೈವರನನ್ನು ಕರೆದು—'ನಾವು ಕುಳಿತ್ತಿದ್ದಲ್ಲಿ ಏನಾದರೂ ಬಿದ್ದಿತ್ತೇ?' ಎಂದ. 'ಗ್ಯಾರೇಜಿನೊಳಗೆ ಕಾರು ಉರುಳಿದರೆ ಸಾಕೆಂದಿದ್ದೆ ನಾನು. ಸೋತುಸುಣ್ಣವಾಗಿ ಹೋಗಿ ರಟ್ಟೆಗಳೆ ರಡೂ ಸಿಡಿಯತೊಡಗಿವೆ. ನಾಳೆ ನೋಡಿ ಹೇಳಿದರೆ ಸಾಕೆಂದಿದ್ದರೆ ಹಾಗೆ, ಇಲ್ಲವಾದರೆ ಈಗಲೇ ಹೋಗಿ ನೋಡಿಕೊಂಡು ಬನ್ನಿ' ಎಂದು ಡ್ರೈವರನು ಗ್ಯಾರೇಜಿನ ಬೀಗದ ಕೈಯನ್ನೂ ಮಿಂಚುಬೆಳಕನ್ನೂ ಕೊಟ್ಟನು.

ಅಲ್ಲೇನು ಸಿಕ್ಕೀತು? ರಾಮರಾಯನು ಮನೆಗೆ ಹಿಂತಿರುಗಿ ಬಂದು ಉಸ್ಸೆಂದು ನಿಟ್ಟುಸಿರುಗರೆದು ತಲೆಗೆ ಕೈಗೊಟ್ಟು ಕುಳಿತುಬಿಟ್ಟನು. ಎಲ್ಲಾ ದರೂ ಹಾದಿಯಲ್ಲಿ ಬಿದ್ದಿರಬಹುದೆ? ಎಂಬೊಂದಾಶೆಯ ತಂತುವನ್ನು ನಿರಾ ಶೆಯಾಗಲೊಪ್ಪದ ಮನಸ್ಸು ಹೊಸೆಯಿತು. ತನ್ನ ಮನೆಯಿಂದ ಗಾಳಿಗೋ

ಪುರದ ಮಾರ್ಗವಾಗಿ ಮುನ್ಸೀಫರ ಮನೆಯ ವರೆಗೆ, ಅಲ್ಲಿಂದ ಅದೇ ಹಾದಿ
ಯಾಗಿ ಹಿಂದಕ್ಕೆ ಮನೆಗೆ, ಹೀಗೆ ಎರಡು ಸಲ ಸುತ್ತಿದನು ರಾಮರಾಯ.
ಅಷ್ಟರಲ್ಲಿ ಅರ್ಧರಾತ್ರಿ ಮೀರಿತು; ತಿಂಗಳು ಕಂತಿತು. ಇಬ್ಬರಿಗೂ ನಿದ್ರೆಯಿ
ಲ್ಲದೆಯೇ ಬೆಳಕು ಹರಿಯಿತು. ಮುಂಜಾನೆ ಒಂದು ಸುತ್ತು ಹುಡುಕಿ ಬರುವೆ
ನೆಂದು ರಾಮರಾಯನು ಹೋಗಿದ್ದನು. ಅದೊಂದು ಆಶಾತಂತುವನ್ನು
ಹೊಸೆಯುತ್ತ "ದೇವರೇ ತೋರಿಸಿಕೊಡು!"ಎಂದು ಮೊರೆಯಿಡುತ್ತ
ಬಾಗಿಲ ಬಳಿ ನಿಂತಿದ್ದಳು ರಾಮಿ.

ರಾಮರಾಯನು ದೂರದಲ್ಲಿ ಬರುವ ಪರಿಯನ್ನು ಕಂಡೇ ರಾಮಿಯ
ಆ ಆಶಾಪಾಶವೂ ಹರಿದು ಚೂರಾಯಿತು. ಅವನು ಒಳಗೆ ಬಂದು ಉಸ್ಸೆಂದು
ಕುಳಿತಾಗ ಅವಳ ಎದೆಯೇ ಬಿರಿದು ಬಿದ್ದಂತಾಯಿತು. ಇನ್ನೇನು
ಗತಿ? ರಾಮರಾಯನು ಕರಡಿಗೆಯನ್ನು ಪರೀಕ್ಷಿಸಿದ. ಅದರಲ್ಲಿ ಮದ್ರಾಸಿನ
ದೊಂದು ಕಂಪೆನಿಯ ಹೆಸರು ಇತ್ತು. ಅಲ್ಲಿಯ ದಳ್ಳಾಳಿಯೊಬ್ಬನೂ ಆ ಸಮ
ಯದಲ್ಲಿ ಚಂದ್ರಪುರದಲ್ಲಿ ಬಂದಿಳಿದಿದ್ದನು. ರಾಮರಾಯನು ಆತನನ್ನು ಕಂಡು
ಉಳಿದಿದ್ದೊಂದು ಕಮಲನ್ನೂ ಕರಡಿಗೆಯನ್ನೂ ಅವನಿಗೆ ತೋರಿಸಿ ಅಂತ
ಹದೇ ಮತ್ತೊಂದು ವಜ್ರದ ಕಮಲನ್ನು ತರಿಸಿಕೊಡಬೇಕೆಂದನು. ಎಲ್ಲ
ವನ್ನೂ ರಹಸ್ಯವಾಗಿಟ್ಟು ತನ್ನ ಮಾನ ಕಾಪಾಡಿಕೊಡಬೇಕೆಂದೂ ಬಡವ
ನನ್ನು ನಡೆಸಿಕೊಡಬೇಕೆಂದೂ ಅಂಗಲಾಚಿ ಬೇಡಿಕೊಂಡನು ರಾಮರಾಯ.
ದಳ್ಳಾಳಿಯು ಬಹಳ ಸಹಾನುಭೂತಿ ತೋರಿಸಿದ, ಕನಿಕರಗೊಂಡು ಮಾತಾ
ಡಿದ, ಮುಂಗಾಣಿಕೆಕೊಳ್ಳದೆಯೆ ತಂತಿಕೊಟ್ಟು ಮೂರೇದಿವಸದಲ್ಲಿ ತರಿಸಿ
ಕೊಡುವೆನೆಂದ. ಹೆಚ್ಚೇನು? ತನ್ನ ದಳ್ಳಾಳಿತನದ ಲಾಭಾಂಶವನ್ನೂ ಬಿಟ್ಟು
ಕೊಡಲು ಸಿದ್ಧನಾದ! 'ಬೇರೆ ಯಾರೇ ಆಗಲಿ ಕಡಿಮೆಯೆಂದರೆ ನಾಲ್ಕು
ನೂರು ರೂಪಾಯಿಗಳನ್ನು ಮೊದಲು ಮಡಗಬೇಕಿತ್ತು. ಆದರೆ ನೀವು
ಬಡವರು, ನಿಮ್ಮ ಅವಸ್ಥೆ ಕೇಳಿ ಎದೆ ಕರಗಿ ನೀರಾಯಿತು. ಅದುಕಾರಣ
ನಾಡದು ಮೂರುನೂರು ರೂಪಾಯಿಗಳನ್ನು—ಅದರ ಯಥಾರ್ಥ ಮೌಲ್ಯ
ವನ್ನು ಮಾತ್ರ—ತನ್ನಿರಿ' ಎಂದನು ಆ ಪುಣ್ಯಾತ್ಮ ಮಹಾರಾಯ.

ಮೂರು ನೂರು ರೂಪಾಯಿಗಳು! ಮೂರು ದಿವಸದೊಳಗೆ! ಎಲ್ಲಿಂದ
ತಾವೇ ಬಂದಾವು? ರಾಮಿಯು ತನ್ನ ಮಂಗಳ ಸೂತ್ರದ ತಾಳಿಯೊಂದನ್ನಿಟ್ಟು

ಕೊಂಡು ಉಳಿದ ತನ್ನ ಆಭರಣವನ್ನೆಲ್ಲಾ ರಾಮರಾಯನ ಕೈಯಲ್ಲಿ ಕೊಟ್ಟು 'ಇವೆಲ್ಲ ಮಾರಿಹೋಗಲಿ, ನಮ್ಮ ಮಾನ ಉಳಿಯಲಿ!' ಎಂದಳು. ಆದರೆ ಮತ್ತೂ ಬೇಕಾಯಿತು ಒಂದುನೂರಎಪ್ಪತ್ತೈದು ರೂಪಾಯಿ! ಕೊನೆಗೆ ಪರಸ್ಪರ ಸಹಾಯಕ ಸಂಘಕ್ಕೆ ಶರಣುಹೋಗುವೆನೆಂದು ನಿಶ್ಚೈಸಿ ಪ್ರಕೃತ ಅಲ್ಲಿ ಇಲ್ಲಿ ಇಷ್ಟಿಷ್ಟು ಕೈಕಡಮಾಡಿ ಮೂರನೆಯ ದಿನಕ್ಕೆ ಹಣದ ಗಂಟೂ ಆಯಿತು; ಒಂಟಿ ಕಮಲೂ ಜೋಡಾಯಿತು. ಅವುಗಳಲ್ಲಿ ಇದ್ದುದು ಯಾವುದು ಬಂದುದು ಯಾವುದು ಎಂದು ಹೇಳಲು ಬರುತ್ತಿದ್ದಿಲ್ಲ; ಅಷ್ಟು ಜೊತೆ ಸರಿಹೋಗುತ್ತಿದ್ದುವು ಅವು! ರಾಮಿಯು ಅವನ್ನು ಕೊಟ್ಟು ಬಂದಳು.

ಆದರೆ ಎರವಾಗಿ ಬಂದುದು ಸ್ಥಿರವಾಗಿದ್ದುವುಗಳನ್ನೂ ಮುಕ್ಕು ನೀರು ಕುಡಿದು ಹಾರಿಹೋಯಿತಲ್ಲ! ಆ ಮೂರು ನೂರು ರೂಪಾಯಿಗಳನ್ನು ಪುನಃ ಒಟ್ಟುಗೂಡಿಸಬೇಕಾದರೆ ರಾಮರಾಮಿಯರು ಅರೆಹೊಟ್ಟೆಯುಂಡು ಕಿರಿಬಟ್ಟೆಯುಟ್ಟು ಬಡತನದ ಹಿಡಿತದಲ್ಲಿ ಮಿಡುಕಬೇಕಾಯಿತು. ಆ ಉದ್ದದ ಮೂರು ವರುಷಗಳ ಕಾಲ! ಅಂದಿನಿಂದ ಇಂದಿನ ವರೆಗೆ ರಾಮಿಯು ಮನೆಮೆಟ್ಟಲಿಳಿಯಲಿಲ್ಲ. ಮದ್ರಾಸಿನ ಡಾಕ್ಟರರ ಹೆಂಡತಿಯು ಮೂರನೆಯ ಸಲ ತವರು ಮನೆಗೆ ಬಂದರೂ ರಾಮಿಯು ಕಾಣಸಿಗಲಿಲ್ಲ. ಅದು ಕಾರಣ ಅವರಾಗಿಯೆ ಬಂದರು ರಾಮಿಯ ಮನೆಗೆ. ಅವರನ್ನು ಕಂಡೊಡನೆ ರಾಮಿಗೊಮ್ಮೆ ಮೈ ಜುಮ್ಮೆಂದಿತು! ಅಂದು ಮರೆಸಿದ್ದನ್ನು ಇಂದು ಮೊದಲಾಗಿ ತಾನಾಗಿ ಹೇಳಿಬಿಡುವುದೊಳ್ಳಿತೆಂದು ಅವಳಿಗನ್ನಿಸಿತು. ಹಿಂಜರಿಯುವ ಸ್ವರವನ್ನು ಮುಂದೆಳೆದೆಳೆದು ಹಿಂಬೀಳುವ ನಾಲಗೆಯನ್ನು ಮುಮ್ಮಾಡಿಮಾಡಿ ತೊಡಗಿದಳು,—'ಅಂದು . . . ನಾನು . . . ಎರವಾಗಿ ತಂದಿದ್ದ . . . ನಿಮ್ಮ . . . ವಜ್ರದ ಕಮಲು . . . . ಎನ್ನುವಷ್ಟರಲ್ಲಿ ಆ ಗೆಳತಿಯು ಅವಳ ನುಡಿ ತಡೆದು, 'ಹ್ಞ! ವಜ್ರದ ಕಮಲುಗಳೆ ಅವು? ಕೆಮಿಕಲ್ ಡ್ಯಾಮಂಡ್ಸ್!" ಎಂದಳು. ರಾಮಿಯು ಆಶ್ಚರ್ಯಗೊಂಡು, 'ಕೆಮಿಕಲ್ ಡ್ಯಾಮಂಡ್ಸ್? ನಿಮ್ಮ ತಂದೆಯು ನಿಮಗೆ ವಜ್ರದ ಕಮಲುಗಳನ್ನು ಹಾಕಿದ್ದರಲ್ಲ?' ಎಂದು ಕೇಳಲು, ''ಹೌದು, ಆದರೆ ಕಾರು ಕೊಂಡುಕೊಳ್ಳಲಿಕ್ಕೆ ಹಣ ಕಡಿಮೆಯಾಯಿತು. ಅವುಗಳನ್ನು ಮಾರಲೇಬೇಕಾಯಿತು. ಆ ಕಾರಿನೊಡನೆ ನನ್ನ ಕಿವಿಗೆ ಬಂತು ಈ 'ದೊಡ್ಡವರ ವಜ್ರ!' ಇದೇ ಅಂದು

ನಿನಗೆ ಎರವಾಗಿ ಕೊಟ್ಟಿದ್ದ ಮೂವತ್ತು ರೂಪಾಯಿಯ ಕಮಲಿನ ಜೊತೆ!'' ಎಂದು ಪ್ರತ್ಯುತ್ತರ ಬಂತು! ವಾಚಕ ಮಹಾಶಯ, ರಾಮಿಯ ಮನಸ್ಸಿನಲ್ಲಿ ಆಗ ಏನೇನು ತೋರಿರಬಹುದು! ನೀವೇ ಕಲ್ಪಿಸಿಕೊಳ್ಳಿರಿ; ನಮಗಂತೂ ಲೇಖನಿಯು ಮುಂದುವರಿಯಲು ಕೇಳುವುದಿಲ್ಲ. ಅವಳು 'ದೊಡ್ಡವರ ವಜ್ರ! ಹ್ಹ, ದೊಡ್ಡವರ ವಜ್ರ!' ಎನ್ನುತ್ತ ಪ್ರಯತ್ನದ ಕಿರುನಗೆಯಿಂದ ಬೇರೆ ಮಾತೆತ್ತಿದಳು. ಅದೂ ಮುಂದುವರಿಯದಾಯಿತು. ತನಗೇನೋ ಅಂದು ವಿಪರೀತ ತಲೆನೋವೆಂದು ಗೆಳತಿಯನ್ನು ಕಳುಹಿಕೊಟ್ಟು ಬಾಗಿಲಿಕ್ಕಿ ಬಂದು ನೆಲದ ಮೇಲೆ ಬಿದ್ದಂತೆ ಗೋಡೆಗೊರಗಿ ಕುಳಿತುಬಿಟ್ಟಳು. 'ದೊಡ್ಡವರ ವಜ್ರ! ದಳ್ಳಾಳಿಯ ಸುಳ್ಳು ವಜ್ರ! ನನ್ನನ್ನು ಗೋಳುಗುಡಿಸಿ ಬಾಳುಗೆಡಿಸಿದ ಆ ಹಾಳು ವಜ್ರ!' ಎನ್ನುತ್ತ ರಾಮಿಯು ಗಳಗಳನೆ ಅತ್ತುಬಿಟ್ಟಳು.

[* ಮೊಪಾಸಂತನ ಕಥಾವಸ್ತು (plot)ವನ್ನು ಆಧರಿಸಿ ಬರೆದುದು.]

# ಆಪತ್ತಿನಲ್ಲಿಯೂ ಸಂಪತ್ತು

ಮಂಗಳೂರಿಗೆ ಹೋದನೆಂದರೆ ರಾಮರಾಯನು ಹೊತ್ತಾರೆ ಕದ್ರಿಗೆ ಹೋಗದೆ ಇಲ್ಲ. ಬೆಟ್ಟದಾಚೆಯಿಂದ ಮೂಡಿಬರುವ ಸೂರ್ಯ, ಆ ಎಳೆ ಬಿಸಿಲಲ್ಲಿ ನಗುವ ಬೆಟ್ಟ, ಅದರ ಬುಡದಲ್ಲಿ ತಿಳಿನೀರಿಂದ ಕಂಗೊಳಿಸುವ ಕೆರೆ, ಕೆಳಗೆ ದೇವಸ್ಥಾನ, ಇವುಗಳ ಸೊಬಗನ್ನು ಮನದಣಿಯೆ ಕಂಡು ಕೆರೆಯಲ್ಲಿ ಮಿಂದು ದೇಗುಲವನ್ನು ಹೊಕ್ಕು ಬಂದುಬಿಟ್ಟನೆಂದರೆ ಅವನ ಮನಸ್ಸಿಗಷ್ಟೊಂದು ಆನಂದ, ಮೈಗೆಷ್ಟೋ ಸುಖ, ದಿನವೆಲ್ಲ ಉತ್ಸಾಹವೇ ಉತ್ಸಾಹ!

ಹೀಗೊಂದು ದಿನ ಮಿಂದ ಉಲ್ಲಾಸದಿಂದ ರಾಮರಾಯನು ಕದ್ರಿಯ ಬೀದಿಗಿಳಿದು ಬರುತ್ತಿದ್ದ—ಬೀದಿಯ ಇಕ್ಕಡೆಯಲ್ಲಿಯೂ ತುಸು ಹಿಂದೆ ಸರಿದು ತೆಂಗಿನ ತೋಟಗಳ ಅರೆಮರೆಯಲ್ಲಿ ಮಂಟಪದಂತೆ ಕಂಗೊಳಿಸುವ ಮನೆಗಳು, ಅವುಗಳ ಎದುರು ಬಗೆಬಗೆಬಣ್ಣದ ಗಿಡಬಳ್ಳಿಗಳಿಂದೊಪ್ಪುವ ಹೂದೋಟಗಳು, ಅವುಗಳ ನಡುವೆ ಮುದ್ದು ಚಿಟ್ಟೆಗಳಂತೆ ಚಂದಾಗಿ ಅಡ್ಡಾಡುತ್ತಾ ಹೂವುಗಳನ್ನು ಕೊಯ್ಯುವ ಚಿಕ್ಕ ಬಾಲಕಿಯರು! ಇವನ್ನೆಲ್ಲ ನೋಡುತ್ತ ರಾಮರಾಯನು ಮೆಲ್ನಡೆಯಿಂದ ಮುಂದುವರಿಯುತ್ತಿದ್ದ. ಹಿಂದಿನಿಂದ ಇಂಪಾದೊಂದು ಧ್ವನಿಯು 'ಅಮ್ಮ ಕರೀತಾಳೆ' ಎಂದಂತಾಯಿತು. ತಿರುಗಿ ನೋಡಿದ, –ಚಿಕ್ಕ ಚೆಲುವಿನ ಹುಡುಗಿ! ನಾಚಿಕೆಯೊಡನೆ ಹೋರಾಡುತ್ತ ಹೋರಾಡುತ್ತ ಮತ್ತೂ ಚೆಲುವಾಗಿ ಹೇಳಿದಳು —'ಅಮ್ಮ ಕರೀತಾಳೆ ನಿಮ್ಮನ್ನ' ಎಂದು. 'ಮಗೂ, ನಿನ್ನಮ್ಮನೆಂದರೆ ಯಾರು, ಎಲ್ಲಿ?' ಎಂದ ರಾಮರಾಯ. 'ನನ್ನಮ್ಮ? ನನ್ನಮ್ಮ!' ಎನುತ್ತ ಆ ಮುದ್ದುಗುವರಿಯು ಅಲ್ಲೇ ತುಸು ಹಿಂದೆ ಎಡಗಡೆಗೆ ನೋಡಿದಳು. ರಾಮರಾಯನ ಕಣ್ಣೂ ಆ ದಿಕ್ಕಿಗೆ ಹರಿಯಿತು. ಅಲ್ಲಿ ಚಿಕ್ಕ ತಲೆಬಾಗಿಲ (Gate) ಒಳಗಡೆ ಅಂಗೈಯಂಗಳದ ತುದಿಯಲ್ಲಿ ಚಿಕ್ಕ ಚೊಕ್ಕ ಮನೆಯೊಂದು. ಅದರ ಜಗಲಿಯ ಮೆಟ್ಟಲಿನ ಬಳಿಯ ದುಂಡುಗಂಬವನ್ನು ನೆಮ್ಮಿ ಅರೆಮರೆ

ಯಾಗಿ ನಡು ಹರೆಯದ ಬೆಡಗಳಿಯದ ನೀರೆಯೊಬ್ಬಳು ನಿಂತು ತನ್ನ ಮಗಳ ಬೇಡಿಕೆಗೆ ಸೈಗೊಟ್ಟಂತೆ ರಾಮರಾಯನ ಕಣ್ಣನ್ನು ಹಿಡಿದು ನಸು ತಲೆ ಬಾಗಿಸಿ ಕರೆಕೊಟ್ಟಳು.

ಕರೆಬಾರದೇ ತೂರುವ ಸ್ವಭಾವದವನು ರಾಮರಾಯ. ಅವನ ದಿನ ಚರ್ಯವೇ ಅಂತಹದು. ಹೀಗಿರುವಲ್ಲಿ 'ಬನ್ನೀ' ಎಂದ ಕಡೆಗೆ ಹಾರ ದಿರುವವನೆ? ಅಂಗಳ ಹತ್ತಿದ, ಜಗಲಿ ಏರಿದ, ಒಮ್ಮೆ ಕಣ್ಣು ಸುಳಿಸಿ ಆ ಚಿಕ್ಕ ಮನೆಯ ಒಳಗೆ ಹೊರಗೆ ಎಲ್ಲ ನೋಡಿಬಿಟ್ಟ. ಅಂತಹ ಚಿಕ್ಕ ಚೊಕ್ಕ ಮನೆಯನ್ನು ಅವನು ಆ ವರೆಗೆ ಕಂಡಿಲ್ಲವೆಂದೇ ತೋರಿತು– ಕಳಕಳನೆ ನಗುವ ನೆಲ, ಮಲ್ಲಿಗೆಯ ಬಿಳುಪಿನ ಗೋಡೆ, ಅದಕ್ಕೊಂದವಾದ ಹಸುರುರಂಗಿನ ಅಂಚು, ನಡುವೆ ಅಲ್ಲಲ್ಲಿ ಕಳೆಯೇರುವಂತೆ ಸಮಸೂತ್ರದಲ್ಲಿ ತೂಗಿಸಿರುವ ಚಿತ್ರಪಠಗಳು, ಹೊರಗೆ ಚೊಕ್ಕವಾಗಿರಿಸಿದ್ದ ಆ ಚಿಕ್ಕ ಅಂಗಳದ ಅಂಚಿನ ಸುತ್ತ ಹೂವರಳಿ ನಗುತ್ತಿರುವ ಬಗೆಬಗೆಯ ಗಿಡಬಳ್ಳಿಗಳು! ಹೀಗೆ ಎತ್ತ ನೋಡಿದರೂ ಸಂತುಷ್ಟಿಯ ಸರಳ ಸುಖಜೀವನದ ಲಕ್ಷಣಗಳೇ. ಅವು ಗಳ ನಡುವೆ, ಸವಿಗಟ್ಟಾದ ಚೌಕಟ್ಟಿನಲ್ಲಿ ಬಿಗಿದ ಚಿತ್ರದಂತೆ ಕಂಗೊಳಿಸು ತ್ತಿದ್ದಳು ಮಗಳಿಂದೊಡಗೂಡಿ ನಿಂತಿದ್ದ ಆ ನಡುಹರೆಯದ ಸಡಗರವಳಿಯದ ತಾಯಿ! ಅಲ್ಲಿ ಆ ಕಿರಿಜಗಲಿಯಲ್ಲಿ ನಿಂತು ಇಂತಹ ನೋಟಗಳ ಮೇಲೆಲ್ಲ ರಾಮರಾಯನು ದೃಷ್ಟಿಹರಿಸುತಿದ್ದಾಗಲೇ ಆ ಸ್ತ್ರೀವ್ಯಕ್ತಿ ಯಾರಾಗಿರಬಹು ದೆಂದು ಹಲವು ಹದಿನೆಂಟು ಊಹೆಗಳು ಅವನ ತಲೆಯಲ್ಲಿ ಮಿಂಚಿ ಮಾಯವಾಗದೆ ಇದ್ದಿಲ್ಲ.

ಅಷ್ಟರಲ್ಲಿ 'ಲಲಿತೂ, ಮಾಮನನ್ನು ಒಳಗೆ ಕರೆದುಕೊಂಡು ಬಾರೇ, ಅಲ್ಲೇ ಎಷ್ಟು ಹೊತ್ತು ನಿಲ್ಲಿಸಿಕೊಳ್ಳುವಿಯೆ?' ಎನ್ನುತ್ತ ಆ ಹೆಂಗಸು ಒಳಗೆ ಕಾಲಿಟ್ಟಳು. ಅನಿರೀಕ್ಷಿತವಾಗಿ ಬರುತ್ತಿದ್ದ ಈ ಹೊಸಹೊಸ ಸನ್ನಿವೇಶಗಳಿಂದ ರಾಮರಾಯನು ಬಗೆಗೆಟ್ಟು ಆ ಚಿಕ್ಕ ಹುಡುಗಿಯ ಕೈಗೊಂಬೆಯಂತಾಗಿ ಒಳಗೆ ಎಳೆಯಲ್ಪಟ್ಟ. ಅಲ್ಲಿ ಚಿಕ್ಕ ಪಡಸಾಲೆಯ ಒಂದು ಮಗ್ಗುಲಲ್ಲಿ ಹಾಸಿದ್ದ ಬಣ್ಣದ ಚಾಪೆಯ ಮೇಲೆ ಕುಳಿತುಕೊಂಡ. ಎದುರಿನ ಗೋಡೆ ಯಲ್ಲಿ ಕೆಳಗಡೆಯಿತ್ತು ದೇವರಕಂಡಿ, ಅದರ ಮುಂದೆ ಹೂವಿನ ತಟ್ಟೆ ಬೆಳಗಿ ತೊಳಗುತ್ತಿರುವ ಪೂಜಾ ಪಾತ್ರೆಗಳು. ಕಂಡಿಯ ಇಬ್ಬದಿಯಲ್ಲಿ

ಹಾಗೂ ಮೇಲೆ ಗೋಡೆಯಲ್ಲಿ ಸ್ತೂಪಾಕಾರವಾಗಿ ದೇವತಾಪಠಗಳು, ತುದಿಯಲ್ಲಿ ಲಕ್ಷ್ಮೀ ಚಿತ್ರದ ಹಳೆಯದೊಂದು ಕೆಲೆಂಡರ್, ನಡುವಿನಲ್ಲೊಂದು ಪುರುಷನ ಭಾವಚಿತ್ರ! ಅದರ ಕಡೆಗೆ ರಾಮರಾಯನ ಕಣ್ಣು ಬಿದ್ದಾಗ 'ಅದು ನನ್ನಪ್ಪ!' ಎಂದಳು ಹುಡುಗಿ. ಆ ಮಾತಿಗೆ ಸೈಗುಟ್ಟಿದಂತೆ ನಿಟ್ಟುಸಿರೊಂದು ಬಂತು ಆ ತಾಯಿಯಿಂದ. ಅವನು ನಿಂತಿದ್ದ ಆಕೆಯನ್ನು ಮುಖವೆತ್ತಿ ನೋಡಿದ. ಮೋರೆಯಲ್ಲಿ ಕುಂಕುಮವಿದ್ದಿಲ್ಲ. ಮೂಗಿನಲ್ಲಿ. . . . ಹಾ! ಕಣ್ಣಿನಲ್ಲಿ ನೀರು ತುಂಬಿತ್ತು! ಆಕೆಯ ವಿಷಯವಾಗಿ ಆತನು ಮಾಡಿದ್ದ ಆ ಹಲವೊಂದು ಊಹೆಗಳೆಲ್ಲ ಒಮ್ಮೆಗೇ ಕುಸಿದು ಬಿದ್ದು ಹೋದವು! ಅವನ ಹೃದಯವು ಕರಗಿ ನೀರಾಯಿತು. 'ಅಮ್ಮಾ, ಕುಳಿತು ಕೊಳ್ಳಬಾರದೇ? ನಿಂತಿರುವಿರೇಕೆ? ಏನೋ ಆಪತ್ತಿನಲ್ಲಿರುವಂತೆ ತೋರುವಿರಲ್ಲ? ನನ್ನಿಂದೇನಾದರೂ ಉಪಕಾರವಾಗುವುದಿದ್ದರೆ ಹೇಳಿಯಮ್ಮ, ಸಂಕೋಚ ಬೇಡ' ಎಂದ.

'ನಿಮ್ಮಿಂದಾಗುವ ಮಹದುಪಕಾರವು ಈ ಮೊದಲೇ ಆಗಿಹೋಗಿದೆ. ಅದರ ದೆಸೆಯಿಂದಲೇ ನಮಗೆ ಆಪತ್ತಿನಲ್ಲಿಯೂ ಈ ಸಂಪತ್ತು! ನಿಮ್ಮ ಕೈ ಕಾಲಿಗೆ ಸುಖವಿರಲೆಂದು ನಾನು ದಿನಾಲೂ ಈ ದೇವರ ಮುಂದೆ ಬೇಡುತ್ತಿದ್ದೇನೆ. ನಿಮ್ಮನ್ನೊಮ್ಮೆ ಕಂಡು ಉಪಕಾರ ಹೇಳಬೇಕೆಂದು ನನ್ನ ಹೃದಯವು ಈ ಎರಡು ವರುಷಗಳಿಂದಲೂ ಕೂಗುತ್ತಿತ್ತು. ಆದರೆ ನಿಮ್ಮ ಊರಾಗಲಿ ಹೆಸರಾಗಲಿ ಯಾವುದೂ ಗೊತ್ತಿಲ್ಲದೆ ಪೇಚಾಡುತ್ತಿದ್ದೆ. ಇಂದು ಅನಿರೀಕ್ಷಿತವಾಗಿ ದೇವರೇ ನಿಮ್ಮನ್ನು ತೋರಿಸಿಕೊಟ್ಟ! 'ಲಲಿತೂ, ಅಡ್ಡ ಬೀಳೆ ಮಾಮಂಗೆ, ನಮ್ಮ ಹಿಟ್ಟು ಬಟ್ಟೆಯ ಪಾಡು ಇಂದು ಮಾನ ಮರ್ಯಾದೆಯಿಂದ ಸರಾಗವಾಗಿ ಸಾಗುತ್ತಿರುವುದು ಈ ಮಾವನ ಉಪಕಾರದಿಂದ!' ಎನ್ನುತ್ತ ಆಕೆಯು ಕೃತಜ್ಞತೆಯ ಕಣ್ಣೀರ ಕಾಣಿಕೆಯಿಟ್ಟು ರಾಮರಾಯನ ಪಾದಕ್ಕೆರಗಿ ಎದ್ದು ನಿಂತಳು. ಲಲಿತೆಯೂ ಅಡ್ಡಬಿದ್ದಳು. ಅವನು ಆ ಬಾಲಿಕೆಯನ್ನು ತನ್ನ ಬಳಿಗೆಳೆದು ಕುಳ್ಳಿರಿಸಿಕೊಂಡು ಆಕೆಯ ಬೆನ್ನ ಮೇಲೆ ಕೈಯಾಡಿಸುತ್ತ ಆ ತಾಯಿಯನ್ನು ಕುರಿತು 'ಅಮ್ಮಾ, ಅಂತಹ ಉಪಕಾರವು ನನ್ನಿಂದ ನಿಮಗಾಗಿದ್ದರೆ ನನ್ನ ಜನ್ಮವೇ ಸಾರ್ಥಕವಾಯಿತೆನ್ನುತ್ತಿದ್ದೆ! ಆದರೆ ನಿಮ್ಮನ್ನೆಲ್ಲೋ ಎಂದೋ ನೋಡಿದ್ದ ಅರೆಯರೆ ನೆನಪಾಗುವುದಲ್ಲದೆ ಬೇರಾವುದನ್ನೂ ನಾನರಿಯೆನಲ್ಲ!' ಎಂದ.

'ನಿಮಗೆ ನೆನಪಿರಲಾರದು. ಎಂಟು ವರ್ಷಗಳ ಹಿಂದೆ ನಾವು ಉಡುಪಿಯಲ್ಲಿದ್ದೆವು. ಅವರಿಗೆ ಕಚೇರಿಯಲ್ಲಿ ಕೆಲಸವಿತ್ತು. ನೀವು ಎಷ್ಟೊ ಸಲ ಬಂದು ಅವರನ್ನು ಯಾವುದಕ್ಕೋ ಒತ್ತಾಯಪಡಿಸುತ್ತಿದ್ದಿರಿ. ಒಂದು ದಿನ ಆದಿತ್ಯವಾರ- ನೀವು ಬಂದು ಬಹಳ ಹೊತ್ತು ಅವರೊಡನೆ ಚರ್ಚಿಸಿ ಹೋಗಿದ್ದಿರಷ್ಟೆ— ಅವರು ಕಾಫಿ ಕುಡಿಯಲಿಕ್ಕೆ ಒಳಗೆ ಬಂದರು. ಆಗ ನಾನು, 'ಅವರೊಬ್ಬರು ಆಗಾಗ ಬಂದು ಒತ್ತಾಯಪಡಿಸುವುದೇನು?' ಎಂದೆ. 'ಅವರಿಗೇನು! ನಾನು ಲ್ಯಾಫ್ ಇನ್ಶ್ಯೂರು ಮಾಡಬೇಕಂತೆ! ಮುಂದಕ್ಕೊಂದು ಗಂಟಾಗುವುದಂತೆ! ಕೈಯಲ್ಲಿ ಕಾಸು ಉಳಿದರಲ್ಲವೆ ಮುಂದಿನ ಗಂಟಿನ ಯೋಚನೆ?' ಎಂದರು ಅವರು. 'ಆಗಲಿ, ಏಕೆ ಪ್ರಯತ್ನಿಸಬಾರದು?' ಎಂದೆ ನಾನು. ಈ ಊರಲ್ಲಿ ಆಗ ಅಕ್ಕಿಯ ವ್ಯಾಪಾರ ಮಾಡುತ್ತಿದ್ದ ಅವರ ಅಣ್ಣನ ಹೆಂಡತಿಯು ಅಂದು ನಮ್ಮಲ್ಲಿದ್ದಳು. ಅವಳು "ಹಣವನ್ನುಳಿಸಲಿಕ್ಕೆ ಇನ್ಶ್ಯೂರ್ ಕಂಪ್ನಿಯಂತೆ! ಅದಕ್ಕೆ ಹಣ ಸುರಿಯುತ್ತಾ ಬರುವುದಂತೆ! ಅದಕ್ಕೆ ಹಾಕುವ ಹಣವಿದ್ದರೆ ನನಗೆ ಚಿನ್ನ ಮಾಡಿಸಿ ಕೊಟ್ಟುಬಿಡಿ' ಎಂದು ನಿಮ್ಮಣ್ಣನವರಿಗೆ ಹೇಳಿ ಎಷ್ಟೋ ಇನ್ಶ್ಯೂರ್ ಏಜಂಟುಗಳನ್ನು ಹಿಂದೆ ಕಳುಹಿಸಿದೆ ನಾನು!' ಎಂದಳು. ಅದಕ್ಕುತ್ತರವಾಗಿ, 'ಹಾಗೆ ಹೇಳಬೇಡ, ಚಿನ್ನ ಮಾಡಿಸುವುದಕ್ಕಿಂತ ವಿಮೆ ಮಾಡುವುದು ಎಷ್ಟೋ ಮೇಲು' ಎಂದರು ನಮ್ಮವರು. ಅದನ್ನು ಕೇಳಿದ ನಾನು, "ಹಾಗಾದರೆ ನೀವು ಸೇರಿಯೇ ಬಿಡಿರಿ, ದುಂದುಗಾರಿಕೆ ಬಿಡೋಣ, ವೆಚ್ಚ ಕಡಿಮೆ ಮಾಡೋಣ, ಹೇಗಾದರೂ ಮಾಡಿ ಅಷ್ಟು ಹಣವನ್ನು ಉಳಿಸುತ್ತ ಬರಲೇ ಬೇಕು" ಎಂದು ಧೈರ್ಯದಿಂದ ಹೇಳಿಬಿಟ್ಟೆ. ಮರುದಿನವೇ ಅವರು ಎಂಟು ಸಾವಿರ ರೂಪಾಯಿಗೆ ಇನ್ಶ್ಯೂರು ಮಾಡಿದರು. . . . . ."

ಎನ್ನುವಷ್ಟರಲ್ಲಿ ರಾಮರಾಯನು, "ಹೌದು, ಈಗ ನೆನಪಾಯಿತು! ಶ್ಯಾಮರಾಯರೆಂದು ಅವರ ಹೆಸರಲ್ಲವೆ? ಅಲ್ಲಿಂದ ಪುತ್ತೂರಿಗೆ ವರ್ಗವಾಗಿದ್ದಾಗ...."

ಆಕೆ—'ಹೌದು, ಆಕಸ್ಮಿಕವಾಗಿ, ಮೂರೇ ದಿವಸ ಜ್ವರ! ಯಾರೂ ಯೋಚಿಸಿದ್ದಿಲ್ಲ ಅಷ್ಟು ಬೇಗನೆ ಎಲ್ಲ ಮುಗಿದು ಹೋಗುವುದೆಂದು . . . ."

ರಾಮರಾಯ—'ಅಮ್ಮಾ, ಚೆಲ್ಲಿಹೋದ ಹಾಲಿಗಾಗಿ ದುಃಖಿಸಿ ಫಲವೇನು? ಆದರೆ ನಮ್ಮ ಕಂಪೆನಿಯು ಹಣವನ್ನು ಕೊಡಲಿಲ್ಲವೆ? ಏನಾದರೂ ಮೋಸ ಮಾಡಿತೆ?"

ಆಕೆ,—'ಅಯ್ಯೋ! ಎಲ್ಲಿಯ ಮೋಸ? ಎಂಟು ಸಾವಿರಕ್ಕೂ ಮಿಕ್ಕಿಯೇ ಕೊಟ್ಟಿತು. ಆದುದರಿಂದಲೇ ಹೇಳಿದೆ—ನಮಗೆ ಆಪತ್ತಿನಲ್ಲಿಯೂ ಈ ಸಂಪತ್ತು ನಿಮ್ಮಿಂದಾಯಿತು ಎಂದು. ಈ ಮನೆ, ಈ ದೊಡ್ಡ ತೋಟ, ಇದರಲ್ಲಿರುವ ಬೇರೆ ನಾಲ್ಕು ಮನೆಗಳು— ತಿಂಗಳಿಗೆ ಐವತ್ತು ರೂಪಾಯಿಗಳ ಬಾಡಿಗೆ ಬರುತ್ತಿದೆ— ಎಲ್ಲವೂ ಆ ಹಣದಿಂದ ಇತ್ತೀಚೆಗೆ ಕೊಂಡುಕೊಂಡುದು! ಅಂದು ನೀವು ಪದೇ ಪದೇ ಬಂದು ಅವರನ್ನು ಒತ್ತಾಯಪಡಿಸದೆ ಇರುತ್ತಿದ್ದರೆ ಇಂದು ನನ್ನ ಗತಿ? ಈ ಮಗುವಿನ ಗತಿ? ಅವರ ಅಣ್ಣನ ಹೆಂಡತಿಯ ಗತಿಯಂತೆ, ಅವಳ ಮಕ್ಕಳ ಗತಿಯಂತೆ, ಆಗಿಹೋಗುತ್ತಿತ್ತು!'

ರಾಮರಾಯ—'ಏನಾಯಿತು ಅವರಿಗೆ?'

ಆಕೆ,—'ಬಾವನವರಿಗೆ ಅಕ್ಕಿಯ ವ್ಯಾಪಾರದಲ್ಲಿ ಸೋಲಾಯಿತು, ಸಾಲಹಿಡಿಯಿತು. ಆ ಸಾಲಸೋಲುಗಳಲ್ಲಿ ಅವಳ ಚಿನ್ನಾಭರಣಗಳೆಲ್ಲವೂ ತೇಲಿಹೋದುವು. ಚಿಂತೆ ಹಿಡಿದು ಬಾವನವರು ತೀರಿಕೊಂಡರು. ಅವಳು ಮೂವರು ಹೆಮ್ಮಕ್ಕಳೊಡನೆ ಬಡ ತೌರುಮನೆಯನ್ನು ಸೇರಿಕೊಂಡಿದ್ದಾಳೆ! ತೌರು ದೊಡ್ಡದಿರಲಿ, ಬಡತನದ್ದಿರಲಿ, ಗತಿಗೆಟ್ಟು ತೌರು ಸೇರಬಾರದು; ಅತ್ತಿಗೆ ನಾದಿನಿಯರ ಕಾಲ ಕಸಕ್ಕಿಂತಲೂ ಕೀಳಾಗಿ ಬಾಳಬಾರದು. ನಮ್ಮ ಮಕ್ಕಳು ಅವರ ಮಕ್ಕಳ ಕೈರೊಟ್ಟಿಯ ಚೂರುಚೂರಿಗೆ ಬಾಯಿ ತೆರೆಯುವಂತಾಗಬಾರದು. ಆದರೆ ಅವಳ, ಅವಳ ಮಕ್ಕಳ ಬಾಳು ಈಗ ಹಾಗಾಗಿ ಹೋಗಿದೆ! ಮಾತ್ರವೆ? ಮುಂದೆ ಆ ಬಡ ತಾಯಿಯು ಕಾಸಿಲ್ಲದೆ ಆ ಮೂರು ಹೆಮ್ಮಕ್ಕಳನ್ನು ಯಾರ ಕೈಗೆ ಹಾಕಿಯಾಳು? ಅಂದು ಬಾವನವರ ಸಂಪಾದನೆಯ ಕೈಯು ಸ್ಥಿರವೆಂದು ನಂಬಿ ಇನ್ಶೂರೆನ್ಸ್ ಏಜಂಟರನ್ನು ಹಿಂದೆ ಕಳುಹಿಸಿಕೊಟ್ಟಳು. ಇಂದು ಕಣ್ಣೀರಿಂದ ಕೈತೊಳೆಯುವಳು. ಗಂಡಂದಿರ ಸಂಪಾದನೆಯ ಕೈಯೆಂದರೆ ಗಾಳಿಗಿಟ್ಟ ದೀಪದಂತೆ. ಅದು ಸಂಸಾರವನ್ನು ಸಂತೋಷದಿಂದ ನಗಿಸಿ ನಗಿಸಿ ಬೆಳಗಿಸುತ್ತಿದ್ದಂತೆಯೆ ಒಮ್ಮೆಗೇ ನಂದಿಹೋಗಿ ಅದನ್ನು ನಂಬಿದ್ದ ಕುಟುಂಬವನ್ನು ಗಾಢ ದುಃಖಾಂಧಕಾರದಲ್ಲಿ ತಳ್ಳಿಬಿಡುವುದು. ಅಂತಹ ಕಗ್ಗತ್ತಲಲ್ಲಿ ಕಂಗೆಟ್ಟಾಗ ಕೈವೆಳಗಾಗಿ ದಾರಿ

ತೋರಿಸುತ್ತದೆ ಲ್ಯಾಫ್ ಇನ್ಶ್ಯೂರೆನ್ಸ್ ಕಂಪೆನಿ! ಆದರೆ ಇದನ್ನರಿಯದೆ ನನ್ನಕ್ಕನಂತೆ ಕೆಟ್ಟು ಕಣ್ಣೀರಿಡುವ ಹೆಂಗಳೆಷ್ಟು! ಏನೋ ಅಂತಹ ದುರವಸ್ಥೆಯಿಂದ ದೇವರೆಂದು ನೀವೆಂದು ಅವರೆಂದು ನಿಮ್ಮ ಕಂಪೆನಿಯೆಂದು ನಮ್ಮನ್ನು ಕಾಪಾಡಿದಿರಿ. ಅದರ ನೆನವರಿಕೆಗಾಗಿ, ನೋಡಿ ಅಲ್ಲಿ, ನಿಮ್ಮ ಕಂಪೆನಿಯ ಆ ಕೆಲಂಡರನ್ನು ದೇವರ ಕಂಡಿಯ ಮೇಲೆ ತೂಗಿ ಸಿದ್ದೇನೆ. ಹೀಗೆ ನಿಮಗೆ ತಿಳಿಯದೆಯೇ ನೀವೆಷ್ಟೋ ಸಂಸಾರಗಳನ್ನು ಭಯಂಕರ ದಾರಿದ್ರ್ಯದಿಂದ ರಕ್ಷಿಸಿ ಉದ್ಧರಿಸಿರುವ ಪುಣ್ಯವು ನಿಮ್ಮ ಪಾಲಿಗಿದೆ. ನೀವು ಸಮಾಜದ ತಾಯಿ. ಆದರೆ ಮುದ್ದುಕೊಡ ಬಂದ ತಾಯಿಯನ್ನು ದೂಡುವಂತೆ ಬುದ್ಧಿಯಿಲ್ಲದ ಸಮಾಜವು ನಿಮ್ಮನ್ನು ತಳ್ಳುತ್ತಿದೆ! ಅದನ್ನು ಲಕ್ಷ್ಯಿಸದೆ ನೀವು ಮೂರ್ತಿಮತ್ತಾದ ಸಹನೆಯಂತೆ ಉತ್ಕೃಷ್ಟವಾದ ಸಮಾಜ ಸೇವೆಯನ್ನು ಅರ್ಪಿಸುತ್ತಿರುವಿರಿ. ಅದಕ್ಕಾಗಿ ದೇವರು ನಿಮ್ಮನ್ನು ಚಿರಕಾಲ ವಿಡಲಿ! ಲಲಿತೂ, ಮಾವನನ್ನು ಹೋಗಲಿಕ್ಕೆ ಬಿಡಬೇಡ, ಇವರು ಕೆರೆಗೆ ಹೋದುದನ್ನು ಕಂಡು ಇಷ್ಟು ಹೊತ್ತು ಕಾದುನಿಂತು ನಿಂತುಕಾದು ಹಿಡಿದಿದ್ದೇವೆ. ಎಲ್ಲಾದರೂ ಬಿಟ್ಟೀಯೇ, ಜಾಗ್ರತೆ! ನಾನು ಮಾಮನಿಗೆ ಒಂದಿಷ್ಟು ಕಾಫಿ....'' ಎನ್ನುತ್ತ ಆಕೆಯು ಅಡಿಗೆಯ ಕೋಣೆಗೆ ಕಾಲಿಟ್ಟಳು. ಇತ್ತ ರಾಮರಾಯನು ಇನ್ಶ್ಯೂರೆನ್ಸ್ ಏಜಂಟನನ್ನು ಪಿಶಾಚಿಯೆಂದೂ ನ್ಯೂಸೆನ್ಸ್ ಏಜಂಟನೆಂದೂ ಹಲವರು ಗೇಲಿಮಾಡಿದರೂ ಅವನೊಬ್ಬ ಲೋಕೋಪಕಾರಿಯೆಂದು ತಿಳಿದು ಕರೆದು ಆದರಿಸುವ ಮನೆಗಳೂ ಇವೆ, ಎಂದು ಯೋಚಿಸುತ್ತ ಹಿಂದೆಂದೂ ಹೊಂದದ ಅದೊಂದು ದಿವ್ಯ ಮನಶ್ಶಾಂತಿಯ ಆನಂದವನ್ನು ಹೊಂದುತ್ತಿರಲು ಲಲಿತೆಯು, 'ಮಾಮಾ, ನನ್ನ ಹಾರ್ಮೋನಿ! ಎಷ್ಟು ಚಂದ! ಮೊನ್ನೆ ಅಮ್ಮ ತೆಕ್ಕೊಂಡಿದ್ದು! ಮೂವತ್ತು ರೂಪಾಯಿಗೆ!' ಎನ್ನುತ್ತ ದೇವರ ಕಂಡಿಯ ಬಳಿಯಲ್ಲಿದ್ದ ಅಂದವಾದೊಂದು ಹಾರ್ಮೋನಿಯಮನ್ನು ತೋರಿಸಿದಳು. ಆಗ ಒಳಗಿಂದ ತಾಯಿಯು, 'ಲಲಿತೂ, ಸುಮ್ಮನೆ ಹಾರ್ಮೋನಿ ತೋರಿಸಿ ಏನು ಪ್ರಯೋಜನ? ಒಂದು ಪದ ಹೇಳಮ್ಮಾ, ಮಾಮ ಕೇಳಲಿ' ಎಂದಳು. ಲಲಿತೆಯು ಹಾರ್ಮೋನಿಯನ್ನು ತೆಗೆದಳು. 'ನಂಬ ಬೇಡವೋ| ಈ ತನುವ ನೀ| ನಂಬ ಬೇಡವೊ...' ಎಂದು ಅದಕ್ಕೆ ಸ್ವರಗೂಡಿಸಿ ಮೃದು ಮಧುರವಾಗಿ ಹಾಡತೊಡಗಿದಳು.

# ಆನಂದನ ಬಿ. ಎ. ಡಿಗ್ರಿ

ಆನಂದನಿಗಿಂದು ಆನಂದವಿಲ್ಲ. ಆತನ ಮೋರೆಯಲ್ಲಿ ನಿರಾಶೆಯು ರೂಪುಗೊಂಡು ನೆಲೆನಿಂತಂತಿದೆ. ತಾನಿದ್ದ ಹೋಟೆಲಿನ ಕೋಣೆಯೊಂದರಲ್ಲಿ ಮೊಣಕೈಗಳನ್ನು ಮೇಜಿಯ ಮೇಲೂರಿ ಚಿಂತೆಯ ಕಂತೆಯಂತಿದ್ದ ತನ್ನ ತಲೆಯನ್ನು ಅಂಗೈಗಳಿಂದಾಧರಿಸಿ ಮುರುಕು ಕುರ್ಚಿಯ ಮೇಲೆ ಕುಳಿತಿದ್ದಾನೆ ಆತ. ಅವನ ತಲೆಯೊಳಗೆ ಹಾಲಾಹಲದ ತೆರೆಗಳೇ ಏಳುತ್ತಲಿವೆ.

ಒಂದು ನೌಕರಿಯ ಪ್ರಾಪ್ತಿಗಾಗಿ ಆಫೀಸಿಂದ ಆಫೀಸಿಗೆ ಹತ್ತಿ ಇಳಿದು, ಇಳಿದು ಹತ್ತಿ, ದೊಡ್ಡವರ ಮನೆಬಾಗಿಲ ಮೆಟ್ಟಲಲ್ಲಿ ಕಾದು ನಿಂತು, ನಿಂತುಕಾದು, ಕೊನೆಗೆ ಹತಾಶನಾಗಿ ಹಿಂತಿರುಗುವುದು ಆನಂದನಿಗೊಂದು ಹೊಸ ಅನುಭವವಾಗಿದ್ದಿಲ್ಲ. ಅದಲ್ಲದೆ, ಪ್ರತಿದಿನವೂ ವಾರ್ತಾಪತ್ರಿಕೆಗಳ 'ಬೇಕಾಗಿದೆ' (Wanted Column) ಎಂಬ ರಿಖಾನೆಯನ್ನು ನೋಡಿ ಎಷ್ಟೋ ಅರ್ಜಿಗಳನ್ನು ಬರೆದು ಹಾಕಿದ್ದ—ರಂಗೂನೆಂದು ಬಿಡಲಿಲ್ಲ, ಆಫ್ರಿಕವೆಂದು ಬೆದರಲಿಲ್ಲ, ಮೆಸೊಪೊಟೇಮಿಯಾ ಎಂದು ಹಿಂಜರಿಯಲಿಲ್ಲ. ಸ್ಟಾಫ್ ಸಿಲೆಕ್ಶನ್ ಬೋರ್ಡಿನ ಮುಂದೆ ಒಂದು ಸಲ ಹಾಜರಾದುದೂ ಇತ್ತು. ಇವುಗಳಿಂದೆಲ್ಲ ಎಷ್ಟೋ ನೌಕರಿಯ ಪ್ರಾಪ್ತಿಯನ್ನು ಮನಸ್ಸಿನಲ್ಲೇ ಹೊಂದಿದ್ದ; ಕನಸಿನಲ್ಲೆಷ್ಟೋ ಹುದ್ದೆಗಳನ್ನು ನೋಡಿದ್ದ. ಹೀಗೆ ಆಶಾತಂತುವನ್ನು ಸಾಧ್ಯವಿದ್ದಷ್ಟು ಉದ್ದಕ್ಕೆ ಎಳೆದೆಳೆದು ಇಂದು ಅದು ತುಂಡಾಗಿತ್ತು: ತನಗೊಂದು ನೌಕರಿಯು ದೊರಕೀತೆಂಬ ಪ್ರಬಲವಾದ ಭರವಸೆಯುಳ್ಳವನಾಗಿದ್ದು ಕಳೆದ ಮೂರು ತಿಂಗಳುಗಳಿಂದ ಅದಾವ ಮಹನೀಯರೊಬ್ಬರ ಆಶ್ರಯವನ್ನು ಮಾಡುತ್ತಲಿದ್ದನೋ ಅವರಿಂದು (Very sorry, I can't give you any job.) 'ನಿಮಗೊಂದು ನೌಕರಿಯನ್ನು ಕೊಡಲಾಗುವುದಿಲ್ಲವೆನ್ನಲು ವಿಷಾದಿಸುತ್ತೇನೆ' ಎಂದು ಬೆಣ್ಣೆಯಂತಹ ಮಾತುಗಳಿಂದ ತಮ್ಮ ಸೌಜನ್ಯ(Gentlemanliness)ವನ್ನು ವ್ಯಕ್ತಪಡಿಸಿದ್ದರು!

ಆದುದರಿಂದ ಆನಂದನ ಹೃದಯದಲ್ಲಿದ್ದ ಆ ಕೊನೆಯದೊಂದು ಆಶಾಕಿರಣವೂ ಇಂದು ಅದೃಶ್ಯವಾಗಿತ್ತು. ಆತನ ಮುಂದಿನ ಜೀವನದ ಹಾದಿಯಲ್ಲಿ ಕಗ್ಗತ್ತಲು ಕವಿದಿತ್ತು. ನಾಳಿನ ಗತಿಯೇನೆಂಬುದನ್ನು ಯೋಚಿಸಲೂ ಭಯವಾಗುತ್ತಿತ್ತು ಆತನಿಗೆ! ಆದರೆ ಹೀಗಾದೀತೆಂದು ಎರಡು ವರುಷಗಳ ಹಿಂದೆ ಅವನು ಕನಸಾಮನಸಾ ಎಣಿಸಿದ್ದನೇ? ಆಗಿನ ಆ ಸುಖಮಯವಾದ ಭಾವೀಜೀವನದ ಕಲ್ಪನೆಯೆಲ್ಲಿ! ರೆಕ್ಕೆಗೊಂಡು ಹಾರಿ ಹೋಯಿತೇ!

ಎರಡೇ ಎರಡು ವರುಷಗಳ ಹಿಂದೆ ಆನಂದನು ಬಿ. ಎ. ಪಾಸಾದಂದು ಅವನ ಹೆತ್ತವರಿಗಾದ ಆನಂದ! ತಾವು ಅರೆಹೊಟ್ಟೆಯುಂಡು ಅರೆಬಟ್ಟೆ ಉಟ್ಟಾದರೂ ತಮ್ಮ ಮಗನನ್ನು ಬಿ. ಎ. ಉತ್ತೀರ್ಣನಾಗುವಂತೆ ಮಾಡಿದುದರಿಂದ ಅಂದೇ ತಮ್ಮ ಮುರುಕು ಮನೆಯ ಹೊಸ್ತಿಲಿಂದ ದಾರಿದ್ರ್ಯದೇವಿಯು ಕೆಳಗಿಳಿದು ಹೋದಳೆಂದೂ ಭಾಗ್ಯಲಕ್ಷ್ಮಿಯು ಮೆಟ್ಟಲು ಹತ್ತಿ ಬಂದಳೆಂದೂ ಅವರು ಹೊಂದಿದ ಸಂತೋಷವೇನು! ಆನಂದನೂ ಕಲ್ಪಿಸಿಕೊಂಡ ತನ್ನ ಭಾವೀ ಜೀವನದ ಆ ಆನಂದಮಯವಾದ ದೃಶ್ಯಗಳೇನು! ತನಗೆ ದೊರಕಬಹುದಾದ ದೊಡ್ಡ ದೊಡ್ಡ ಹುದ್ದೆಗಳು; ಅವುಗಳಿಂದ ಮೇಲು ಮೇಲಕ್ಕೆ ಪ್ರೊಮೋಶನ್; ಕೊನೆಕೊನೆಗೆ ಬರೇ ದಸ್ಕತು ಹಾಕಿದುದಕ್ಕೇ ದೊಡ್ಡ ಸಂಬಳದ ಗಂಟು! ದೊಡ್ಡ ಬಂಗಲೆ! ಜವಾನರು! ಮೋಟಾರ್‌ಕಾರ್! ಹೂಮಾಲೆಗಳು! ಮಾನಪತ್ರಗಳು!...... ಇವೆಲ್ಲ ಮರುಮರೀಚಿಕೆಗಳಾದುವೆ? ಶ್ರೀಮಂತಪುತ್ರಿಯೊಂದಿಗೆ ತನಗಾಗಬಹುದಾದ ಮದುವೆ ಆ ಮುಂಗುರುಳು ಮೋರೆಯ, ಮಿಂಚು ಬೀರುವ ತೇಲುಗಣ್ಣಿನ, ಕಿರುನಗುವಿನ ಹೊಳಪೇರಿದ ಗುಲಾಬಿಗೆನ್ನೆಯ ಎಳೆಗುವರಿಯು ವಜ್ರದ ಕಮಲಗಳ ಕಿವಿಯಿಂದ ಜಗ್ಗನ್ನಿಸುವ ಮೂಗು ಬೊಟ್ಟಿಂದ, ಮಿರುಗುಟ್ಟುವ ಮುಂಗೈ ಬಳೆಗಳ ಇಂಪಿನ ಧ್ವನಿಯಿಂದ, ಚಿನ್ನದ ಪಟ್ಟೆಯ ನಡುಗಟ್ಟಿಂದ, ಅಳುಕುತ್ತ ಬಳುಕುತ್ತ ಮೂರ್ತಿಮತ್ತಾದ ಪ್ರೇಮದಂತೆ ಸೌಂದರ್ಯದಾಗರದಂತೆ ಸುಖಸಾಮ್ರಾಜ್ಯದಂತೆ ತನ್ನ ಬಳಿಗೆ ತೇಲಿಬರುವ ಆ ಚೆಲುವಿನ ಮುದ್ದು ಮಡದಿ! ಈ ರೀತಿ ಆತನು ಅಂದು ಕನಸಿನಲ್ಲಿ ಏರಿದ್ದ ಆ ಆನಂದದ ಸುಖಶಿಖರವೆಲ್ಲಿ! ಇಂದಾತನು ಬಿದ್ದಿರುವ ಅಗಾಧ ದುಃಖದ ಕಂದರವೆಲ್ಲಿ!

ಆ ಎರಡೇ ವರುಷಗಳಲ್ಲಿ ಎಂತಹ ಪರಿವರ್ತನೆಗಳಾಗಿ ಹೋದುವು! ಹಳ್ಳಿಯ ಶಾಲೆಯ ಉಪಾಧ್ಯಾಯನಾಗಿದ್ದ ಆತನ ತಂದೆಯು ವೃದ್ಧಾಪ್ಯದ ದೆಸೆಯಿಂದ ಉದ್ಯೋಗನಿವೃತ್ತನಾದ. ಆತನ ಪ್ರೊವಿಡೆಂಟ್ ಫಂಡಿನ ಚಿಕ್ಕ ಮೊತ್ತವು ತಂಗಿಯಂದಿರಿಬ್ಬರ ಮದುವೆಗಳಲ್ಲಿ ಕರಗಿ ನೀರಾಗಿಹೋಯಿತು. ದುರ್ದೈವವಶದಿಂದ ಹಿರಿಯಕ್ಕನೊಬ್ಬಳು ನಿರ್ಗತಿಕ ವಿಧವೆಯಾಗಿ ತನ್ನ ಮೂವರು ಹೆಮ್ಮಕ್ಕಳೊಡನೆ ಬಂದು ಸೇರಿದಳು. ಸಂಸಾರ ನಿರ್ವಾಹದ ಗುರುತರವಾದ ಭಾರವು ಆನಂದನ ತಲೆಯ ಮೇಲೇ ಇಳಿಯಿತು. ಒಂದು ನೌಕರಿಗಾಗಿ-ಬರೇ ೨೫ ರೂಪಾಯಿಯ ನೌಕರಿಗಾಗಿ- ಆನಂದನು ಭಗೀರಥ ಪ್ರಯತ್ನಮಾಡಿದ. ಆದರೆ ಆ ಯತ್ನಗಳಲ್ಲಿ ಸಹಾಯದ ಕೈನೀಡುವವ ರಿದ್ದಿಲ್ಲ. ಆಶೆಯಿಂದ ಮಾಡಿದ ಪ್ರಯತ್ನಗಳೆಲ್ಲ ನಿರಾಶೆಯಿಂದ ಕೊನೆ ಮುಟ್ಟಿದುವೆಂದರೆ ಆನಂದನ ತಲೆಯೊಳಗೆ ಹಾಲಾಹಲದ ಅಲೆಗಳೇಳುತ್ತಿದ್ದು ದರಲ್ಲಿ ಆಶ್ಚರ್ಯವೇನು?

ಅವನು ಯೋಚಿಸುತ್ತ ಕುಳಿತ್ತಿದ್ದ: ನಾನು ಬಿ. ಎ.! ಎಷ್ಟೋ ಪ್ರಶಸ್ತಿ ಪತ್ರಿಕೆಗಳನ್ನೂ ಪಡೆದಿರುವೆನು. ನಾಲ್ಕನೆಯ ಫಾರ್ಮಿನಲ್ಲಿ ಪಾಸಾಗಲಾರದ ರಾಮುರಾಯನು ಇನ್ಶ್ಯೂರೆನ್ಸ್ ಏಜಂಟನಾಗಿ ಸ್ವಂತ ಕಾರಿನಲ್ಲಿ ಹಾರಾಡುತ್ತಿಲ್ಲವೇ? ಸ್ಕೂಲ್ ಫ್ಯಾನಲಿನಲ್ಲಿ ಮೂರು ಸಲ ಲಾಗ ಹೊಡೆದ ಕೇಶವನು ಪ್ರಸಿದ್ಧ ಹೊಮ್ಯೋಪಥಿಕ್ ಡಾಕ್ಟರನಾಗಿ ಹೇಗೆ ಮೆರೆಯುತ್ತಿದ್ದಾನೆ! ಎರಡನೇ ಫಾರ್ಮಿನಲ್ಲೇ ಶಾಲೆಗೆ ಶರಣು ಹೊಡೆದ ಕರುಣಾಕರನ ಸೋಡಾ ಫೇಕ್ಟರಿಯು ಎಷ್ಟೊಂದು ಲಾಭದಾಯಕವಾಗಿದೆ! ಅಷ್ಟೇಕೆ? ನಮ್ಮೂರಿನ ಹಸನಬ್ಬಾ ಬ್ಯಾರಿಯು ಬರೇ ಹತ್ತು ರೂಪಾಯಿಯ ಭಂಡವಾಳದಿಂದ ಹುರಿಯ ವ್ಯಾಪಾರವನ್ನು ತೊಡಗಿ ಈಗ ಬೊಂಬಾಯಿಗೆ ಹುರಿ ತುಂಬಿದ ಹಡಗು ಹಡಗುಗಳನ್ನೇ ಕಳುಹಿಸುತ್ತಿಲ್ಲವೆ? ಇವರಿಗಿರುವ ಸ್ಥಾನಮಾನ ಸುಖಸಂತೋಷಗಳು ನನ್ನ ಬಿ. ಎ.ಗೆ ಇವೆಯೇ? ಯಾವು ದಕ್ಕೂ ಆಗದವನೆಂದು ಸಿದ್ಧಾಂತವಾಗಿ ಹೋಗಿದ್ದ ಆ ರಾಮು ಬಳ್ಳಾರಿ ಯಲ್ಲಿ ಕಾಫಿ ಹೋಟೆಲಿಟ್ಟು ಐದೇ ವರುಷದೊಳಗೆ ಐವತ್ತು ಸಾವಿರ ರೂಪಾಯಿಯ ಜಮೀನನ್ನು ಕೊಂಡುಕೊಳ್ಳಲಿಲ್ಲವೆ? ಅವರ ಮಾತೇಕೆ? ಬೀದಿಯಲ್ಲಿ ಬಂಡಿ ಹೊಡೆಯುವವನೂ ಕೂಲಿಯವನೂ ನನಗಿಂತ ಮಿಗಿ ಲಲ್ಲವೆ? ಅವರಿಗೆ ಸ್ವಾವಲಂಬನದ ಧೈರ್ಯವಿದೆ. ನನಗೆ? ಇಲ್ಲ, ಅದಿಲ್ಲ!

ನಾನು ಉಸಿರಾಡುವ ಗುಮಾಸ್ತಗಿರಿಯ ಯಂತ್ರ ಮಾತ್ರ! ಅದೂ ಗ್ರಾಹಕರಿಲ್ಲದ ಯಂತ್ರ! ನನ್ನಿಂದೇನಾದರೂ ಆಗದೇ? ಆದೀತು! ನಾನು ಗ್ರ್ಯಾಜುವೇಟನೆಂಬುದನ್ನು ಮರೆತುಬಿಟ್ಟರೆ! ಪ್ರಾಮಾಣಿಕತನದ ಯಾವ ವೃತ್ತಿಗಾಗಲೀ ಕೈನೀಡಲು ನನ್ನನ್ನು ತಡೆಗಟ್ಟುವುದು ಯಾವುದು? ಡಿಪ್ಲೋಮಾ! ಹೌದು ಆ ಡಿಪ್ಲೋಮಾ! ಅದನ್ನು ಮರೆತು ಸಾಮಾನ್ಯ ಮಾನವನಂತೆ ಪ್ರಪಂಚದಲ್ಲಿಳಿಯಬೇಕು. 'ಗ್ರ್ಯಾಜುವೇಟ'ನೆಂಬ ಮಿಥ್ಯಾಭಿಮಾನವನ್ನು ಬಿಟ್ಟುಬಿಡಬೇಕು. ಆಗ ನಾನೊಂದು ದಾರಿಯನ್ನು ಹಿಡಿಯಲೂ ಬಹುದು! ಹಿಡಿದು ಇತರರನ್ನು ಹಿಂದೆ ಹಾಕಲೂ ಬಹುದು! ವಿಜ್ಞಾನ ವಿಚಾರಗಳಿಂದ ನನ್ನ ಬುದ್ಧಿಯು ಮಸೆಯಲ್ಪಡಲಿಲ್ಲವೇ?

ಮರುದಿನ ಬೆಳಿಗ್ಗೆ ನೋಡಲು ಆನಂದನು ಆ ಹೋಟೆಲಲ್ಲಿದ್ದಿಲ್ಲ. ಎಲ್ಲಿಗೆ ಹೋದನೆಂದು ಯಾರಿಗೂ ಗೊತ್ತಿದ್ದಿಲ್ಲ. ಗುಮಾಸ್ತಗಿರಿಯ ಸಂತೆಯಲ್ಲಿ ಬಿ. ಎ. ಯ ಬೇಡಿಕೆಯು ಬಹಳ ತಗ್ಗಿದ್ದುದರಿಂದ ಒಂದು ಬಿ. ಎ. ಯು ಅಗೋಚರವಾದುದು ಯಾರ ಲಕ್ಷ್ಯಕ್ಕೂ ಬೀಳಲಿಲ್ಲ. ಕಾಲವು ತನ್ನ ಸಹಜಗತಿಯಿಂದ ಮುಂದುವರಿಯಿತು.

* * * *

ರಾತ್ರಿ ಒಂಬತ್ತು ತಾಸಿನ ಹೊತ್ತು. ಬೊಂಬಾಯಿಂಪ ಮಲಬಾರ್ ಹಿಲ್ಸಿನಲ್ಲಿ ಚಿಕ್ಕ ಚೊಕ್ಕ ಬಂಗಲೆಯೊಂದು. ಅದರೆದುರು ಅಚ್ಚುಕಟ್ಟಾಗಿ ಬೆಳೆಯಿಸಿದ್ದ ಹೂದೋಟ. ನಡುವೆ ಅಮೃತಶಿಲೆಯ ಆಸನದ ಮೇಲೆ ದಂಪತಿಗಳಿಬ್ಬರು ಕುಳಿತಿದ್ದಾರೆ. ಆತನು ತನ್ನ ಹೂದೋಟವನ್ನು ಕಣ್ಣು ಬೀಸಿ ನೋಡಿದ. ಅಂದಿನ ಬೆಳ್ದಿಂಗಳಲ್ಲಿ ಅದು ನವಯೌವನವು ಮೂಡಿ ಬರುತ್ತಿದ್ದ ಮುಗ್ಧೆಯಂತೆ ಮುದ್ದು ಮುದ್ದಾಗಿ ನಗುವಂತಿತ್ತು. ಆಕೆಯ ಮುಖವನ್ನು ನೋಡಿದ—ಅದು ಆ ಉದ್ಯಾನವನ್ನು ನಾಚಿಸುವಷ್ಟು ಮುದ್ದಿನ ಮುದ್ದಾಗಿ ತೋರಿತು. 'ರಮಾ! ನನ್ನ ಈ ಸಂಪತ್ತು, ಈ ಸುಖ, ಇವುಗಳಿಗೆಲ್ಲ ಕಾರಣರ್ಯಾರೆಂದು ಹೇಳಲಾಪೆಯಾ?' ಎಂದ ಆತ. 'ಯಾರು ಕಾರಣರು, ನೀವೇ!' ಎಂದು ಮೃದು ಮಧುರವಾಗಿ ನುಡಿದಳು ಆಕೆ. 'ನಾನಲ್ಲ! ಇವೆಲ್ಲಕ್ಕೂ ಕಾರಣಳಾದವಳೊಬ್ಬಳಿರುವಳು! ಮೊನ್ನೆತಾನೆ ಈ ಊರಿಗೆ ಬಂದಿರುವಳು! ಅವಳೇ ನನ್ನ ಪ್ರಾಣದ ಪ್ರಾಣ. . . . . .' ಮಾತು ಮುಗಿವುದರೊಳಗಾಗಿ ರಮೆಯು 'ಹಾಗಾದರೆ ಇಲ್ಲೇಕಿರುವಿರಿ?

ಅಲ್ಲಿಗೇ ದಯಮಾಡಿಸಬಹುದಲ್ಲ?' ಎಂದು ತುಸು ಮುಗುಳುನಗೆಯ ಕೋರೆ ನೋಟದಿಂದ ಆತನನ್ನು ಚುಚ್ಚುತ್ತ ದೂರ ಸರಿಯಲು ಯತ್ನಿಸಿದಳು. 'ಅವಳ ಬಳಿಯಲ್ಲೇ ಇರುವೆನಲ್ಲ! ಮತ್ತೆಲ್ಲಿಗೆ ಹೋಗಲೇ? ಅವಳು ಇವಳೇ! ಇವಳೇ ನನ್ನ ಮೈಮೇಲೆ ಗೆರಟೆಯ ಚೂರನ್ನು ಒಗೆದ ನನ್ನ ಭಾಗದ ಭಾಗ್ಯದೇವತೆ! ನನಗೆ ಅಕ್ಷಯ ಪಾತ್ರೆಯನ್ನಿತ್ತ ದೇವಿ!' ಎನ್ನುತ್ತ ಆಕೆಯ ಕೈಗಳನ್ನು ಹಿಡಿದಿರಲು, 'ಇಸ್ಸೀಯಪ್ಪ! ಎಲ್ಲಿಯ ಗೆರಟೆ ಚೂರು! ಯಾರು ಒಗೆದುದು? ನಾನೇ? ಅದೂ ನಿಮ್ಮ ಮೇಲೆಯೇ? ಕುಚೋದ್ಯ ಮಾಡುವಿರಾ? ಈ ವಿನೋದವೆಲ್ಲ ನಿಮ್ಮ ಆ ಭಾಗ್ಯದ ದೇವತೆ ಆ ಪ್ರಾಣದ ಪ್ರಾಣ—ಅವಳ ಬಳಿಯಲ್ಲಾಗಲಿ!' ಎನ್ನುತ್ತ ಕೈಯೆಳೆದುಕೊಳ್ಳಲು ಮನಸ್ಸಿಲ್ಲದ ಯತ್ನಮಾಡುತ್ತಿದ್ದಳು.

'ಅವಳೇ ನೀನೆಂದೆನಲ್ಲ? ಹೇಗೆಂಬೆಯೊ? ಕೇಳು' ಎಂದ ಆತ. ಆಕೆ ಕುತೂಹಲದಿಂದ ಕೇಳತೊಡಗಿದಳು. "ಐದು ವರ್ಷಗಳ ಹಿಂದೆ ನೀವೆಲ್ಲರು ನಿಮ್ಮ ತಂದೆಯವರೊಡನೆ ಸ್ಟೀಮರಿನಲ್ಲಿ ಬರುತ್ತಿದ್ದಿರಿ. ನೀವು ಮಂಗಳೂರಿಂದ ಇಲ್ಲಿಗೆ ಬರುತ್ತಿದ್ದುದು ದೀಪಾವಳಿ ಹಬ್ಬ ನೋಡುವುದಕ್ಕಾಗಿ; ನಾನೋ ಗ್ರಾಜುವೇಟನಾಗಿ ನಮ್ಮ ಮಂಗಳೂರಲ್ಲೇ ಶ್ರಮಜೀವನಕ್ಕೆ ಕೈಗೊಡಲು ನಾಚಿ ಪರಿಚಿತರಿಲ್ಲದ ಈ ಬೊಂಬಾಯಿಯಲ್ಲಿ ಅದನ್ನಾದರೂ ಅಳುಕದೆ ನಿರ್ವಹಿಸಿಯೇನೆಂಬ ಭರವಸೆಯಿಂದ ಅದೇ ಸ್ಟೀಮರು ಹತ್ತಿದ್ದೆ. ಆದರೆ ಸ್ಟೀಮರು ಮುಂದುವರಿದಂತೆ ನನ್ನ ಆ ಧೈರ್ಯವು ಹಿಂದೆ ಸರಿಯಿತು! ರೊಕ್ಕಪ್ಪನಿದ್ದರೆ ಚಿಕ್ಕಪ್ಪನಂತಿರುವ ನಗರದಲ್ಲಿ ಕಾಸಿಲ್ಲದ ನಾನು ಯಾರಲ್ಲಿಳಿಯುವುದು? ಏನಾದರೊಂದು ಉದ್ಯೋಗವನ್ನು ಹೇಗೆ ಪಡೆಯುವುದು? ಏನಾದರೂ ಮಾಡಿ ಕೈಯಲ್ಲೆರಡು ಕಾಸಾಗುವ ತನಕ ಮನೆಯವರ ಪಾಡೇನು! ಎಂಬ ಯೋಚನೆ ಹೊಳೆದೊಡನೆ ಬದುಕುವ ಎಲ್ಲ ನಿರ್ಧಾರವನ್ನು ಬಿಟ್ಟೆ. ಆತ್ಮಹತ್ಯೆಯ ಹಾದಿ ಹಿಡಿದೆ. ಅದಕ್ಕಾದರೂ ಸ್ಟೀಮರು ಹತ್ತಿದುದು ಅನುಕೂಲವೇ ಆಯಿತೆಂದುಕೊಂಡೆ. ಕತ್ತಲಾಗುವುದನ್ನು ಕಾಯುತ್ತಲಿದ್ದೆ. ಆಗ ಸಟಕ್ಕನೆ ಗೆರಟೆಯ ಚೂರೊಂದು ನನ್ನ ಮೈ ಮೇಲೆ ಬಿತ್ತು. ಅದು ಬಂದ ಕಡೆಗೆ ನೋಡಿದೆ—ನೀನಲ್ಲಿ ನಿಂತಿದ್ದೆ ನಿನ್ನ ತಂಟೆ ತಮ್ಮನ ಕೈಹಿಡಿದು! ಯಾರೋ ತೆಂಗಿನ ಹೋಳನ್ನು ಜಜ್ಜಿ ತಿಂದು ಬಿಸುಟಿದ್ದ ಗೆರಟೆಯ ಚೂರಿಂದ ಆತ ನಿನ್ನ ಕೈಯನ್ನು ಕೀರಿದ್ದ.

ನೋವಿನ ಭರದಿಂದ ನೀನದನ್ನು ಕಿತ್ತುಕೊಂಡು ಎತ್ತ ಕಡೆಯೆಂದು ನೋಡದೆ ಬಿಸುಟಿದ್ದೆ. ಆದರೆ ಅದು ನನಗೆ ತಾಗಿದುದಕ್ಕಾಗಿ ಸಂತಾಪ ಪಡುತ್ತ ನಿಂತಿದ್ದೆ! ನೆನಪಾಗುತ್ತದೆಯೇ ರಮಾ?'

'ಏನೋ ಕನಸಿನಲ್ಲಿ ಕಂಡಿದ್ದಂತೆ ಆರೆಯರೆ ಕಣ್ಣೆದುರು ಬಂದಂತಾ ಗುತ್ತೆ ಆ ದೃಶ್ಯ! ಆದರೆ, ಆದರೆ. . . .'

'ಹೇಳುತ್ತೇನೆ, ನೀನು ಅತ್ತ ತಿರುಗಿದ ಮೇಲೆ ಆ ಚೂರನ್ನೇ ನೋಡುತ್ತ ಕುಳಿತೆ. ಆತ್ಮಹತ್ಯೆ ಮಾಡದಿದ್ದರೆ ಮುಂದೆ ದೊರಕುವುದು ಭಿಕ್ಷಾಪಾತ್ರೆಯೆಂಬ ಸಂಕೇತವನ್ನು ನನ್ನ ದುರ್ವಿಧಿಯು ಗೆರಟೆಯ ಮೂಲಕ ಕೊಟ್ಟಿತೇ? ಎಂದುಕೊಂಡೆ. ಹಾಗಿದ್ದರೆ ಚಿನ್ನದಂತಹ ಕನ್ನೆಯ ಕೈಯಿಂದೇಕೆ ಕೊಡಿಸಬೇಕೆಂದು ಶಂಕಿಸಿದೆ. ಅಂತೂ ಅದೇಕೋ ಅದ ರಲ್ಲೊಂದು ಆದರ ಹುಟ್ಟಿ ಅದನ್ನೇ ನೋಡುತ್ತಲಿದ್ದೆ. ತುಸು ಕೆತ್ತಿದರೆ ಅದೇನೋ ಒಂದು ಚೆನ್ನಾದ ಆಕೃತಿಯನ್ನು ಕೊಡುವಂತಿತ್ತು. ತಟ್ಟನೆ ಒಂದು ಯೋಚನೆ ಹೊಳೆಯಿತು. ಪ್ರಯೋಗಾರ್ಥವಾಗಿ ಚೂರಿಯನ್ನು ತೆಗೆದು ಆ ಚೂರಿನ ಕೊಂಕನ್ನು ಕೆತ್ತಿ ತೆಗೆದೆ; ವೈಯನ್ನು ಕೆರೆದು ನುಣು ಪುಗೈದೆ. ನನ್ನ ಯೋಚನೆಯು ತಪ್ಪಲ್ಲವೆಂದು ಕಂಡಿತು ಮರುಕ್ಷಣದಲ್ಲಿ ಆತ್ಮಹತ್ಯೆಯ ಯೋಚನೆಯು ದೂರ ಹಾರಿಹೋಯಿತು. ಸ್ಟೀಮರಿನಿಂದ ಇಳಿದಾಗ ಅನಿರೀಕ್ಷಿತವಾಗಿ ನನ್ನ ಬಾಲ್ಯದ ಗೆಳೆಯನೊಬ್ಬ ಸಿಕ್ಕಿದ. ಒಂದೆರಡು ಕಡೆ ಟ್ಯೂಶನ್ (Tution) ದೊರಕಿಸಿಕೊಟ್ಟ. ಬಿಡುವಿನ ಸಮಯವನ್ನು ಅಂಗಿ ಗುಂಡಿಯ ಕಾರ್ಖಾನೆಯೊಂದರಲ್ಲಿ ಔದ್ಯೋಗಿಕ ವಿದ್ಯಾರ್ಥಿ(Apprentice)ಯಾಗಿ ಸೇರಿ ಕಳೆದು ನನ್ನ ಯೋಜನೆಗೆ ಬೇಕಾದ ಅನುಭವವನ್ನು ಹೊಂದಿದೆ. ತಕ್ಕ ಯಂತ್ರ ಸಲಕರಣೆಗಳ ನೋಟ ನೋಡಿಕೊಂಡೆ. ಆ ಮೇಲೆ ಪಾಲು ಭಂಡವಾಳವೆತ್ತಿ ಈ ನನ್ನ ಕಾಮಗಾರಿಕೆಯನ್ನು ತೊಡಗಿದೆ. ಇದೀಗ ನನ್ನ ಈ 'ಆನಂದಾ ಬಟನ್ ಫ್ಯಾಕ್ಟರಿ'ಯ ಕತೆ. ಈಗ ಹೇಳು ರಮಾ, ಸಮುದ್ರಕ್ಕೆ ಹಾರಿ ಪ್ರಾಣ ಕಳೆದುಕೊಳ್ಳಬೇಕೆಂದು ಹೊತ್ತು ನೋಡುತ್ತಿದ್ದವನನ್ನು ತಿರುಗಿ ಜೀವನಕ್ಕೆ ಹಿಡಿಸಿದವಳು—ಆ ನನ್ನ ಭಾಗದ ಭಾಗ್ಯದೇವತೆ—ಯಾರೇ ರಮಾ?'

# ಮನೆಯಲ್ಲಿ ಭೂತ ಸಂಚಾರ

"ಅಯ್ಯೋ! ಆ ಮನೆಯನ್ನು ಬಾಡಿಗೆಗೆ ಹಿಡಿದಿರಾ? ಈ ಪೇಟೆಯಲ್ಲಿ ಬೇರೆಲ್ಲಿಯೂ ನಿಮಗೆ ಮನೆ ಸಿಗಲಿಲ್ಲವೆ"?

"ಆ ಮನೆಗೇನಾಗಿದೆ? ಅಚ್ಚುಕಟ್ಟಾದ ಮನೆ! ದೊಡ್ಡ ಅದೆಗಳು; ಗಾಳಿಬೆಳಕು ಚೆನ್ನಾಗಿ ಬರುವಂತಿದೆ; ಅಡಿಗೆ ಕೋಣೆ, ಬಚ್ಚಲು, ಹಟ್ಟಿ ಕೊಟ್ಟಿಗೆ, ಇವೆಲ್ಲಾ ಈಗಿನ ರೀತಿಗೆ ಹೇಗೆಬೇಕೋ ಹಾಗೆ! ಮೇಲಾಗಿ, ವಿಸ್ತಾರವಾದ ವಠಾರ; ತಂಪಗೆ ಇರುವಷ್ಟು ಮರಮಟ್ಟುಗಳು! ಅಂತಹ ಮನೆಗಳು ಪೇಟೆಯಲ್ಲಿ ಎಷ್ಟಿವೆ? ಬಾಡಿಗೆ ಕೂಡಾ . . . ."

"ಹೌದು, ಬಾಡಿಗೆ ಕಡಿಮೆ, ಸೌಕರ್ಯ ಹೆಚ್ಚು ಎಂದು ನಿಮ್ಮಂತೆ ಎಷ್ಟು ಜನ ಆ ಮನೆ ಕಂಡು ಮರುಳಾಗಿ ಹೊಕ್ಕರು! ಎಷ್ಟು ಜನ ಒಂದೆರಡು ತಿಂಗಳಲ್ಲಿ ಮುಂಗಡ ಕೊಟ್ಟ ಬಾಡಿಗೆಯನ್ನೂ ಬಿಟ್ಟೋಡಿದರು, ಗೊತ್ತೇ? ಅಂತೂ ನೀವು ವಹಿಸಿಕೊಂಡಾಯಿತಲ್ಲ! ಇದ್ದು ನೋಡಿ ಕೆಲವು ದಿವಸ. ಮತ್ತೇನು ಮಾಡಲಿಕ್ಕಾಗುತ್ತೆ ಇನ್ನು?"

ನಿವೃತ್ತ ಪೋಲೀಸ್ ಇನ್ಸ್‌ಪೆಕ್ಟರ್ ವಿಠಲರಾಯರು ಅಂದೇ ಆ ಮನೆಯಲ್ಲಿ ತನ್ನ ಸಂಸಾರವನ್ನಿಳಿಸಿದ್ದರು. ಸಾಯಂಕಾಲ ಪೇಟೆಗೆ ಬಂದಿದ್ದಾಗ ನೋಡ ಸಿಕ್ಕಿದ ಅವರ ಪೂರ್ವ ಪರಿಚಿತರೊಬ್ಬರಿಗೂ ಅವರಿಗೂ ನಡೆದ ಮಾತುಗಳೇ ಮೇಲಿನವು. ವಿಠಲರಾಯರು ಆ ಮನೆಯನ್ನು ೧೫ ದಿವಸಗಳ ಹಿಂದೆ ಬಾಡಿಗೆಗೆ ಹಿಡಿದು ತನ್ನ ಗೃಹಕೃತ್ಯದ ಯಾವತ್ತು ಸಾಮಾನುಗಳನ್ನು ತರಿಸಿ ತಕ್ಕ ಸ್ಥಳಗಳಲ್ಲಿ ಅವುಗಳ ವ್ಯವಸ್ಥೆ ಮಾಡಿಸಿದ್ದರು. ವಾಸ್ತವ್ಯಕ್ಕೆ ಎಲ್ಲವೂ ಸಿದ್ಧವಾಯಿತೆಂದ ಮೇಲೆ ಅವರ ಸಂಸಾರವು ಅಂದು ಬೆಳಿಗ್ಗೆ ಬಂದಿಳಿದಿತ್ತಷ್ಟೆ. ಸಂಸಾರವೆಂದರೆ, ಅವರ ಹೆಂಡತಿ, ಅತ್ತೆ, ಐದು ಮಕ್ಕಳು—ಮೂರು ಹೆಣ್ಣು, ಎರಡು ಗಂಡು. ಬಂದವರು ಮನೆ ನೋಡಿ ತುಂಬಾ ಸಂತೋಷಪಟ್ಟಿದ್ದರು. ಅಂತಹ ಮನೆಯನ್ನು ಚುನಾಯಿಸಿ ಎಲ್ಲ ವ್ಯವಸ್ಥೆಯನ್ನೂ ಮಾಡಿಸಿಟ್ಟುದಕ್ಕಾಗಿ ಅವರ ಪತ್ನಿ

ಶಾಂತಿಗಾದ ಸಂತೋಷವು ಅಷ್ಟಿಷ್ಟಲ್ಲ. ಅದನ್ನು ಕಂಡು ರಾಯರು ತಾನು ಕೃತಕೃತ್ಯನಾದೆನೆಂದು ಹಿರಿಹಿಗ್ಗಿದ್ದರು.

ರಾಯರು ಪೇಟೆಯಿಂದ ಮನೆ ಸೇರಿದಾಗ ದೀಪ ಹಚ್ಚುವ ಹೊತ್ತಾಗಿದ್ದಿತು. ಪೋರ್ಟಿಕೋ (ಮುಖಮಂಟಪ)ದಲ್ಲಿ ಮೇಜಿನ ಮೇಲೆ ದೀಪವಿತ್ತು. ಸುತ್ತಲೂ ಮಕ್ಕಳು ಕುಳಿತಿದ್ದರು. ಆದರೆ ಅವರು ನಿರೀಕ್ಷಿಸಿದಷ್ಟು ಉತ್ಸಾಹವು ಅಲ್ಲಿರಲಿಲ್ಲ. ರಾಯರು ಬಂದವರು ಕುರ್ಚಿಯೊಂದರಲ್ಲಿ ಕುಳಿತು 'ಕಮಲಾ, ಆಚೆ ಕೋಣೆಯೊಳಗೆ ದೀಪ ಹಚ್ಚು' ಎಂದರು ಹಿರಿ ಮಗಳಿಗೆ. 'ರಮಾ ನೀನೂ ಬಾ' ಎಂದು ಅವಳು ಕಿರಿಯಳನ್ನು ಕೇಳಿದಳು. 'ಊಂ. ಹೊಂ! ನೀನೇ ಹೋಗು' ಎಂದಳವಳು. 'ಅಮ್ಮಾ, ಕೋಣೆಯಲ್ಲಿ ದೀಪಹಚ್ಚಬೇಕಂತೆ' ಎಂದು ಕಮಲೆಯು ತಾಯನ್ನು ಕರೆದಳು. 'ಏನೇ ಕಮಲಾ! ದೀಪಹಚ್ಚಲಿಕ್ಕೆ ತಾಯಿ ಬೇಕೇ' ಎನ್ನುತ್ತಾ ರಾಯರು ಅಸಮಾಧಾನ ತೋರಿದರು. ಕಮಲೆಯು ಮರುಮಾತಾಡದೆ ಒಳಗೆ ಹೋದಳು. ಅವಳ ಹಿಂದೆ ರಮೆಯೂ ಸಾಗಿದಳು. ಚಿಕ್ಕಮಕ್ಕಳಲ್ಲೊಬ್ಬ 'ಪಪ್ಪಾ, ಭೂತಾಂದ್ರೆ ಹೇಗಿರುತ್ತೆ?' ಎಂದ. ಅಷ್ಟರಲ್ಲಿ ರಾಯರ ಹೆಂಡತಿ ಶಾಂತಾ ಬಾಯಿಯು 'ಕೈದೀಪ ಹಿಡಿದುಕೊಂಡು ಬಂದು ಕೋಣೆಗೆ ಹೋಗಿ ದೀಪಹಚ್ಚಿದಳು. ರಾಯರು ಅಲ್ಲಿಗೆ ಹೋಗಿ ಅಂಗಿ ತೆಗೆದಿಡುತ್ತಾ 'ಮಕ್ಕಳಿಗಿಂದೇನಾಗಿದೆ? ದೀಪ ಹಚ್ಚಲಿಕ್ಕೆ ಹೇಳಿದರೆ ಮುಖ ಮುಖ ನೋಡುತ್ತಾರಲ್ಲ!' ಎಂದರು.

"ಏನೂ ಇಲ್ಲ, ಆದರೆ ಹುಡುಕಿಹುಡುಕಿ ನಿಮಗೆ ಇದೇ ಮನೆ ಸಿಕ್ಕಬೇಕೆ?"

"ಈಗೇನಾಯಿತು ಈ ಮನೆಗೆ? ಆಗ ನೀನೆ ಅಷ್ಟು ಹೊಗಳಿದ್ದೆಯಲ್ಲ?"

"ಹೌದು ಆದರೆ ಇದರಲ್ಲಿ 'ಅಜನೆ' ಆಗುತ್ತಂತೆ!"

"ಅಂದರೆ?"

"ಮಾಡಿನಲ್ಲಿ, ಅಟ್ಟದಲ್ಲಿ ಎಲ್ಲಾ ಶಬ್ದ ಆಗುತ್ತದಂತೆ."

"ಇಲಿ ಹೆಗ್ಗಣ ಬೆಕ್ಕು ಏನಾದರು ಓಡಿದರೆ ಶಬ್ದ ಆಗುತ್ತೆ."

"ಹಾಗಲ್ಲ, ರಾತ್ರಿಗೆ ಮಧ್ಯಾಹ್ನಕ್ಕೆ ಠಕ್! ಠಕ್! ಚಟಕ್ ಹೀಗೆಲ್ಲ ಶಬ್ದ ಆಗುತ್ತಂತೆ."

“ಆಗಬಹುದು. ಮನೆ ಬಹಳ ಹಳೇದಾಗಿಲ್ಲ; ಹಂಚು ಚಾವಣಿಯ ಮನೆ; ಬಿಸಿಲು ಚೆನ್ನಾಗಿ ಕಾದಾಗ ರಾತ್ರೆ ತಣ್ಣಗಾದಾಗ ನೂರಾರು ಕೀಲು ಸಂದುಗಳ ಸಾವಿರಾರು ಹಂಚುಗಳ ಬಿಗಿತವಿರುವ ಮನೆಯಲ್ಲಿ ಶಬ್ದವಾಗುವುದು ಆಶ್ಚರ್ಯವೆ?”

“ಕಿಟಕಿ ಬಾಗಿಲು, ಗುದ್ದಿದಂತಾಗುತ್ತದೆಯಂತೆ.”

“ಬಿಗಿಯಾಗಿ ಅಗಳಹಾಕಿದರೆ ಕಿಟಕಿ ಬಾಗಿಲುಗಳ ಅವಸ್ಥೆಯೇ ಹಾಗೆ! ಅದಿರಲಿ, ನಿನಗೆ ಇದೆಲ್ಲಾ ಹೇಳಿದವರ್‍ಯಾರು?”

“ಆಚೆ ಮನೆಯ ಕೆಲಸದವಳು ಆಗ ಬಂದಿದ್ದಳು. ಅಲ್ಲದೆ ಆ ಮನೆಯವರ ಹೆಂಡತಿ ನಮ್ಮನ್ನು ನೋಡಲಿಕ್ಕೆಂದು ಬಂದರು. ಆಗ ಮಾತಾಡುತ್ತ ಹಿಂದೆ ಈ ಮನೆಯಲ್ಲಿದ್ದವರ ಸಂಗತಿ ಬಂತು. ಯಾರೂ ಒಂದೆರಡು ತಿಂಗಳ ಮೇಲೆ ನಿಂತಿದ್ದಿಲ್ಲವಂತೆ ಇಲ್ಲಿ.”

“ಅವರೆಲ್ಲ ಅಂಜುಬುರುಕರು! ಅಜ್ಞಾನಿಗಳು! ಇಲಿಯೋಡಿದರೆ ಹುಲಿಯೋಡಿತೆಂದು ಬಣ್ಣಕೊಟ್ಟವರು!”

“ಹಾಗೇ ನಾನೂ ಹೇಳಿದೆ. ಆದರೆ ನಡುರಾತ್ರೆ ಪಕ್ಕದ ಹಲಸಿನ ಮರದಿಂದ ಹೊಯಿಗೆ ಉದುರುವುದಂತೆ! ಮನೆ ಸುತ್ತೂ ಗಗ್ಗರಗೆಜ್ಜೆ ಕಟ್ಟಿಕೊಂಡು ಭೂತ ತಿರುಗುತ್ತದಂತೆ! ಬಾಗಿಲ ಸರಪಳಿ ಅಲಗಿಸುತ್ತದಂತೆ. ಒಂದೊಂದು ಸಲ ಬಾವಿಗೆ ಡುಳುಂ ಎಂದು ಹಾರುತ್ತದಂತೆ! ಹೀಗೆಲ್ಲ ಹಿಂದಿನವರು ಹೇಳಿಹೇಳಿ ಮನೆಬಿಟ್ಟು ಹೋಗಿದ್ದಾರಂತೆ.”

“ಆ ಅಂತೆ–ಕಂತೆ ನಮಗೆ ಬೇಡ. ಅವರೆಲ್ಲ ಹುಚ್ಚರು. ಸುತ್ತಮುತ್ತಲಿನವರು ಹೇಳಿದ್ದನ್ನು ಕೇಳಿ ಅದನ್ನೇ ಕನಸು ಕಂಡಿರಬೇಕವರು.”

“ಏನೇ ಇರಲಿ, ನಾವಿದನ್ನು ಕ್ರಯಕ್ಕೆ ತೆಗೆದುಕೊಳ್ಳಬೇಕಾದರೆ ಆರು ತಿಂಗಳಾದರೂ ಇದರಲ್ಲಿದ್ದು ನೋಡಬೇಕು. ಅವಸರ ಮಾತ್ರ ಮಾಡಬೇಡಿ ಇದರಲ್ಲಿ.”

“ಆಗಲಿ, ಹಾಗೇ ಮಾಡೋಣವಂತೆ. ಆದರೆ ನೀನೂ ಮಕ್ಕಳೂ ಪುಕ್ಕಾದುದು ಆಶ್ಚರ್ಯ! ಪೋಲಿಸ್ ಅಧಿಕಾರಿಯಾಗಿದ್ದವರ ಬಳಿಗೆ ಭೂತ ಬರುವುದು ಉಂಟೆ? ಅವರೇ ದೊಡ್ಡ ಭೂತ! ತಿಳಿಯಿತೇ.”

“ಸರಿ, ಆದರೆ ನೀವು ಮಾತ್ರ ಕೆಲವು ದಿನಗಳ ವರೆಗೆ ಎಲ್ಲಿಗೂ ಹೋಗಬಾರದು.”

“ನಿಮ್ಮ ಈ ಹೆದರಿಕೆಯು ಹೋಗುವ ತನಕ ಸಾಯಂಕಾಲ ೬ ಘಂಟೆಗೇ ನಾನು ಮನೆಯಲ್ಲಿದ್ದೇನೆ. ಕಮಲಾ, ರಮಾ, ಇದಕ್ಕೆನೇ ಕೋಣೆಯೊಳಗೆ ಹೋಗಿ ದೀಪಹಚ್ಚಲಿಕ್ಕೆ ಹೆದರಿದುದು? ಕೋಣೆಯ ಕತ್ತಲಲ್ಲಿ ಭೂತವಿದೆಯೇನೇ? ಭೀತನ ಹಿಂದೆ ಭೂತ! ಯಾರ ಹೃದಯದಲ್ಲಿ ಕತ್ತಲೆಯಿದೆಯೋ ಅಲ್ಲಿದೆ ಭೂತ! ಭೂತ ನಲಿಯುವುದು ಅಜ್ಞಾನಸಾಗರದಲ್ಲಿ! ಇಲ್ಲಿಗೇಕೆ ಬರುತ್ತದೆ? ಮೇಲಾಗಿ, ರಿಟಾಯರ್ಡ್ ಪೋಲೀಸು ಇನ್ಸ್‌ಪೆಕ್ಟರನನ್ನು ಕಂಡರೆ ಭೂತ ತಾನೇ ರಿಟಾಯರ್ ಆಗುತ್ತೆ! ಈ ಮನೆಸೂತ್ರಕ್ಕೆ ಬರಲಾರದು ಅದು!”

“ಪಪ್ಪಾ, ಭೂತಾಂದ್ರೆ ಹೇಗಿರುತ್ತೆ ಅಪ್ಪ?” ಎಂದನು ತಿರುಗಿ ಸಣ್ಣ ಹುಡುಗ.

“ಕಳ್ಳನಾಯಿಯನ್ನು ಕಂಡಿದ್ದಿಯಲ್ಲಾ? ನಮ್ಮನ್ನು ಕಂಡರೆ ಬಾಲ ಅಡಿಗಿಟ್ಟುಕೊಂಡು ಕಂಪೌಂಡಿಂದ ಓಡಿಹೋಗುತ್ತೆ ನೋಡು! ಅದಕ್ಕೇ ಭೂತಾಂತಾರೆ ಇಲ್ಲಿಯವರು!”

ಆದರೆ ಈ ಭೂತದ ಸಮಸ್ಯೆಯು ವಿಠಲರಾಯರು ಯೋಚಿಸಿದಷ್ಟು ಸುಲಭವಿದ್ದಿಲ್ಲ. ಅಂದು ಸುಮಾರು ಅರ್ಧರಾತ್ರಿಯ ಸಮಯ ಬಾಗಿಲಿಗೋ ಮಾಡಿಗೋ ಏನೋ ಬಿದ್ದಂತಾಗಿ ರಾಯರಿಗೆ ಎಚ್ಚರವಾಯಿತು. ಆಲೈಸಿದರು. ತಾನು ಮಲಗಿದ್ದ ಕೊಠಡಿಯ ಬಳಿಯಲ್ಲಿದ್ದ ಹಲಸಿನ ಮರದಿಂದ ದರದರನೆ ಹೊಯಿಗೆಯ ಮಳೆಗರೆಯಿತು. ಆನಂತರ ಎಲ್ಲ ನಿಶ್ಶಬ್ದ! ಇದೇನು ಪಿಕಲಾಟ ಎಂದು ರಾಯರು ಯೋಚಿಸುತ್ತಿದ್ದರು. ಅಂತೂ ಶಾಂತಿ ನಿದ್ದೆಯಲ್ಲಿದ್ದುದು ಚೆನ್ನಾಯಿತೆಂದು ಸಮಾಧಾನಗೊಂಡರು. ಆದರೆ “ನೋಡಿದಿರಾ ಹೊಯಿಗೆ ಬಿದ್ದುದು?” ಎಂದಳು ಆ ತನಕ ಗಾಬರಿಯಿಂದ ಮೌನವಾಗಿದ್ದ ಶಾಂತಿ. ಮರುದಿನ ರಾಯರಿಗೂ ಅವರ ಪತ್ನಿಗೂ ಈ ವಿಷಯವಾಗಿ ಬಹಳ ಚರ್ಚೆ ನಡೆಯಿತು. ರಾಯರು ಇದನ್ನು ಶೋಧನೆ ಮಾಡುತ್ತೇನೆಂದರು. ಎಂತೆಂತಹ ಪತ್ತೆಮಾಡಿ ಕೀರ್ತಿಗೊಂಡಿದ್ದ ತನಗೆ ಈ ಭೂತವನ್ನು ಹಿಡಿಯಲಿಕ್ಕಾಗದೆ? ಎಂವೇ ಅವರ ವಾದ. ಆದರೆ

ಶಾಂತಿಯು ಮಾತ್ರ ಕಾಡಿ ಬೇಡಿ ಕಣ್ಣೀರಿಟ್ಟು ರಾತ್ರಿ ಹೊರಗೆ ಹೋಗ ಕೂಡದೆಂದು ಆಣೆ ಹಾಕಿದಳು. "ನಿಮಗಷ್ಟು ಧೈರ್ಯವಿದ್ದರೆ ಇನ್ನೂ ಕೆಲವು ದಿನ ವಾಸವಾಗಿದ್ದು ನೋಡೋಣ. ಇದರ ಉಪಟಳ ಹೆಚ್ಚಿದರೆ ಮನೆ ಬಿಟ್ಟು ಹೋಗಿಬಿಡೋಣ; ಬಾಡಿಗೆ ಕೊಟ್ಟರೆ ಬೇರೆ ಮನೆ ಸಿಗುವು ದಿಲ್ಲವೆ? ಶೋಧನೆ–ಗೀದನೆಯ ಕೆಲಸವನ್ನೆಲ್ಲ ಮನೆಯ ಧನಿಯೇ ನೋಡಿ ಕೊಳ್ಳಲಿ! ನೀವು ಮಾತ್ರ ರಾತ್ರಿ ಎಷ್ಟಕ್ಕೂ ಹೊರಗೆ ಹೋಗಕೂಡದು," ಎಂದು ಶಾಂತಿಯ ತೀರ್ಮಾನವಾಯಿತು. ಈ ತೀರ್ಮಾನವು ಶಾಂತಿ ಯಿಂದ ಮನೆಗೆಲಸದವಳಿಗೆ ತಿಳಿಯಿತೆಂದ ಮೇಲೆ ಅದೇನೂ ಗುಟ್ಟಿನದ್ದಾಗುಳಿಯಲಿಲ್ಲ ವೆನ್ನಿ. ಅಂತೆಯೇ ದಿನದಿನದ ಸುದ್ದಿ ಅವಳಿಂದ 'ಬ್ರೊಡ್‌ಕಾಸ್ಟ್' ಆಗಿ ಹಬ್ಬುತಿತ್ತು. ಆ ಸುದ್ದಿಗಳೇನೆಂಬಿರಾ! ಸಂಕ್ಷಿಪ್ತವಾಗಿ ಹೇಳುವುದಾದರೆ, ಮರುದಿನ ರಾತ್ರಿ ಬಾವಿಯಲ್ಲಿ 'ಡುಳುಂ' ಎಂದು ಶಬ್ದ! ಮೂರನೆಯ ದಿನ ಮನೆಯ ಸುತ್ತು ಯಾರೋ ನಡೆದಂತಾಗಿ ಎದುರಿನ ಬಾಗಿಲ ಸರಪಣಿ ಅಲುಗಿ ಸಿದ ಸದ್ದು! ನಾಲ್ಕನೆಯ ದಿನ ಗಗ್ಗರಗೆಜ್ಜೆ ಕಟ್ಟಿಕೊಂಡು ಮನೆಗೊಂದು ಸುತ್ತು ಬಂದು ಬಾವಿಗೆ ಹಾರಿದಂತೆ! ಐದನೆಯ ದಿನ ಮಧ್ಯಾಹ್ನದ ಮೇಲೆ ರಾಯರು ತನ್ನ ಪತ್ತೆದಾರಿಯ ಬುದ್ಧಿಯನ್ನೆಲ್ಲ ಉಪಯೋ ಗಿಸಿ ಈ ಸಮಸ್ಯೆಯನ್ನು ಬಿಡಿಸಲಿಕ್ಕೆ ಕುಳಿತಿದ್ದರು. ಅಂದು ಶಾಂತಿಯೂ ಮಕ್ಕಳೂ ಅವಳ ಅಣ್ಣನ ಮನೆಗೆ ಹೋಗಿದ್ದರು. ಬರುವುದು ಮರುದಿನ. ಆದರೆ ಅಂದು ರಾತ್ರಿ ತಾನು ಆಳುಗಳನ್ನಿಟ್ಟುಕೊಳ್ಳುತ್ತೇನೆಂದು ಶಾಂತಿ ಯನ್ನು ಶಾಂತಪಡಿಸಿ ರಾಯರು ಕಳುಹಿಸಿದ್ದರು. ನೆರಮನೆಯ ಕೊಗ್ಗಣ್ಣ ಕಮ್ತಿರು ಬೀದಿಯಲ್ಲಿ ಹೋಗುತ್ತಾ ರಾಯರೊಬ್ಬರೇ ಕುಳಿತಿರುವುದನ್ನು ಕಂಡು ಒಳಗೆ ಬಂದರು. ರಾಯರಿಗೂ ಅವರೊಡನೆ ಮಾತನಾಡಬೇಕೆಂದಿತ್ತು.

"ಬನ್ನಿ, ನಿಮ್ಮೊಡನೆ ಒಂದು ವಿಚಾರ ಕೇಳಬೇಕೆಂದಿತ್ತು. ನೀವೇ ಬಂದುಬಿಟ್ಟಿರಿ! ಚೆನ್ನಾಯಿತು. ಈ ಮನೆಯ ಭೂತದ ಕಾಟದ ವಿಷಯ ನಿಮಗೇನಾದರೂ ಗೊತ್ತಿದೆಯೆ?"

"ಅಯ್ಯೋ, ನಿಮ್ಮ ಕಿವಿಗೂ ಅದು ಬಿದ್ದಿದೆಯೇ? ನಾನು ನಮ್ಮವಳ ಹತ್ತಿರ ಜಾಗ್ರತೆ ಹೇಳಿದ್ದೆ–ಎಲ್ಲಾದರೂ ಬಾಯಿತಪ್ಪಿಯಾದರೂ ಬಾಯಿ ಬಿಟ್ಟುಬಿಡಬೇಡಾಂತ! ಆದರೆ ಅವೆಲ್ಲ ಚಿಲ್ಲರೆ ಜನರ ಮಾತು. ಇತ್ತೀಚೆಗೆ

ಸುಮಾರು ಒಂದು ಒಂದೂವರೆ ವರ್ಷದಿಂದ ನಾಲ್ಕಾರು ಸಂಸಾರಗಳು ಬಂದವು; ಬಿಟ್ಟು ಹೋದುವು! ಅಜ್ಞಾನಿಗಳಯ್ಯ ಎಲ್ಲ! ಅವರ ಹೇಳಿಕೆ ನಂಬತಕ್ಕದ್ದಲ್ಲ ಸ್ವಾಮಿ, ಬರೀ ಭ್ರಮೆಯಾಗಲಿಕ್ಕೂ ಸಾಕು! ನಾನು ನಂಬ ಬೇಕಾದರೆ ತಮ್ಮಂಥವರ ಬಾಯಿಂದ ಏನಾದರೂ ಬರಬೇಕು. ತಮಗೇ ನಾದರೂ ತೋರಿಬಂತೇ ಹೇಳಿ."

"ಬಾರದೆ ಕೇಳುತ್ತೇನೆಯೆ? ಏನೇನು ಸುದ್ದಿಯುಂಟೋ ಅದೆಲ್ಲ ನಡೆ ಯುತ್ತೆ ಇಲ್ಲಿ! ನನಗದರಲ್ಲಿ ನಂಬಿಕೆ ಇಲ್ಲದಿದ್ದರೂ ಈಗ ನಂಬಬೇಕಾಗಿದೆ."

"ತಾವು ಹೇಳಿದ ಮೇಲೆ ನನಗಿನ್ನು ಸಂಶಯವಿಲ್ಲ; ಭೂತಗಳ ರೀತಿ ಯೇ ವಿಚಿತ್ರ! ಅದರಲ್ಲಿ ನಮ್ಮ ತರ್ಕದ ಬೇಳೆ ಬೇಯುವುದಿಲ್ಲ. ಅದನ್ನು ಪರೀಕ್ಷೆಮಾಡಹೋಗುವುದೂ ವಿಷ ಪರೀಕ್ಷಿಸುವುದೂ ಒಂದೇ. ಒಟ್ಟಾರೆ, ಹಾಗಾಗುತ್ತದೆಂದಾದ ಮೇಲೆ ತಾವು ಜಾಗ್ರತೆಯಿಂದಿರುವುದೊಳ್ಳೆತು! ಏನೇ ಆಗಲಿ, ತಾವು ಬಾಗಿಲು ತೆರೆದು ಹೊರಗೆ ಬರಬೇಡಿ. ಈ ಸುದ್ದಿ ಕೇಳಿದಂದಿನಿಂದ ನಾವ್ಯಾರೂ ರಾತ್ರಿ ಹೊರಗೆ ಬರುವುದೇ ಇಲ್ಲ. ಆದರೆ ಹಿಂದಿನವರಂತೆ ತಾವು ಇಷ್ಟು ಬೇಗನೇ ಮನೆ ಬಿಡಬಾರದು. ಮಕ್ಕಳು ಮರಿಗಳಿಗೇನಾದರೂ ಕೆಡಕಿಲ್ಲವಷ್ಟೆ? ಹಾಗೇನಾದರೂ ಆದರೆ ಆ ಮೇಲೆ ನಿಲ್ಲಬಾರದು. ಒಟ್ಟಿನ ಮೇಲೆ, ಈ ಭೂತದ ಕಾಟದಿಂದ ಈ ಮನೆಯು ಮಕ್ಕಳು ಮರಿಗಳಿಗೆ ಜನಜಾನುವಾರುಗಳಿಗೆ ಆಗುವುದಿಲ್ಲವೆಂದು ಹಿಂದಿ ನವರು ಹೇಳುತ್ತಿದ್ದರು. ಆದರೆ ನಾನಿಂದಿನ ವರೆಗೆ ನಂಬಿದ್ದಿಲ್ಲ. ಈಗ ತಮ್ಮಂತಹರ ಬಾಯಿಂದ ಬಂದ ಮೇಲೆ ನನಗೂ ಪುಕುಪುಕು ಹಿಡಿದಿದೆ. ನನ್ನ ದುರದೃಷ್ಟವೆನ್ನಬೇಕು!"

"ನಿಮ್ಮ ದುರದೃಷ್ಟ ಇದರಲ್ಲಿ ಎಲ್ಲಿಂದ ಬಂತು? ನಿಮ್ಮ ಮನೆಗೂ ಭೂತ ಬರುವುದೆಂದೊ!"

"ಇಷ್ಟರ ವರೆಗೆ ಹಾಗೇನೂ ಇಲ್ಲ. ಆದರೆ ಈ ಮನೆ ನನಗೆ ಒಂದೂ ವರೆ ಸಾವಿರ ರೂಪಾಯಿಗೆ ಈಡಾಗಿತ್ತು. ಇದನ್ನು ಯಾರಿಗಾದರೂ ಮಾರಿ ನನ್ನ ಸಾಲ ತೀರ್ಮಾನಮಾಡಬೇಕೆಂದು ಇದರ ಯಜಮಾನನ ಯೋಚನೆಯಿತ್ತು. ಯಾರಾದರೂ ಐದಾರು ಸಾವಿರ ರೂಪಾಯಿ ಕೊಡು ವಂತಹ ಮನೆ ಇದು! ಆದರೆ ಸಿಕ್ಕಾಬಟ್ಟೆ ಜನರಿಗೆ ಬಾಡಿಗೆಗೆ ಕೊಟ್ಟು

ಭೂತಸಂಚಾರದ ಮನೆಯೆಂಬ ಹೆಸರು ಹಾಕಿಸಿಕೊಂಡ! ಮಾರಾಟವಾಗ ಲಿಲ್ಲ. ಆದರೆ ನನಗೆ ದುಡ್ಡು ಬೇಕಿತ್ತು. ದಾವಾ ಹೂಡಿ ಡಿಕ್ರಿಮಾಡಿಕೊಂಡೆ. ಈಗ ಅದು ಸುಮಾರು ಎರಡೂವರೆ ಸಾವಿರ ಆಗಬಹುದು. ಹರಾಜಿಗೆ ಇಡಿ ಸಿದ್ದೇನೆ ಇದನ್ನು! ನೀವು ಬಂದದ್ದು ಕೇಳಿ ನನಗೆ ತುಂಬಾ ಸಂತೋಷ ಆಗಿತ್ತು! ನಿಮ್ಮಂತಹರ ಬಾಯಿಂದ ಈ ಸುದ್ದಿಯು ಸುಳ್ಳೆಂದಾಗಿ ನೀವಾ ಗಲೀ ಬೇರೆಯವರಾಗಲೀ ಕ್ರಯಕ್ಕೆ ಪಡಕೊಂಡು ನನ್ನ ದುಡ್ಡು ನನಗೆ ಬಂದೀತೆಂಬ ಆಶೆಯಿತ್ತು! ನೀವೂ ಹೀಗೆ ಹೇಳಿದುದರಿಂದ ಇದೆಲ್ಲಾದರೂ ನನ್ನ ತಲೆಯ ಮೇಲೇ ಬಂದು ಬಿಡುತ್ತೋ ಎಂದು ಈಗ ಭಯವಾಗತೊಡ ಗಿದೆ! ಹಾಗೇನಾದರೂ ಬಂದುಬಿಟ್ಟರೆ ನಾನು ನನ್ನ ಮಕ್ಕಳುಮರಿಗ ಳನ್ನು ಹಾಕಿಕೊಂಡು ಇದರಲ್ಲಿ ಹೇಗೆ ಇರಲಿ! ಯಾವ ಮಂತ್ರವಾದಿಯ ಕಾಲಿಗೆ ಬೀಳಬೇಕೋ! ಏನು ಖರ್ಚೋ! ಆ ಪರಮಾತ್ಮನೇ ಬಲ್ಲ!"

"ಹಾಗಾದರೆ ನೀವಿರುವ ಆ ಮನೆ ನಿಮ್ಮ ಸ್ವಂತದ್ದಲ್ಲವೆ?"

"ಬಾಡಿಗೆಯದು ಸ್ವಾಮಿ, ಈ ಸಾಲದ ದುಡ್ಡು ಬರಮಾಡಿಕೊಂಡು ಎಲ್ಲಾದರೂ ಚಿಕ್ಕದೊಂದು ಗುಡಿ ಕಟ್ಟಿಕೊಳ್ಳಬೇಕೆಂದಿದ್ದೆ. ಬಾಡಿಗೆ ಕೊಟ್ಟೂ ಕೊಟ್ಟೂ ಸಾಕಾಯಿತು! ಆದರೆ ನನ್ನ ಹಣೆಯಲ್ಲಿ ಏನು ಬರೆದಿ ದೆಯೋ, ಆ ದೇವರಿಗೇ ಗೊತ್ತು! ಯಾರ ಸಂಗವಾದರೂ ಬೇಕು–ಭೂತದ ಸಂಗ ಬೇಡ! ಆದುದರಿಂದ ತಮಗೊಂದು ಮಾತು ಹೇಳುತ್ತೇನೆ. ಆ 'ಅಜನೆ' ಆದಾಗ ಹೊರಗೆ ಮಾತ್ರ ಬರಬೇಡಿ! ಎಂಥ ಭಯಂಕರ ರೂಪ ಕಾಣಿ ಸುತ್ತೋ! ಏನು 'ತಾರ್ಕಣೆ' ಆಗಿಬಿಡುತ್ತೊ! ನಮಗೆಷ್ಟು ಎದೆ ಧೈರ್ಯ ಇದ್ದರೂ ಆ ಸಮಯಕ್ಕೆ ನೀರಾಗಿ ಹೋಗಿಬಿಡಬಹುದು! ಅದಕ್ಕೇ ಈ ಸುದ್ದಿ ಕೇಳಿದಂದಿನಿಂದ ನಾನದನ್ನು ನಂಬದಿದ್ದರೂ ಒಂದೇ ಒಂದು ರಾತ್ರಿ ಹೊರಗೆ ಬಂದವನಲ್ಲ!"

"ಹಾಗೆಲ್ಲ ಹೊರಗೆ ಬರಲಿಕ್ಕೆ ನನಗೇನಾದರೂ ಜೀವಭಾರವಾಗಿಲ್ಲ! ಇಲ್ಲವೆ, ನಾನೇನಾದರೂ ಸಂಸಾರಬಿಟ್ಟ ಬೈರಾಗಿಯೂ ಅಲ್ಲವೆನ್ನಿ! ನಮ್ಮ ಪ್ರಾಣಕ್ಕೂ ಈ ಮನೆಗೂ ಗಂಟಿಲ್ಲ. ಇನ್ನೂ ಸ್ವಲ್ಪ ದಿವಸ ನೋಡು ತ್ತೇನೆ. ಹೀಗೇ ಹೆಚ್ಚಾಗುತ್ತಾ ಬಂದರೆ ಬಿಟ್ಟುಹೋಗಿ ಬಿಡುವುದು! ದುಡ್ಡುಕೊಟ್ಟೂ, ಹೊಳೆ ಈಸಿ ಮೊಸಳೆ ಬಾಯಿಗೆ ತುತ್ತಾಗುವ ಹುಚ್ಚುತನ ನನ್ನಲ್ಲಿಲ್ಲ! ಆ ಎದೆಗಾರಿಕೆಗೆ ಹೋಗುವವನೂ ನಾನಲ್ಲ!"

"ಚಿನ್ನದಂಥಾ ಮಾತು! ಹ್ಯಾಕೋರ್ಟು ಇಸ್ಮಿಸ್ಪಾಲ್ ತೀರ್ಪಿನ ಹಾಗೆ ತಮ್ಮ ನುಡಿಗಟ್ಟು! ಸುಮ್ಮನೆ ಬಹುಮಾನಪಟ್ಟ ಇನ್ಸ್‌ಪೆಕ್ಟರಿಕೆ ಸಿಕ್ಕಿತ್ತೇ? ಆಗಾಗ ಬರುತ್ತೇನೆ ಸ್ವಾಮಿ, ಸಾವಧಾನವಾಗಿ ವಿಚಾರಮಾಡೋಣ, ಅಂತೂ ಅವಸರ ಮಾಡಬೇಡಿ; ಅಪ್ಪಣೆಯಾಗಲಿ!"

* * * * *

ಅಂದು ಕಗ್ಗತ್ತಲೆ. ರಾತ್ರಿ ರಾಯರೊಬ್ಬರೇ ಪೋರ್ಟಿಕೋದಲ್ಲಿ ಕೂತು ಓದುತ್ತಿದ್ದರು. ಹತ್ತೂವರೆ ಗಂಟೆ ಹೊಡೆಯಿತು. ಆಗ ಅವರಿಗೇನು ಹುಚ್ಚುಬುದ್ಧಿ ಬಂತೋ! ಆ ಭೂತವನ್ನು ನೋಡಿಬಿಡಬೇಕೆಂದು ಛಲತೊಟ್ಟು ಎದೆ ಗಟ್ಟಿ ಮಾಡಿಕೊಂಡರು! ಕೈಯಲ್ಲಿ ಕಪ್ಪು ಸವರಿದ ಬಲಿಗೆಯ ದೊಣ್ಣೆ. ಆ ದೊಣ್ಣೆ ಬೀಸಿ ಎಷ್ಟೋ ಕಳ್ಳರ ಕೈಯಕತ್ತಿಗಳನ್ನು ಕೆಳಗುರುಳಿಸಿದ ಖ್ಯಾತಿ ಅವರಿಗಿತ್ತು. ಅದನ್ನು ಹಿಡಕೊಂಡು ಒಳಗಿನ ಬಾಗಿಲುಗಳನ್ನು ಹಾಕುತ್ತಾ ಬಂದರು. ದೀಪಗಳನ್ನು ನಂದಿಸಿದರು. ಎದುರಿನ ಬಾಗಿಲಿನ ಕೀಲಿಕೈ ತಿರುಗಿಸಿದರು. ತಾನು ಕಪ್ಪುಬಟ್ಟೆಹೊದ್ದು ಬಾಗಿಲ ಎದುರು ಪೋರ್ಟಿಕೋದ ಕಂಬಕ್ಕೆ ಅಂತು ನಿಂತರು. ಹೊದ್ದ ಕಪ್ಪು ಬಟ್ಟೆಯಿಂದಾಗಿ ಅವರ ಮೈಯೇ ಅವರಿಗೆ ಕಾಣುತ್ತಿದ್ದಿಲ್ಲ. ಅವರೂ ಕತ್ತಲೂ ಅಷ್ಟು ಚೆನ್ನಾಗಿ ಒಂದುಗೂಡಿ ಹೋಗಿದ್ದುವು!

ಸುಮಾರು ೧೨ ಗಂಟೆಯ ಸಮಯ, ಭೂತ ಬರುವ ಹೊತ್ತು. ಬಂತೇ ಬಂತು! ಮನೆಯ ಹಿಂಬದಿಯಲ್ಲಿ ಗಗ್ಗರ ಗೆಜ್ಜೆಯ ಧ್ವನಿ ಕೇಳಿಸಿತು! ಸದ್ದು ಮುಂದೆ ಮುಂದೆ ಬಂತು! ಕಿಟಕಿಗಳನ್ನು ಗುದ್ದಿದಂತಾಯ್ತು! ಹಲಸಿನ ಮರದಿಂದ ಹೊಯಿಗೆ ಉದುರಿತು! ಗಗ್ಗರ ಗೆಜ್ಜೆಯ ಧ್ವನಿ ಮತ್ತೂ ಹತ್ತಿರ ಬಂತು! ಇನ್ನೂ ಹತ್ತಿರ, ಪೋರ್ಟಿಕೋದ ಮೇಲೆ! ಬಾಗಿಲ ಸರಪಳಿಯೂ ಗಗ್ಗರಗೆಜ್ಜೆಯೂ ಒಟ್ಟಿಗೆ 'ಘುಲ್-ಘುಲ್-ಘುಲ್' ಎಂದಿತು ಮೂರು ಬಾರಿ! ರಾಯರೆಲ್ಲಿ? ನಿದ್ದೆಹೋಗಿದ್ದರೇ? ಮೂರ್ಛೆ ಬಿದ್ದಿದ್ದರೇ? ಇಲ್ಲ! ಆಲಿಸಿ, 'ಚಟ್! ಘೈಲ್!' ಅದೇನು? ರಾಯರು ದೊಣ್ಣೆಯನ್ನು ಬೀಸಿ ಸರಪಳಿಯು ಕುಲಕುವ ಕಡೆಗೆ ಗುರಿಯಿಟ್ಟು ಹೊಡೆದಿದ್ದರು. ಅದೇ ಚಟ್! ಭೂತದ ಕೈಯಲ್ಲಿದ್ದ ಗಗ್ಗರ ಗೆಜ್ಜೆಯು ಘೈಲ್ ಎಂದು ಕೆಳಗೆ ಬಿದ್ದಿರಬೇಕು! ಭೂತವು ಓಡುವ ಸದ್ದನ್ನು ರಾಯರು ಕೇಳಿದರು! ಬಂದ ಹಾದಿಯಾಗಿಯೇ ಓಡಿತು ಭೂತ! ರಾಯರು ಹಿಂದಿನಿಂದೋಡಿದರು.

ಆದರೆ ಅವರು ಮನೆಯ ಹಿಂದೆ ಹೋಗುವಷ್ಟರಲ್ಲಿ ಅದೆಲ್ಲೋ ಕತ್ತಲೊಳಗೆ ಮಾಯವಾಗಿತ್ತು! ಅಲ್ಲೇ ನಿಂತು ಆಲಿಸಿದರು. ಅದು ಪಾಗಾರಹತ್ತಿ ಕೊಗ್ಗ ಕಮ್ತಿರ ಹಿತ್ತಲಿಗೆ ಹಾರಿದ ಸದ್ದು ಕೇಳಿಸಿತು!

* * * * *

ಎಂಟು ದಿವಸ ಕೊಗ್ಗ ಕಮ್ತಿರು ಮನೆಯಿಂದ ಹೊರಗೆ ಬಂದಿಲ್ಲ. ಅವರ ಎರಡು ಮುಂಗೈ ಗಂಟುಗಳೂ ಅಷ್ಟು ಬೀಗಿಕೊಂಡಿದ್ದುವಂತೆ! ಏನೇನೋ ಲೇಪಹಾಕಿ ಹಾಕಿ ಕೊನೆಗದು ಗುಣವಾಯಿತೆನ್ನಿ. ಇತ್ತ ಈ ಮನೆಗೆ ಭೂತದ ಕಾಟವೂ ತಪ್ಪಿತೆನ್ನಿ! ಮೊನ್ನೆ ರಾಯರೇ ಅದನ್ನು ಐದು ಸಾವಿರ ರೂಪಾಯಿ ಕೊಟ್ಟು ಕ್ರಯಕ್ಕೆ ಪಡಕೊಂಡರು. ಕಮ್ತಿರಿಗೆ ಇಂದು ಹಣವನ್ನು ತೆತ್ತು ರಶೀದಿ ಪಡೆದಾಗ "ಅಂತೂ ಅದು ನಿಮ್ಮ ತಲೆಯ ಮೇಲೆ ಬೀಳದಿದ್ದುದು ನಿಮ್ಮ ಪುಣ್ಯವೋ ನನ್ನ ಭಾಗ್ಯವೋ ಆ ಪರಮಾತ್ಮನಿಗೇ ಗೊತ್ತು!" ಎಂದರು. "ಅಂತೂ ನನ್ನ ತಲೆಯಿಂದ ತಪ್ಪಿತಲ್ಲ!" ಎನ್ನುತ್ತ ಕೊಗ್ಗ ಕಮ್ತಿರು ಅಲ್ಲಿಂದೆದ್ದು ಹೋದರು. ಅದು ಎಂದರೆ ಯಾವುದು? ಆ ಮನೆಯೋ? ರಾಯರ ದೊಣ್ಣೆಯೋ?

# ಪಳ್ಪಟನಾಯ್ಕ

ಉಡುಪಿಯ ಅನಂತೇಶ್ವರ ದೇವಸ್ಥಾನದ ಪೌಳಿಯಲ್ಲಿ ಜನರದೊಂದು ಗುಂಪು. ಗಂಡಸು ಹೆಂಗಸರೆಂದು ಸುಮಾರು ಐವತ್ತು ಮಂದಿ ಗಂಟುಮೂಟೆಗಳನ್ನು ಕಟ್ಟಿಕೊಂಡು ಕುಳಿತಿರುವರು. ಅವರ ಬಳಿಯಲ್ಲಿ ಅವರ ಬಂಧುಬಾಂಧವರಿಷ್ಟಮಿತ್ರರ ವರ್ಗಕ್ಕೆ ಸೇರಿದವರನೇಕರು ಕುಳಿತು ಮಾತಾಡುತ್ತಿರುವರು. ಅಲ್ಲಿ ನಡೆಯುತ್ತಿರುವ ಮಾತುಕತೆಗಳನ್ನು ಕೇಳಿದರೆ ಅವರಲ್ಲನೇಕರು ಯಾತ್ರಾರ್ಥಿಗಳಾಗಿ ಹೊರಟವರೆಂದೂ ಮತ್ತುಳಿದವರು ಅವರನ್ನು ಕಳುಹಿಸಿಕೊಡಲು ಬಂದವರೆಂದೂ ತಿಳಿದು ಬರುವುದು. ಸರಿ, ನಿಶ್ಚಿತ ಮುಹೂರ್ತವು ಒದಗಿತು. 'ತಿರುಪತಿವಾಸ! ಶ್ರೀನಿವಾಸ! ಶ್ರೀಮದ್ರಮಾರಮಣಗೋವಿಂದಾ, ಗೋವಿಂದ!' ಎಂದು ಹೇಳುತ್ತ ಎಲ್ಲರೂ ಎದ್ದು ನಿಂತರು. ಯಾತ್ರಿಕರಾಗಿ ಹೊರಟವರು ತಮ್ಮ ತಮ್ಮ ಗಂಟು ಮೂಟೆಗಳನ್ನು ಹೊತ್ತುಕೊಂಡು, 'ಶ್ರೀಮದ್ರಮಾರಮಣ ಗೋವಿಂದಾ, ಗೋವಿಂದ' ಎಂಬ ನಾಮಸಂಕೀರ್ತನೆಯನ್ನು ಒಟ್ಟಾಗಿ ಹೇಳುತ್ತ ಹೇಳುತ್ತ ಕಿನ್ನಿಮೂಲ್ಕಿಯತ್ತ ಕಡೆಯ ದಾರಿಹಿಡಿದರು. ಅವರಲ್ಲೊಬ್ಬನು ಅತಿ ದೊಡ್ಡದೊಂದು ಮೂಟೆಯನ್ನು ಹೊತ್ತಿದ್ದನು. ಅದನ್ನು ಪರೀಕ್ಷಿಸಿ ನೋಡಿದರೆ ಅದು ನಾಲ್ಕಾರು ಗಂಟುಗಳನ್ನು ಒಟ್ಟು ಮಾಡಿ ಕಟ್ಟಿದ್ದ ದೊಡ್ಡ ಮೂಟೆಯೆಂದು ಭಾಸವಾಗುತ್ತಿತ್ತು. ಆತನಾದರೋ ಹರುಕು ಪಂಚೆಗಳನ್ನು ಸೊಂಟಕ್ಕೆ ಸುತ್ತಿಕೊಂಡಿದ್ದನು. ಮತ್ತೊಂದೆರಡು ಪಂಚೆಯ ಸಣ್ಣದೊಂದು ಗಂಟನ್ನು ಪ್ರತ್ಯೇಕವಾಗಿ ಬಗಲಿಂದ ತೂಗಹಾಕಿದ್ದನು. ಇದು ಮಾತ್ರ ಆವನದು. ಹಾಗಾದರೆ ತಲೆಯ ಮೇಲಿನ ಆ ದೊಡ್ಡ ಮೂಟೆ? ಬೇರೆ ಯಾತ್ರಿಕರ ಗಂಟು ಮೂಟೆಗಳನ್ನು ಹೊತ್ತಾದರೂ ಶ್ರೀನಿವಾಸನ ದರ್ಶನ ಮಾಡಬೇಕೆಂದು ಇವನೇನು ಹೊರಟಿರುವನೆ? ಅಷ್ಟೊಂದು ಭಕ್ತಿ ಇವನಲ್ಲಿರುವುದೆ? ಏಕಿರಬಾರದು! ಆಲಿಸಿರಿ, ಬೇರೆ ಯಾತ್ರಿಕರು 'ಶ್ರೀಮದ್ರಮಾರಮಣ

ಗೋವಿಂದಾ' ಎನ್ನುವಷ್ಟರಲ್ಲಿ ಈತನ ಬಾಯಿಯಿಂದ ಅತ್ಯುತ್ಸಾಹ ಪೂರ್ವಕವಾಗಿ ಹೊರಡುವ 'ಗೋ ೯ ೯ ೯ ೯ ೯ ವಿ ೦ ದ' ಎಂಬುದು ಆತನ ಹೃದಯದ ಎಷ್ಟೊಂದು ಆಳದಿಂದ ಹೊರಟೇಳುತ್ತಿದೆ! ಇಷ್ಟೊಂದು ಪರ್ಯಂತ ತಡೆಗಟ್ಟಿ ಹೃದಯದೊಳಗೆ ಒತ್ತೊತ್ತಿಟ್ಟಿದ್ದ ಆ ಭಕ್ತಿಯು ಇಂದು ಏರಿಮುರಿದು ಹೊರಹರಿಯುವ ನದಿಯ ಪ್ರವಾಹದಂತೆ ಹೊರ ಹೊಮ್ಮುತ್ತಿದೆಯೆಂದು ವ್ಯಕ್ತವಾಗುವುದಿಲ್ಲವೆ! ಆ ಗೋ ೯ ೯ ವಿಂದ ಎಂಬ ನಾಮೋಚ್ಚಾರಣೆಯನ್ನು ಮಾಡುವಾಗ ಆತನಿಗೆ ತನ್ನ ತಲೆಯ ಮೇಲಿನ ಆ ದೊಡ್ಡ ಹೇರಿನ ಭಾರವಾಗಲಿ ಮಾರ್ಗಾಯಾಸವಾಗಲಿ ತಿಳಿ ಯುತ್ತಿದ್ದಿಲ್ಲ. ಬದಲಾಗಿ ಹೊಸತೊಂದು ಬಗೆಯ ಶಕ್ತಿಯು ಅವನ ನರನಾಡಿ ಗಳಲ್ಲಿ ತುಂಬುತ್ತಿತ್ತು; ಅವನು ಕುಣಿಕುಣಿದು ಓಡುವಂತೋಡಿ ಮುಂದಾ ದವರನ್ನು ಹಿಂದಿಕ್ಕಿ ಆ ಯಾತ್ರಿಕರನ್ನೆಲ್ಲ ಬೆರಗುಗೊಳಿಸುತ್ತಿದ್ದನು.

ಕಾಲು ನಡೆಯ ತಿರುಪತಿ ಯಾತ್ರೆ! ಹಾದಿಯುದ್ದಕ್ಕೂ 'ಶ್ರೀಮುದ್ರಮಾರಮಣ ಗೋವಿಂದಾ ಗೋವಿಂದ' ಎಂದು ಕೂಗುತ್ತ ಹೋಗುವುದು! ಹೀಗೆಲ್ಲಾದರೂ ಇದೆಯೆ? ಯಾತ್ರಿಕರು 'ಮೋಟಾರ್ ಸ್ಟೇಶನಿ'ಗೆ ಹೋದರಾಯಿತು, ಬೇಕಾದರೆ ಮೋಟಾರ್ ಬಂಡಿಯೇ ಯಾತ್ರಿಕರು ಹೊರಡುವಲ್ಲಿಗೆ ಬಂದೇ ಬಿಡುವುದು. ಇಂತಿರಲು ಇದೇನು ೨೦ನೆಯ ಶತಮಾತದಲ್ಲಿ ನಡೆದುದೊ? ೧೦ನೆಯ ಶತಮಾನದಲ್ಲಿ ಆದುದೋ ಎಂದು ಕೇಳುವಿರಾ? ನಮ್ಮ ಈ ಯಾತ್ರಿಕರು 'ಶ್ರೀಮುದ್ರಮಾರಮಣ ಗೋವಿಂದಾ, ಗೋವಿಂದ' ಎಂದು ಹೇಳುತ್ತ ಹೋಗಲು ನಾಚುವಷ್ಟು ಶಿಥಿಲ ಭಕ್ತಿಯ ಸುಖಪ್ರವಾಸಾಪೇಕ್ಷೆಯ ೨೦ನೆಯ ಶತಮಾನದ ಯಾತ್ರಿಕರಲ್ಲ. ನಮ್ಮ ಕಥೆಯು ಸುಮಾರು ಒಂದು ಸಾವಿರ ವರ್ಷಗಳ ಹಿಂದಿನದು.

ಆಗ ಉಡುಪಿಯ ವಾಯವ್ಯ ಬದಿಯ ಬನ್ನಿಂಜೆಯಲ್ಲಿ ಕಡು ಬಡವನೊಬ್ಬನಿದ್ದನು. ಬರೇ ಗರೀಬನೆಂದೋ ಏನೋ ಆತನನ್ನು ಉಡುಪಿಯವರೆಲ್ಲ 'ಪಳ್ಪಟ್ ನಾಯ್ಕ' ಎಂದು ಕರೆಯುತ್ತಿದ್ದರು. ಲೌಕಿಕ ಸ್ಥಿತಿಗತಿಯಲ್ಲಿ ತುಲನೆ ಮಾಡಿದರೆ ಅವನು ಬಡವರಲ್ಲಿ ಬಡವನೆಂಬು ದಕ್ಕೇನೂ ಸಂಶಯವಿದ್ದಿಲ್ಲ. ಗುಡ್ಡೆಯ ಬದಿ ಯಾರದ್ದೊ ಬೇಡವೆಂದು

ಬಿಟ್ಟಿದ್ದ ಅದೊಂದು ಸ್ಥಳದಲ್ಲಿ ಅವನ ಮನೆ. ಮನೆಯೆಂದರೆ ಮುಳಿ ಹ
ಮಾಡಿನ ಎರಡದೆಯ ಚಿಕ್ಕದೊಂದು ಗುಡಿಸಲು; ಅದಕ್ಕೆ ಹರ
ಮುರುಕಾದ ಮಡಲುತಟ್ಟಿಯ ಗೋಡೆ. ಬೇಸಿಗೆಯಲ್ಲಿ ಸೂರ್ಯ
ಕಿರಣಗಳೂ ಮಳೆಗಾಲದಲ್ಲಿ ನೀರೂ ಒಳಗೆ ಪ್ರವೇಶಿಸುವುದಕ್ಕೆ
ಯೇನೂ ಇದ್ದಿಲ್ಲ. ಆದರೆ ಎದುರಲ್ಲಿದ್ದ ದನಕರುಗಳ ಕೊಟ್ಟಿ
ಮಾತ್ರ ಕಬ್ಬಿನ ಸೋಗೆಗಳನ್ನು ಎಲ್ಲಿಂದಾದರೂ ಬೇಡಿ ತಂದು ಹೊ
ತಾಳಿಯ ಮಡಲುಗಳಿಂದ ತಟ್ಟಿ ಕಟ್ಟಿ ಅದನ್ನು ಆದಷ್ಟು ಬೆಚ್ಚಗ
ಚೊಕ್ಕಟವಾಗಿ ಇಟ್ಟಿದ್ದನು. 'ಅಯ್ಯೊ, ಪಾಪ! ಮೂಕ ಪ್ರಾಣಿಗ
ಅವುಗಳಿಗೆಂದೂ ಪೀಡೆಯಾಗಬಾರದು' ಎಂಬುದು ಪಳ್ಪಟನ ಸೊ
ಬಡ ಪಳ್ಪಟನಿಗೆ ಆ ನಡೆಗಳೆಲ್ಲಿಂದ? ಒಂದೊಮ್ಮೆ ಉಡುಪಿಯ ಆಚಾ
ರೊಬ್ಬರ ದನವನ್ನು ಸಾಕಿ ಕರು ಹಾಕಿಸಿ ಕೊಟ್ಟಿದ್ದ
ಅದಕ್ಕವರು ಆ ಹೆಂಗರುವನ್ನು ಇವನಿಗೆ ಉಚಿತವಾಗಿ ಕೊಟ್ಟಿದ್ದ
ಅದು ದನವಾಯಿತು. ಅದಕ್ಕೆ ಕರುಗಳಾದವು; ಕರುಗಳಿಗೆ ಕರುಗಳಾದ
ಈ ನಡೆಗಳೇ ಇವನ ಲೌಕಿಕ ಸೊತ್ತುಗಳು.

ಬಡ ಪಳ್ಪಟನಾಯ್ಕನು ಬಡವರ ಗೆಳೆಯ. ನೆರೆಹೊರೆಯ
ಬಡವರ್‍ಯಾರೇ ಆಗಲಿ ಅಸ್ವಸ್ಥದಲ್ಲಿದ್ದರೆ ಅಲ್ಲಿಗಾತನು ದಿನಾಲೂ ಹೊ
ವಿಚಾರಿಸದೆ ಇರುತ್ತಿದ್ದಿಲ್ಲ. "ಅಣ್ಣಾ, ಅಕ್ಕಾ, ಮದ್ದಿಗೋ ಅನುಪಾನಕ
ಹಾಲು ಬೆಣ್ಣೆ ತುಪ್ಪಗಳೇನಾದರೂ ಬೇಕಾದರೆ ತಂದು ಕೊಡುತ್ತೇ
ಹೇಗಾದರೂ ದೇವರು ಒಮ್ಮೆಗೆ ನಿನಗೆ ಸೌಖ್ಯವನ್ನು ದಯಪಾಲಿಸ
ಎಂಬುದು ರೋಗಿಯ ಹಾಸಿಗೆಯ ಬಳಿಯಲ್ಲಿ ಪಳ್ಪಟನ ಪ್ರಾರ್ಥನೆ.
ತಾಯಿಯ ನರಳುವ ಮಗುವಿಗೆ ಹಾಲು ಬೇಕಾಗಿದ್ದರೆ ಅವಳು ಪಳ್
ನಾಯ್ಕನಲ್ಲಿಗೇ ಹೋಗಬೇಕು. ಬಡಕೂಲಿಗೆ ಒಂದಿಷ್ಟು ಮಜ್ಜಿಗೆ-ನಿ
ಕುಡಿಯಬೇಕೆಂದಾಶೆ ಹುಟ್ಟಿದರೆ ಅದರ ಸಾರ್ಥಕ್ಯವೂ ಪಳ್ಪಟನಾ
ನಲ್ಲಿಯೆ! ಕುರುಡರು ಕುಂಟರು ಹಸಿವಿಂದ ಕಂಗೆಟ್ಟ ಬಡಪಾಯಿಗ
ಇವರ್‍ಯಾರೇ ಬರಲಿ, ತನ್ನ ಊಟ ಹನ್ನಾದರೂ ಅವರಿಗೆ ಬ
ತಾನೊಂದಿಷ್ಟು ಮಜ್ಜಿಗೆ ಕುಡಿದು ತೃಪ್ತಿಪಡುತ್ತಿದ್ದನು. ಆಗ ಪಳ್
ನಿಗಾಗುವ ಆನಂದವು ಹೊಟ್ಟೆ ತುಂಬ ಉಂಡ ದಿನವೂ ಆಗುತ್ತಿದ್ದಿಲ್

ಪಳ್ಳಟನಿಗೂ ಚಿಕ್ಕದೊಂದು ಸಂಸಾರವಿತ್ತು. ಆತನ ಹೆಂಡತಿ, ಎರಡು ಮೂರು ಮಕ್ಕಳು, ಇಷ್ಟೆ. ಎಲ್ಲರಂತೆ ಆತನಿಗೂ ಸಂಸಾರದಲ್ಲಿ ಸಂಕಷ್ಟಗಳು ಬಾರದೆ ಇರುತ್ತಿದ್ದಿಲ್ಲ. ಮುದ್ದು ಮುದ್ದಾಗಿದ್ದ ಎರಡು ಮಕ್ಕಳು ತೀರಿಕೊಂಡಿದ್ದರು. ಹಟ್ಟಿಯಲ್ಲಿ ದನವೊ ಕರುವೋ ಸಾಯುತ್ತಿತ್ತು. ಆದರೆ ಅದಕ್ಕಾಗಿ ಅವನು ಅತ್ತು ರಂಬಾಟ ಮಾಡುತ್ತಿದ್ದಿಲ್ಲ. ಅದನ್ನೆ ಹಂಬಲಿಸುತ್ತ ಅನ್ನ ನೀರು ಬಿಟ್ಟು ಕಣ್ಣೀರಿಡುತ್ತಿದ್ದಿಲ್ಲ. 'ಅವನೇ ಕೊಟ್ಟದ್ದು; ಅವನೇ ಕೊಂಡುಹೋದುದು; ಎಲ್ಲವೂ ಅವನ ಇಚ್ಛೆ! ನನ್ನಿಂದೇನಾಗುವುದು?' ಎನ್ನುತ್ತಿದ್ದನಲ್ಲದೆ ಮರುಗುತ್ತಿದ್ದಿಲ್ಲ. ಬಡತನ ದಿಂದ ನರಳುತ್ತಿದ್ದವರನ್ನು ಕಂಡರೆ ಮಾತ್ರ ಅವನ ಎದೆ ಕರಗಿ ನೀರಾಗು ತ್ತಿತ್ತು. ಆಗ ಅವನು, 'ಅಯ್ಯೋ, ನನ್ನೊಡೆಯಾ! ನನ್ನ ಕೈಯನ್ನೇಕೆ ಗಿಡ್ಡ ಮಾಡಿದೆ?' ಎಂದು ಉದ್ಗಾರವೆತ್ತುತ್ತಿದ್ದನು.

ಪಳ್ಳಟನಿಗಿದ್ದುದು ಎರಡೇ ಎರಡು ಆಶೆಗಳು-'ನನ್ನೊಡೆಯಾ! ತಿರು ಪತಿ ವೆಂಕಟೇಶಾ, ಬಡವರ ಕಡೆಗೆ ಕೈನೀಡುವಂತೆ ಮಾಡು! ಸಾಯುವ ಮೊದಲೊಮ್ಮೆ ನಿನ್ನ ದರ್ಶನವಾಗುವಂತೆ ದಾರಿ ಕಾಣಿಸು' ಇವೇ ಆತನ ಜನ್ಮದ ಬಯಕೆಗಳು. ಶ್ರಾವಣ ಮಾಸದ ಶನಿವಾರಗಳಲ್ಲಿ ಮನೆ ಮನೆ ಬೇಡಿ ಶ್ರೀನಿವಾಸನ ಕಾಣಿಕೆಯ ಮುಡಿಪನ್ನು ಮಾಡಿದ್ದನು. ಪ್ರತಿ ವರ್ಷವೂ ಶ್ರಾವಣ ಮಾಸದ ಕೊನೆಯ ಶನಿವಾರ ಮುಡಿಪನ್ನು ಕಟ್ಟುವಾಗ 'ಸ್ವಾಮಿ, ಬೆಟ್ಟದೊಡೆಯಾ, ಇದನ್ನು ನಾನೇ ನನ್ನ ಕೈಯಿಂದ ನಿನಗೆ ಅರ್ಪಿಸುವಂತಾಗಲಿ,' ಎಂದು ಅದಕ್ಕೆ ಅನನ್ಯ ಭಕ್ತಿಭಾವದಿಂದ ನಮಸ್ಕರಿಸು ತ್ತಿದ್ದನು.

ಕೆಲವು ವರ್ಷಗಳ ಮೇಲಾದರೂ ಶ್ರೀನಿವಾಸನು ಪಳ್ಳಟನ ಕಡೆಗೆ ಕೃಪಾದೃಷ್ಟಿಯನ್ನು ಬೀರಿದಂತಾಯಿತು. ಉಡುಪಿಯಲ್ಲನೇಕರು ತಿರು ಪತಿ ಯಾತ್ರೆಗೆ ಹೊರಡುವರೆಂಬ ಸುದ್ದಿಯು ಪಳ್ಳಟನಿಗೆ ಮುಟ್ಟಿತು. ಅವನು ಅವರಲ್ಲಿ ಕೆಲವರ ಬಳಿಗೆ ಹೋಗಿ, 'ಸ್ವಾಮಿ, ತಮ್ಮ ಗಂಟು ಮೂಟೆಗಳನ್ನು ಹೊರುತ್ತೇನೆ. ತಮ್ಮ ಕಾಲೊತ್ತುತ್ತೇನೆ. ಬಿದ್ದ ಯಾವ ಕೆಲಸಕ್ಕೂ ಸಿದ್ಧನಿದ್ದೇನೆ. ದಯಮಾಡಿ ನನಗೊಮ್ಮೆ ಬೆಟ್ಟದೊಡೆಯನ ದರ್ಶನ ಮಾಡಿಸಿರಿ, ನಿಮ್ಮ ಕಾಲಿಗೆ ಅಡ್ಡಬಿದ್ದೆ, ದಮ್ಮಯ್ಯ!' ಎಂದು

ಅಂಗಲಾಚಿ ಬೇಡಿಕೊಂಡನು. ಆ ಕಾಲದಲ್ಲಿ ಯಾತ್ರಾರ್ಥಿಗಳಿಗೆ ಪಳ್ಳ ಟನಂತಹ ಜನರು ತಮ್ಮೊಡನಿದ್ದರೆ ಬಹಳ ಪ್ರಯೋಜನ. ಎಂದ ಮೇಲೆ ಪಳ್ಳಟನನ್ನು ಕರೆದುಕೊಂಡು ಹೋಗಲು ಆ ಯಾತ್ರಿಕರು ಸಂತೋಷ ದಿಂದ ಒಪ್ಪಿಕೊಂಡರು. ಆಗ ಆತನಿಗಾದ ಆ ಮಹದಾನಂದ! ಅಂತಹ ಹೃದಯಕ್ಕೇ ಗೊತ್ತು!

ಉಡುಪಿಯಿಂದ ಹೊರಟ ಆ ಯಾತ್ರಿಕರ ಗುಂಪಿನಲ್ಲಿ ಅತ್ಯುತ್ಸಾಹ ದಿಂದ 'ಗೋೀೀೀೀೀವಿಂದ' ಎನ್ನುತ್ತ ದೊಡ್ಡ ಮೂಟೆಯನ್ನು ಹೊತ್ತು ಕೊಂಡು ಮುನ್ನಡೆಯುತ್ತಿದ್ದವನ್ಯಾರೆಂದು ಈಗ ತಿಳಿಯಿತೇ? ಅವನೇ ನಮ್ಮ ಪಳ್ಳಟನಾಯ್ಕ! ಅವನ ಬಗಲಲ್ಲಿ ತೂಗಾಡುತ್ತಿರುವುದೇ ಶ್ರೀನಿ ವಾಸನ ಮುಡಿಪು!

ಸುಮಾರು ಮೂರು ತಿಂಗಳ ಪಯಣದ ಮೇಲೆ ಯಾತ್ರಿಕರು ತಿರು ಪತಿಯನ್ನು ಸೇರಿದರು. ಅವರೊಡನೆ ಪಳ್ಳಟನಿಗೂ ಬೆಟ್ಟದೊಡೆಯನ ದರ್ಶನವಾಯಿತು. ಯಾತ್ರಿಕರಲ್ಲಿ ಒಬ್ಬೊಬ್ಬರು ಒಂದೊಂದು ಬಯಕೆ ಯನ್ನು ಬೇಡಿ ಹರಕೆಯನ್ನು ಹೊತ್ತರು: ಕೆಲವರು ಸಂತಾನ ಕೇಳಿದರು, ಕೆಲವರು ಐಶ್ವರ್ಯ ಕೊಡೆಂದರು. ಇನ್ನು ಕೆಲವರು ತಮ್ಮ ರೋಗ ನಿವಾರಿಸೆಂದರು. ನಮ್ಮ ಪಳ್ಳಟನು ತನ್ನ ಕೈಯಿಂದಲೇ ಬೆಟ್ಟದೊಡೆಯ ನಿಗೆ ಮುಡಿಪನ್ನು ಸಮರ್ಪಿಸಿ 'ನನ್ನೊಡೆಯಾ! ಇಂದಿಗೆ ನನ್ನ ಒಂದಾಶೆ ಯನ್ನು ನೀನು ತೀರಿಸಿದೆ! ನಿನ್ನ ಇಚ್ಛೆಯಿದ್ದರೆ ನನ್ನ ಮತ್ತೊಂದು ಬಯಕೆ ಯನ್ನೂ ತೀರಿಸಲಾಪೆ! ನಿನ್ನ ಮನ ಬಂದಂತಾಗಲಿ!' ಎಂದು ಹೇಳಿ ಕಣ್ದ ಣಿಯೆ ಶ್ರೀನಿವಾಸನ ದಿವ್ಯ ಮೂರ್ತಿಯನ್ನು ನೋಡಿ ಹೊರಗೆ ಬಂದು ಮರದ ಕೆಳಗೆ ಕುಳಿತುಕೊಂಡನು.

ಪಳ್ಳಟನು ಅಲ್ಲಿ ಕುಳಿತು ಯೋಚನಾಪರನಾದ. ಶ್ರೀನಿವಾಸನ ದರ್ಶನದಿಂದ ನನ್ನ ಸರ್ವ ಪಾಪವು ದೂರವಾಯಿತು. ಇನ್ನು ಊರಿಗೆ ಹೋದೆನೆಂದರೆ ತಿಳಿದೋ ತಿಳಿಯದೆಯೋ ಪಾಪ ಸಂಘಟನೆಯು ಆಗಿಯೇ ಆಗುವದು. ಇದಲ್ಲದೆ ಇನ್ನು ಜೀವಿಸಿಯಾದರೂ ಮಾಡತಕ್ಕುದೇನಿದೆ? ಯಾವುದಕ್ಕಾಗಿ ಬಾಳಬೇಕು? ಸಂಸಾರ? ಅವನೇ ಕೊಟ್ಟುದು! ಅವನೇ ನೋಡಿಕೊಳ್ಳುವನು! ಅದೆಲ್ಲಾ ಗೊಂದಲ ಹಚ್ಚಿಕೊಳ್ಳಲು ನಾನ್ಯಾರು?

ನಾನೆಷ್ಟರವನು? ಎಷ್ಟರ ತನಕ ಬಂದೇನು? ಬಡವರ ಸಂಕಷ್ಟನಿವಾರಣೆ ಮಾಡುವ ಶಕ್ತಿಯು ನನ್ನಲ್ಲಿದ್ದರೆ ನಾನಿನ್ನು ಬದುಕಿ ಮಾಡುವ ಮಹತ್ಕಾರ್ಯಗಳಿವೆಯೆಂದಾದರೂ ಹೇಳಬಹುದಿತ್ತು. ಆದರೆ ನನ್ನ ಕೈ ಗಿಡ್ಡಾಗಿರುವುದು–ಎಂದಮೇಲೆ ನನಗೆ ಈ ಪುಣ್ಯ ಕ್ಷೇತ್ರದಲ್ಲೇ ಮರಣವುಂಟಾದರೆ ನಾನೆಂತಹ ಧನ್ಯನು!' ಎಂದು ಮುಂತಾದ ಯೋಚನೆಯಲ್ಲಿ ಪಳ್ಳಟನು ಮಗ್ನನಾಗಿರಲು ಮೇಲಿನಿಂದ ಆತನ ಮೈಮೇಲೆ ಗೋಲಿಯ ಗಾತ್ರದ ಕಲ್ಲೊಂದು ಬಿತ್ತು! ಮೇಲೆ ನೋಡಲು ಮರದ ರೆಂಬೆಯ ಮೇಲೆ ತಿಮ್ಮಣ್ಣನೊಬ್ಬನು ಕುಳಿತು ಆತನನ್ನೇ ನೋಡುತ್ತಿದ್ದನು! ಆಗ ಪಳ್ಳಟನು ಆ ಮಂಗನಿಗೆ ಹೊಡೆಯದೆ ನಗುತ್ತ, 'ತಿಮ್ಮಣ್ಣಾ, ಬಡವನೆಂದರೆ ನಿನಗೂ ಅಷ್ಟೊಂದು ತಾತ್ಸಾರವೆ?' ಎಂದು ಆ ಕಲ್ಲನ್ನು ತೆಗೆದು ದೂರ ಬಿಸುಟು ತನ್ನ ವೀಳೆಯದ ಸಂಚಿಯನ್ನು ಬಿಚ್ಚಿ ಎಲೆಯಡಕೆಯನ್ನು ಹಾಕಿ ಜಗಿಯುತ್ತ ಕುಳಿತುಕೊಂಡನು. ಒಂದು ಚೂರು ಅಡಕೆಯು ಬೇಕೆಂದು ತೋರಿತು. ಚೀಲದಿಂದೊಂದು ಅಡಕೆಯನ್ನು ತೆಗೆದು ಅದನ್ನು ಚೂರಿಯಿಂದ ತುಂಡು ಮಾಡುವಷ್ಟರಲ್ಲಿ ಚೂರಿಯ ಮೇಲೆ 'ಕಟ್' ಎಂದು ಅದೇ ಕಲ್ಲು ಮತ್ತೊಮ್ಮೆ ಮೇಲಿಂದ ಬಿತ್ತು! ಮೇಲೆ ನೋಡಲು ಅದೇ ತಿಮ್ಮನು ಅದೇ ರೆಂಬೆಯ ಮೇಲೆ ಕುಳಿತು ಪಳ್ಳಟನನ್ನೇ ದಿಟ್ಟಿಸಿ ನೋಡುತ್ತಿದ್ದನು! ಆ ತಿಮ್ಮನ ಮುಖದಲ್ಲಿ ಪಳ್ಳಟನಿಗೇನು ಕಾಂತಿ ತೋರಿತೊ! ಮತ್ತೇನನ್ನು ಕಂಡನೋ ಅವನಿಗೇ ಗೊತ್ತು. ಚೂರಿಯು ಕೈಯಲ್ಲಿದ್ದಂತೆಯೇ ಕೈಗಳನ್ನು ಮುಗಿಯಲು ಮೇಲಕ್ಕೆತ್ತಿದನು. ಆಗ ನೋಡುವುದೇನು! ಕಬ್ಬಿಣದ ಚೂರಿಯು ಬಂಗಾರದ್ದಾಗಿತ್ತು! 'ದೇವಾ! ಬೆಟ್ಟದೊಡೆಯಾ, ಪಳ್ಳಟನ ಜನ್ಮವನ್ನಿಂದಿಗೆ ಸಾರ್ಥಕಗೈದೆ!' ಎನ್ನುತ್ತ ಪಳ್ಳಟನು ಅನನ್ಯ ಭಕ್ತಿಭಾವದಿಂದ ಮೇಲಕ್ಕೆ ನೋಡಿದನು. ಆದರೆ ರೆಂಬೆಯ ಮೇಲಿನ ಮಂಗನೆಲ್ಲಿ? ಎಲ್ಲಿಯೂ ಇಲ್ಲ!! ಪಳ್ಳಟನು "ಶ್ರೀ ಮದ್ರಮಾರಮಣ ಗೋವಿಂದಾ, ಗೋ॰॰॰॰॰॰ವಿಂದ" ಎನ್ನುತ್ತ ಆ ಕಲ್ಲನ್ನು ತೆಗೆದು ತಾನು ತಂದಿದ್ದ ಮುಡುಪಿನ ಬುಟ್ಟಿಯಲ್ಲಿ ಚೂರಿಯೊಡನಿಟ್ಟು ಬಗಲ ಗಂಟಿನಲ್ಲಿ ಕಟ್ಟಿಕೊಂಡನು.

ಯಾತ್ರಿಕರು ತಿರುಪತಿಯಿಂದ ಹೊರಟರು. ಪಳ್ಳಟನೂ ಅವರೊಡನಿದ್ದ. ಅವರಲ್ಲಿ ಶ್ರೀಮದ್ಗಾಂಭೀರ್ಯವುಳ್ಳ ಕೆಲವರು ಪಳ್ಳಟನನ್ನು ಕುರಿತು, 'ಏನೋ, ಪಳ್ಳಟ, ನಿನಗೆ ಶ್ರೀನಿವಾಸನ ದರ್ಶನ ಮಾಡಿಸಿದೆವಲ್ಲವೇನೋ?' ಎಂದರು. ಪಳ್ಳಟನು, 'ಹೌದೊಡೆಯಾ ತಮ್ಮಿಂದಾಯಿತು. ಬಡವನ ಮೇಲೆ ಬೆಟ್ಟದೊಡೆಯನ ಕೃಪಾಕಟಾಕ್ಷವು ಬಿತ್ತು' ಎಂದು ಸವಿನಯದಿಂದ ನುಡಿದನು. ಅದಕ್ಕವರು ಗೊಳ್ಳನೆ ನಕ್ಕು 'ಏನೋ, ನೂರಾರು ರೂಪಾಯಿಗಳನ್ನು ನೀರಿನಂತೆ ಚೆಲ್ಲಿ ಶ್ರೀನಿವಾಸನಿಗೆ ತರತರದ ಸೇವೆಗಳನ್ನು ಮಾಡಿಸಿದ ನಮಗೆ ಆತನು ಒಲಿದುದೋ? ದೇವರ ಮುಂದೆ ಬರಿಗೈ ಬೀಸಿ ಬಂದ ನಿನಗೋ? ಬಲು ಸೊಗಸಾದ ಮಾತು!' ಎಂದು ಪರಿಹಾಸ್ಯಗೈದರು. ಪಳ್ಳಟನು, 'ಒಡೆಯರೆ, ತಮ್ಮಂತಹರಿಗೆ ದೇವರೊಲಿಯದೆ ಇದ್ದಾನೆಯೆ? ಆದರೆ ಬೆಟ್ಟದೊಡೆಯನಿಗೆ ಬಡ ಪಳ್ಳಟನ ಮೇಲೂ ಅನುಗ್ರಹವಿದೆ' ಎಂದನು. ಹಾದಿಯುದ್ದಕ್ಕೂ ಯಾತ್ರಿಕರಲ್ಲಿ ಒಬ್ಬರಲ್ಲದಿದ್ದರಿನ್ನೊಬ್ಬರು— 'ಪಳ್ಳಟನಿಗೆ ದೇವರೊಲಿದಿರುವರು, ಇನ್ನು ಪಳ್ಳಟನು ಶ್ರೀಮಂತನಾಗುವನು- ದೊಡ್ಡ ಮನೆ ಕಟ್ಟಿಸುವನು! ಏನೋ, ಪಳ್ಳಟ, ನೀನು ಕಟ್ಟಿಸುವ ಮನೆ ಮೂರು ಅಂತಸ್ತಿನದೊ, ನಾಲ್ಕರದೊ? ನಿನಗಿನ್ನು ಪಳ್ಳಟ ಸುದಾಮನೆಂದು ಹೆಸರಿಡೋಣವೆ? ಅಥವಾ ಸುದಾಮಪಳ್ಳಟನೆಂದು ಕರೆಯೋಣವೇ?' ಎಂದು ಗೇಲಿಮಾಡುತ್ತ ಬಂದರು. ಪಳ್ಳಟನು ಶಾಂತಚಿತ್ತದಿಂದ ನಗುತ್ತ, 'ಸ್ವಾಮಿ, ಬೆಟ್ಟದೊಡೆಯನು ನನ್ನ ಕೈಯಿಂದ ದೊಡ್ಡದೊಂದು ಮನೆ ಕಟ್ಟಿಸಲಿಕ್ಕಿರುವನು! ಆದರೆ ಆ ಮನೆಯು ನನ್ನದೋ ಅವನದೋ, ಈ ಲೋಕದಲ್ಲೋ ಮತ್ತೆಲ್ಲೋ, ಹೇಳಲಿಕ್ಕೆ ಬಾರದು' ಎನ್ನುತ್ತಿದ್ದನು. ಅದನ್ನು ಕೇಳಿ ಎಲ್ಲರೂ ಗೊಳ್ಳೆಂದು ನಗುತ್ತಿದ್ದರು. ಆಗ ಪಳ್ಳಟನು 'ಶ್ರೀಮದ್ರಮಾರಮಣ ಗೋವಿಂದಾ' ಎನ್ನುತ್ತ ಅವರೆಲ್ಲರಿಂದಲೂ 'ಗೋವಿಂದ' ಎನ್ನಿಸುತ್ತಿದ್ದನು. ಇಂತಹ ವಿನೋದದಿಂದ ಹಾದಿಯು ಸುಗಮವಾಗಿ ಸಾಗಲು ಯಾತ್ರಿಕರು ಉಡುಪಿಗೆ ಬಂದು ಸೇರಿದರು.

ಅನೇಕ ಶ್ರೀಮಂತ ಯಾತ್ರಿಕರಲ್ಲಿ 'ತಿರುಪತಿಸಮಾರಾಧನೆ' ಬಹು ವಿಜೃಂಭಣೆಯಿಂದ ನೆರವೇರಿತು. ದೊಡ್ಡ ದೊಡ್ಡವರಿಗೆ ಭಾರೀ ಊಟ.

ಭಾರೀ ಸನ್ಮಾನ! ಆದರೆ ಅವರ ಮನೆಬಾಗಲಲ್ಲಿ ಎಷ್ಟೋ ಬಡಜನರು ದೇವರ ಪ್ರಸಾದವೆಂದು ಅಮಟೆಯ ಗೊರಟೊಂದಾದರೂ ನೆಕ್ಕಲಿಕ್ಕೆ ಸಿಕ್ಕಿದರೆ ಸಾಕೆಂದು ಸಾಯಂಕಾಲದ ತನಕ ಕಾದುಕೂತು ಕೂತುಕಾದು, ಹತಾಶರಾಗಿ ಹಿಂತೆರಳಬೇಕಾಗಿತ್ತು.

ಕೆಲವು ದಿವಸಗಳಾದ ಮೇಲೆ ಪಳ್ಳಟನೂ ತಿರುಪತಿಸಮಾರಾಧನೆ ಮಾಡಿದನು. ಆದರೆ ಅದು ದೊಡ್ಡವರ ಆಡಂಬರದ ಸಮಾರಾಧನೆಯಲ್ಲ. ಗೌಜಿಯ ಪೂಜೆಯಲ್ಲ. ಶ್ರೀಮಂತ ಅತಿಥಿಗಳ ಆಗಮನದ ನಿರೀಕ್ಷಣೆ, ಆತಿಥ್ಯಸತ್ಕಾರಾದಿಗಳ ವೈಭವ, ಅವರನ್ನು ಬೀಳ್ಕೊಳ್ಳುವ ಸಂಭ್ರಮ, ಇವೇನೂ ಇದ್ದಿಲ್ಲ. ಪಳ್ಳಟನ ಸಮಾರಾಧನೆಯು 'ಉಂಬವರಿಗೆ ಉಣಿಸಬೇಕು ತಿಂಬವರಿಗೆ ತಿನಿಸಬೇಕು' ಎಂಬಂತೆ ಬಡಜನರ ಸಂತರ್ಪಣೆ– ಅಮಟೆಯ ಗೊರಟೆಗಾಗಿ ಕಾದುಕೂತು ಹಿಂದೆ ಬಂದಿದ್ದ ಆ ಮಂದಿಗಿಂದು ಮುಂದಾಗಿ ಊಟ! ಅದೂ ದೊಡ್ಡ ಔತಣದ ಊಟ!

ಅಂದಿನಿಂದ ಪಳ್ಳಟನ ದಾನಧರ್ಮಗಳು ಹೆಚ್ಚುತ್ತಾ ಹೋದುವು. ಅವನ ಮನೆಯು ಬಡಜನರ ಆಶ್ರಯಸ್ಥಾನವಾಗಹತ್ತಿತು. ಅದಕ್ಕಾಗಿ ಅದನ್ನು ಸ್ವಲ್ಪ ದೊಡ್ಡದು ಮಾಡಿ ಕಟ್ಟಿದ. ತಟ್ಟಿಯ ಗೋಡೆಯ ಬದಲು ಮಣ್ಣಿನ ಗೋಡೆಯಾಯಿತು. ಒಳಗೆ ಗೋಡೆಯಲ್ಲೊಂದು ಕಂಡಿ; ಅದರಲ್ಲಿ ತಾನು ತಿರುಪತಿಯಿಂದ ತಂದಿದ್ದ ಶ್ರೀನಿವಾಸನ ಪಠವನ್ನೂ ಅದರ ಹಿಂದೆ ಒಂದು ಬುಟ್ಟಿಯನ್ನೂ ಇಟ್ಟು ದಿನಾಲೂ ಪೂಜಿಸುತ್ತಿದ್ದ. 'ಬುಟ್ಟಿಯಲ್ಲಿ ಬೆಟ್ಟದೊಡೆಯನ ಪ್ರಸಾದವಿದೆ' ಎಂಬುವ ಅವನ ಮಾತಿಗೆ ಯಾರೂ ವಿಶೇಷ ಅರ್ಥಕಲ್ಪಿಸಲಿಲ್ಲ. ತನ್ನ ಮನೆಯ ಎದುರಲ್ಲಿದ್ದ ಭೂಮಿಗಳನ್ನು ಸ್ವಲ್ಪ ಸ್ವಲ್ಪವಾಗಿ ಕೊಂಡುಕೊಂಡು ಬಡಬಗ್ಗರಿಗೆ ದಾನಮಾಡುತ್ತ ಬಂದ. ಅಲ್ಲಿಯ ತಿರುಕರು ಸಿರಿವಂತರಾದರು. ಅವರ ತಿರಿಬೀಡು ಸಿರಿಬೀಡಾಯಿತು! ಬೆಟ್ಟದೊಡೆಯನು ತಿಮ್ಮನ ರೂಪದಿಂದ ತನಗೆ ಮೈದೋರಿ ಅನುಗ್ರಹಿಸಿದನೆಂಬುದರ ಸ್ಮಾರಕವಾಗಿ ಶಿಲೆಯಲ್ಲಿ ತಿಮ್ಮನ ರೂಪವನ್ನು ಕೆತ್ತಿಸಿ ತಾನು ಧರ್ಮಮಾಡಿದ ಭೂಮಿಯ ನೆತ್ತಿಯಲ್ಲಿ ನೆಡಿಸುತ್ತಿದ್ದ.

ಪಳ್ಪಟನ ಈ ರೀತಿಯ ಧರ್ಮದ ಕೈಯನ್ನು ಕಂಡು ಉಡುಪಿಯ ಕೆಲವು ಪುಂಡುಗಾರರು ಆತನಿಗೆ ಬರಮಗುಡ್ಡೆಯ ಬಳಿಯಲ್ಲಿಲ್ಲೋ ನಿಧಿಯ ಕೊಪ್ಪರಿಗೆ ಸಿಕ್ಕಿರಬೇಕೆಂದು ಒಂದು ದಿನ ರಾತ್ರಿ ಅವನ ಮನೆಯನ್ನು ನುಗ್ಗಿ ಹುಡುಕಿನೋಡಿದರು-ಅವನ ಮುರುಕು ಪೆಟ್ಟಿಗೆಯೊಳಗೆ ಒಂದೆರಡು ಕಬ್ಬಿಣದ ತುಂಡುಗಳೂ ಒಂದಿಷ್ಟು ಪುಡಿಕಾಸೂ ಅಲ್ಲದೆ ಮತ್ತೇನೂ ಇದ್ದಿಲ್ಲ. ಬೆಟ್ಟದೊಡೆಯನ ಮುಡುಪಿನ ಗಂಟನಿಂದ ಇಂದು ಕೋಳಿಯ ಪಡೆಗೋ ಜುಗಾರಾಟಕ್ಕೋ ಹಣವು ಹಾರಿಹೋಗುತ್ತಿರುವುದಾದರೂ ಅಂದಿನ ಆ ಪುಂಡುಗಾರರಿಗೆ ಕಂಡಿಯಲ್ಲಿದ್ದ ಬುಟ್ಟಿಗೆ ಕೈಹಾಕುವಷ್ಟು ಎದೆಗಟ್ಟಿ ಇರಲಿಲ್ಲ. ಒಂದು ವೇಳೆ ಕೈಹಾಕಿದ್ದರೂ ಅದರಲ್ಲಿ ದುಡ್ಡುಕಾಸೇನೂ ಸಿಗುತ್ತಿರಲಿಲ್ಲ. ಅಲ್ಲಿದ್ದುದು ಬರೇ ಗೋಲಿಯಾಕಾರದ ಕಲ್ಲು! ಅದನ್ನು ಕೊಂಡುಹೋಗಲು ಅವರೇನು ಆಡುವ ಮಕ್ಕಳೆ? ಮರುದಿವಸ ಇದನ್ನು ತಿಳಿದು ಪಳ್ಪಟನು, 'ಅಯ್ಯೋ! ತಿಳಿಗೇಡಿಗಳೆ, ಸುಮ್ಮನೆ ನನ್ನ ಗುಡಿಯನ್ನು ಹೊಕ್ಕು ಹುಡುಕಿ ಶ್ರಮೆಗೊಂಡಿರಿ! ಅವನೇ ಪ್ರೇರೇಪಿಸಬೇಕು, ಅವನೇ ಕೊಡಬೇಕು, ಹಾಗೆ ಕೊಟ್ಟರೆ ಉಂಟು; ಇಲ್ಲದಿದ್ದರಿಲ್ಲ!' ಎಂದೊಂದು ನಿಟ್ಟುಸಿರು ಬಿಟ್ಟ.

ಪಳ್ಪಟನಿಗೆ ಮತ್ತೊಮ್ಮೆ ಬೆಟ್ಟದೊಡೆಯನ ದರ್ಶನವನ್ನು ಮಾಡಬೇಕೆಂದು ತೋರಿತು. ಅಲ್ಲಿಗೆ ಹೋಗಿ ಅಲ್ಲಿಯೂ ಗದ್ದೆತೋಟಗಳನ್ನು ಕೊಂಡುಕೊಂಡು ಬಡವರಿಗೆ ಹಂಚಿಕೊಟ್ಟ. ಅಲ್ಲಿಂದ ಒಂದೊಂದಾಗಿ ಎಲ್ಲ ಪುಣ್ಯಕ್ಷೇತ್ರಗಳ ಬಳಿಯ ಗ್ರಾಮಗಳಲ್ಲಿ ಹೊಲಗದ್ದೆಗಳನ್ನು ಕ್ರಯಕ್ಕೆ ಪಡೆದು ನಿರ್ಗತಿಕರಿಗೆ ದಾನಮಾಡುವುದೂ ಅವುಗಳ ನೆತ್ತಿಕಟ್ಟಿನಲ್ಲಿ ಹನುಮಂತನ ಮೂರ್ತಿಯು ಕೆತ್ತಲ್ಪಟ್ಟ ಕಲ್ಲನ್ನು ನೆಡುವುದೂ ಅವನ ಕಟ್ಟಳೆ. ಪಳ್ಪಟನಾಯ್ಕನ ಕಾಲವು ಮುಗಿದು ಸುಮಾರು ಒಂದು ಸಾವಿರ ವರಷಗಳಾಗಿರಬಹುದು. ಆದರೂ ಅವನು ನೆಡಿಸಿದ ಕಲ್ಲುಗಳಲ್ಲಿ ಕೆಲವು ಇನ್ನೂ ಹೊಲಗದ್ದೆಗಳ ಬಳಿಯಲ್ಲಿ ನಿಂತಿವೆ. ಅಲ್ಲಿಯ ಮುದಿಯಜ್ಜಂದಿರನ್ನು ಕುರಿತು, 'ಇದೇನು ಕಲ್ಲು?' ಎಂದು ಕೇಳಿದರೆ, 'ಅದು ಪಳ್ಪಟನಾಯ್ಕನ ಧರ್ಮ' ಎನ್ನುವರು ಅವರು.

# ನಿಂಬಾಫಲ ಮಹಾತ್ಮ್ಯೆ

ಈ ಮಾಹಾತ್ಮ್ಯೆ ಯಾವ ಪುರಾಣದಲ್ಲಿದೆ? ಎಲ್ಲಿ ಯಾರು ಹೇಳಿದ್ದು? ಯಾರು ಕೇಳಿದ್ದು? ಯಾವ ಇಷ್ಟಾರ್ಥಸಿದ್ಧಿಗಾಗಿ? ಎಂದೆಲ್ಲ ಪ್ರಶ್ನೆಗಳನ್ನು ನೀವು ಕೇಳಬಹುದು. ಉತ್ತರ ಹೇಳುತ್ತಾ ಹೋದರೆ ಪೀಠಿಕಾ ಪ್ರಕರಣವೇ ಉದ್ದ ಬೆಳೆದು ಮಹಾತ್ಮ್ಯೆಯನ್ನು ಕೇಳುವಷ್ಟರಲ್ಲಿ ನಿಮಗೆ ಹಾಕಳಿಗೆ ತೊಡಗಿ ತೂಕಡಿಕೆ ಹಿಡಿದೀತು. ಆದುದರಿಂದ ಸಂಕ್ಷಿಪ್ತವಾಗಿ ಹೇಳಿಬಿಡುತ್ತೇನೆ. ಊರುಕೇರಿಯ ಪ್ರತಿಯೊಂದು ದೇಗುಲಕ್ಕೂ ಹೊಳೆ ಕೆರೆಕುಂಟೆಗೂ ತಿರುಳರಿಯದ ಮರುಳರಿಂದಾಚರಿಸ್ಪಡುವ ವ್ರತಕ್ಕೂ ಮಹಾತ್ಮ್ಯೆಯು ವಿರಚಿತವಾದಂತೆ ಇದೂ! ಎಂದ ಮೇಲೆ, ಹೇಳುವಂಥಾ ದಾವ ಲಿಂಬಾಫಲ ಮಾಹಾತ್ಮ್ಯೆಯಿದೆಯೋ ಅದನ್ನು ಶ್ರದ್ಧಾಭಕ್ತಿಗಳಿಂದ ಕೇಳುವಂಥಾವರಾಗಬೇಕು. ಏನೆಂಧ್ರೇ:

ವಿಧಾತನೆಂದೆನಿಸಿಕೊಂಡಿರುವ ದಾವ ಶ್ರೀಮನ್ನಾರಾಯಣನ ನಾಭಿಕಮಲಸಂಜಾತನಾದ ಬ್ರಹ್ಮನಿದ್ದಾನೆಯೋ ಆತನು ಸೃಷ್ಟಿಯ ಅಂತ್ಯಭಾಗದ ಪೂರ್ವಾರ್ಧದಲ್ಲಿ ಉತ್ಕೃಷ್ಟ ಫಲವೊಂದನ್ನು ಸೃಷ್ಟಿಸಬೇಕೆಂದು ಸಂಕಲ್ಪಿಸುವಂಥವನಾದ. ಆಕಾರದಿಂದ, ವರ್ಣದಿಂದ, ಸುವಾಸನೆಯಿಂದ, ಸ್ಪರ್ಶದಿಂದ ಜಗತ್ತಿಗೆ ಅತುಲಾನಂದವನ್ನೀಯುವಂಥಾದ್ದಾಗಿ, ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದಾಗಿ, ಬಾಳಲೆಂದು ನಿಂಬಾಫಲವನ್ನು ಸೃಷ್ಟಿಸಿ ಭೂಲೋಕದಲ್ಲಿ ಹರಡಿಬಿಡುವಂಥವನಾಗಲು, ಜನರದನ್ನು ಕಂಡು ಮೋಹಿತರಾಗುವಂಥವರಾದರು. ಹೀಗೆ ಸಕಲ ಗುಣ ಸಂಪನ್ನವಾಗಿ ಬಂದಿರುವ ಅದಾವ ಲಿಂಬೆ ಹಣ್ಣಿದೆಯೋ ಅದನ್ನು ವೈದ್ಯರು 'ಬಾ, ಬಾ' ಎಂದರು. ಅಡಿಗೆ ಭಟ್ಟರು 'ಬಾರಯ್ಯಾ' ಎಂದು ಕೂಗಿ ಕರೆದರು. 'ಥಂಡಾಪಾನ' ಗೃಹಗಳೆಲ್ಲ 'ಬಾ! ಬಾ, ಬಾ!' ಎಂದು ಎದ್ದೋಡಿ ಹಸ್ತಲಾಘವಕೊಟ್ಟು ಸ್ವಾಗತೀಕರಿಸಿಕೊಂಡವು. ಕಂಡವರು ಆದರದಿಂದ ಆಘ್ರಾಣಿಸಿ ಕಣ್ಣಿಗೆ ಒತ್ತಿಕೊಳ್ಳುವಂಥವರಾದರು. ಅಲ್ಲದೆ ಅದು ಕಲೆಕ್ಟ್ರು, ತಾಶೀಲ್ದಾರರು, ಇನ್ಸ್‌ಪೆಕ್ಟ್ರು, ಪ್ರೆಸಿಡೆಂಟರು, ಚೇರ್ಮಾನರೂ, ಇತ್ಯಾದಿ

ದೊಡ್ಡ ಮುಂಡಾಸಿನವರ ಮೇಜುಗಳನ್ನೆಲ್ಲ ಹತ್ತಿ 'Thanks! Thanks!' (ಥೇಂಕ್ಸ್! ಥೇಂಕ್ಸ್!) ಎಂದು ಕೇಳಲ್ಪಡುವಂಥದ್ದಾಯಿತು ಈ ನಿಂಬಾ ಫಲ!

ಹೀಗೆ ನಡೆಯುತ್ತಾ ಶತಮಾನ ಶತಮಾನಗಳೇ ಕಾಲಚಕ್ರವೆಂಬಂಥಾದ್ದಾವದಿದೆಯೋ ಆದರ ಗತಿಯಲ್ಲಿ ಉರುಳುತ್ತಾ ಹೋಗುವಂಥಾದ್ದಾದವು. ಆಗ ನಮ್ಮಂಥಾ ಶ್ರೋತ್ರಿಯರಿಗೂ ಸದಾ ಪರಮಾನ್ನವೇ ದೊರೆಯುತ್ತಾ ಹೋದರೆ (ದೇವರು ಹಾಗೇ ನಡೆಯಿಸಲಿ!) ಅದರಲ್ಲೂ ಹೇಗೆ ಜುಗುಪ್ಸೆಯುಂಟಾಗಬಹುದೋ ಯಥಾ ತಥಾ ಪ್ರಕಾರವಾಗಿ ದಾವ ನಿಂಬಾಫಲವಿದೆಯೋ ಆದಕ್ಕೂ ಸದಾ ಸಾರ್ವದಾ ಏಕಪ್ರಕಾರವಾಗಿ ನಿರಂತರ ದೊರೆಯತ್ತಿದ್ದಂಥಾ ಆ ಆದರದಲ್ಲಿ ಅಭಿರುಚಿಯಿಲ್ಲದಂತಾಗುತ್ತಾ ಬಂತು! ಆಗ ಅದು 'ಅಯ್ಯೋ! ಎಲ್ಲಿ ಹೋದರೂ ಈ 'ಬಾಬಾ' ಕೇಳಿ ಬೇಸತ್ತೆನಲ್ಲಾ. ಒಬ್ಬರಾದರೂ ಇದೇಕೆ ಬಂತಪ್ಪಾ ಎನ್ನುವವರಿಲ್ಲವಲ್ಲಾ! ಹಿಡಿಯದೆ ಬಿಡುವವನೊಬ್ಬನೂ ಇಲ್ಲವಲ್ಲಾ! ಮಾನವನ ತಿರಸ್ಕಾರ ದೃಷ್ಟಿಯನ್ನು ನಾನೆಂದು ನೋಡುವುದು! ಗಂಟುಮೋರೆ ಹಾಕಿದರೆ ಮನುಷ್ಯನು ಹೇಗೆ ತೋರುತ್ತಾನೆಂಬುದನ್ನು ನಾನು ಕಾಣುವುದು ಬೇಡವೇ?' ಎಂದು ಯೋಚಿಸಿ ಯೋಚಿಸಿ ಯಾವ ಉಪಾಯವೂ ಹೊಳೆಯದಿರಲು, ತನ್ನನ್ನು ಸೃಷ್ಟಿಸಿದ ದಾವ ಬ್ರಹ್ಮನಿದ್ದಾನೆಯೋ ಆತನ ಬಳಿಗೇ ಹೋಗಿ ತನ್ನ ಸಂಕಷ್ಟಗಳನ್ನೆಲ್ಲ ನಿವೇದಿಸಿಕೊಳ್ಳಬೇಕೆಂದು ನಿರ್ಧರಿಸಿ ಕ್ಷೀರಸಾಗರದ ತಡಿಗೆ ಉರುಳುರುಳುತ್ತಾ ಹೋಗಿ ಅಲ್ಲಿಂದ ಶರಧಿಗೆ ಹೊರಳಿ ಕ್ಷೀರ ತರಂಗಗಳಲ್ಲಿ ಏಳುತ್ತ ಬೀಳುತ್ತ ತೇಲುತ್ತ ಮಾಲುತ್ತ ಸಾಗರಮಧ್ಯದಲ್ಲಿ ಶ್ರೀ ಮಹಾವಿಷ್ಣುವಿನ ಹಾಸಿಗೆಯಾಗಿರುವ ಆದಾವ ಮಹಾಶೇಷನಿರುವನೋ ಆವನ ಬಳಿಸಾಗಿ ಧಕ್ಕೆ ಹೊಡೆಯಲು, ಆ ಫಣೀಂದ್ರನು ಅದನ್ನು ತನ್ನ ಬಾಲದಿಂದೆತ್ತಿ ಬಿಸುಡಲಾಗಿ ಅದು ವಿಷ್ಣುವಿನ ನಾಭೀಕಮಲದಲ್ಲಿ ಕುಳಿತಿದ್ದ ಬ್ರಹ್ಮನ ಮೂಗಿಗೆ ತಾಗಿ ಆತನು ಬರೆಯುತ್ತಿದ್ದ ಪುಸ್ತಕದ ಮೇಲೆ ಬೀಳುವಂಥಾದ್ದಾಯಿತು! ಆಗ ಆ ನಿಂಬಾಫಲವು ಬ್ರಹ್ಮಸ್ತೋತ್ರವನ್ನು ಮಾಡತೊಡಗಿ, 'ಹೇ ಸೃಷ್ಟಿಕರ್ತನೇ! ವಿಧಿಯೇ! ಬ್ರಹ್ಮನೆ......' ಎನ್ನುವಷ್ಟರಲ್ಲೇ ಬ್ರಹ್ಮನು ತಲೆಯೆತ್ತಿ, "ಎಲೆ ನಿಂಬಾಫಲವೇ! ನಿನ್ನ ಸ್ತೋತ್ರ

ಗಳನ್ನು ಕೇಳಲು ಇದೀಗ ಕಾಲವಲ್ಲ. ರಾವಣ, ಹಿರಣ್ಯಕಶ್ಯಪು, ಮುಂತಾದವರ ಕಾಲದಲ್ಲಿ ನನಗೇನೋ ತುಂಬ ವಿರಾಮವಿತ್ತು. ಅವರ ವರ್ಷಗಟ್ಟಳೆಯ ಸ್ತೋತ್ರಗಾನವನ್ನು ಪಾನಮಾಡುತ್ತ ಕುಳಿತು ಸಂತುಷ್ಟನಾಗಿ ವರಗಳನ್ನಿತ್ತಿದ್ದೆ. ಈಗಲಾದರೋ ಅದಕ್ಕೆಲ್ಲ ಬಿಡುವಿಲ್ಲ; ನೋಡು, ಇಟಲಿ, ಅಬಿಸೀನಿಯಾ, ಸ್ಪೈನ್, ಜರ್ಮನಿ, ರಸ್ಯಾ, ಜಾಪಾನ್ ಮುಂತಾದ ದೇಶಗಳಲ್ಲಿ ನಾನೀಗ ಸೃಷ್ಟಿಸಬೇಕಾಗಿರುವ ಜನರ ಆಯುಷ್ಯಪ್ರಮಾಣವನ್ನು ಅಲ್ಲಿ ಈ ಮೊದಲು ಸೃಷ್ಟಿಸಿರುವವರ ಆಯುಷ್ಯಾಂತ್ಯಕ್ಕೆ ಅಂತ್ಯವಾಗುವಂತೆ ತರಾಂತರದಲ್ಲಿ ಕಿರಿದು ಮಾಡಬೇಕಾಗಿದೆ. ಆದುದರಿಂದ ಹಿಂದಿನ ೫೦ ವರ್ಷಗಳ ಜನನ ಲೇಖನಗಳನ್ನೆಲ್ಲ ತೆಗೆದು ಅಲ್ಲಿ ಲಿಖಿತವಾದ ಆಯುಷ್ಯ ಸಂಖ್ಯೆಗಳಿಗೆ ಇನ್ನು ಮುಂದಿನವೂ ತಾಳಿಬಿದ್ದು ಒಂದೊಂದು ದಿನದಲ್ಲಿ ಸಾವಿರಗಟ್ಟಳೆ ಜನರು ತೀರಿಕೊಳ್ಳುವಂತೆ ಮರಣದ ದಿನ, ವಾರ, ಗಳಿಗೆ ವಿಗಳಿಗೆಗಳನ್ನೆಲ್ಲ ಲೆಕ್ಕಮಾಡಿ ಹಾಕಬೇಕಾಗಿದೆ. ಈ ಕ್ಷೀರ ಸಾಗರದ ತಂಪಾದ ವಾತಾವರಣದಲ್ಲಿ ಕುಳಿತಿರುವೆನಾದ ಕಾರಣ ನನ್ನ ತಲೆಗಳಿನ್ನೂ ಬಿಸಿಯೇರದೆ ಸಿಡಿಯದೆ ಉಳಿದಿವೆ. ಆದುದರಿಂದ ನಿನ್ನ ಸ್ತೋತ್ರಪೀಠಿಕೆಯಿಂದಲೇ ನಾನು ಸಂತುಷ್ಟನಾಗಿದ್ದೇನೆ. ಬಂದಂಥಾ ಕಾರ್ಯವೇನೆಂಬುದನ್ನು ಸಂಕ್ಷೇಪವಾಗಿ ಹೇಳುವಂಥವನಾಗು" ಎಂದು ಬ್ರಹ್ಮನು ಹಣೆಗಳ ಮೇಲಿನ ಬೆವರು ಹನಿಗಳನ್ನು ಒರಸೊರಸುತ್ತ ಹೇಳುವಂಥವನಾಗಲು, ನಿಂಬಾಫಲವು ಬಿನ್ನಹಮಾಡುವಂಥಾದ್ದಾಯಿತು. ಅದೆಂತೆಂದರೇ —

"ಬ್ರಹ್ಮನೇ, ನಿನ್ನ ಪರಮಾನುಗ್ರಹದಿಂದ ಭೂಲೋಕದಲ್ಲಿ ನನಗೆ ಸದಾ ಸಾರ್ವದಾ ಸ್ವಾಗತವೇ ಎಲ್ಲೆಲ್ಲಿಯೂ! ಆದರೆ ದೊಡ್ಡ ದೊಡ್ಡ ಅಧಿಕಾರಿಗಳು ಊರು ಸಂಚಾರಕ್ಕೆ ಹೊರಟು, ನಿಂತಲ್ಲಿ ಕೂತಲ್ಲಿ ಎದ್ದಲ್ಲಿ ಹೊಕ್ಕಲ್ಲಿ ಹೊರಬಂದಲ್ಲಿ ಬಾಲಿಕೆಯರ ಸ್ವಾಗತ ಹಾಡುಗಳನ್ನು ಕೇಳಿ ಕೇಳಿ ಅವರಿಗೆ ಜುಗುಪ್ಸೆ ಬಂದಂತೆ ನನಗೂ ಅಂಥಾ ದೊಡ್ಡ ದೊಡ್ಡ ಜಂಟೀಲ್ ಮ್ಯಾನರ ಮೇಜಿಯ ಮೇಲೆ ಚಿಕ್ಕ ಮನುಷ್ಯರು ನನ್ನನ್ನು ಇರಿಸಿದಾಗ ಅವರು ಹೇಳುವ **Thanks** ಥೇಂಕ್ಸ್ ಥೇಂಕ್ಸ್ ಕೇಳಿ ಕೇಳಿ ಬೇಸರವಾಗುತ್ತ ಬಂದಿದೆ. ಆದುದರಿಂದ ದೊಡ್ಡವರೆಂಬವರೆಲ್ಲ ಕೆಲವು ದಿವಸಗಳ ಮಟ್ಟಿಗಾದರೂ ನನ್ನನ್ನು ಕಂಡಾಗ 'ಇದೇಕೆ ಬಂತಪ್ಪಾ ಶನಿ!'

ಎಂದು ಮೋರೆ ಗಂಟಿಕ್ಕುವ ಚಂದ ನನಗೆ ನೋಡಬೇಕಾಗಿದೆ. ನಾನವರ ಮೇಜಿನ ಮೇಲೆ ಏರಿ ಕುಳಿತರೂ ಅವರೆನ್ನನ್ನು ಮುಟ್ಟದೆ ಹಿಂದೆ ಕಳುಹು *ವಂಥವರಾಗಬೇಕು. ನಾನು ಬರುವ ಸಂಚು ಮುಂಚಿತವಾಗಿ ಗೊತ್ತಾದರೆ ನನಗೆ ಭೇಟಿಕೊಡದೇ ತಲೆಮರೆಸಿಕೊಳ್ಳಬೇಕು . . . . ಎಂದು ಹೇಳು ತ್ತಿರುವಷ್ಟರಲ್ಲೇ ಬ್ರಹ್ಮನು "ಸಾಕು! ಸಾಕು! ಹೆಚ್ಚಿಗೆ ಹೇಳಲೂ ಕೇಳಲೂ ಇದು ಸಮಯವಲ್ಲ. ಆದರೆ ನಿನ್ನ ಬಯಕೆಯೇನೆಂದು ಗೊತ್ತಾಯಿತು. ಅದನ್ನು ನೆರವೇರಿಸಿಕೊಡುತ್ತೇನೆ. ಮುಂದೆ ಧಾತೃ ಸಂವತ್ಸರದಲ್ಲಿ ವ್ಯಾಪಾ ರದ ಮುಗ್ಗಟ್ಟಿನಿಂದ ಸಾಹುಕಾರರು ಹಾಕಳಿಸುತ್ತ ಅಂಗಡಿಯಲ್ಲಿ ಕುಳಿತು ಕೊಳ್ಳುತ್ತಲೂ, ರೋಗಿಗಳು ಕೈಯಲ್ಲಿ ಕಾಸಿಲ್ಲದೆ ಹಾಸಿಗೆಯಲ್ಲಿ ನರಳು ತ್ತಿದ್ದು ಡಾಕ್ಟರರು ಚಿಕಿತ್ಸಾಲಯದಲ್ಲಿ ವಾಯುಸೇವನೆ ಗೈಯ್ಯುತ್ತಲೂ, ಕುಕ್ಷಿಗಿಲ್ಲದೆ ವಕೀಲರು ಕಕ್ಷಿಗಾರರ ಹಾದಿ ನೋಡುತ್ತಲೂ, ನೌಕರರು ಸಂಬಳದ ಪಾರ್ಸೀಬಡ್ತಿಯ ಹೊಡೆತಕ್ಕೋ 'ಕಟ್ಟಿನ' ಪೆಟ್ಟಿಗೋ ಚಟ್ಟಾಗಿ ಕೊರಗುತ್ತಲೂ, ಧನಿಗಳು ಹುಟ್ಟುವಳಿಯಿಂದ ಕಂದಾಯ ತೆರುವುದೇ ಕಷ್ಟ ವಾಗಿ ಸಾಲದ ಬಡ್ಡಿ ಬೆಳೆಯಿಸುತ್ತಲೂ, ಮನೆಮನೆಗಳಲ್ಲಿ ಮುನ್ಸಿಪಾಲಿಟಿಯ ತೆರಿಗೆ ತೆರಲಿಕ್ಕೆ ಚೆರಿಗೆ ಮಾರೋಣವೇ ಎಂದು ಯೋಚಿಸುತ್ತಲೂ ಇರು ವಾಗ ದಸರಾ ಬರುತ್ತದೆ! ಆಗ ನೀನು ತಾಲೂಕು ಪೇದೆಗಳ, ಮುನ್ಸಿಫ್ ಕೋರ್ಟು ಜವಾನರ, ಟಪ್ಪಾಲ್ ಬಟವಾಡೆಯುವರ ಇತ್ಯಾದಿ ವರ್ಗಕ್ಕೆ ಸೇರಿದವರೆಲ್ಲರ ಜೇಬಿನಲ್ಲಿ ಮೂಗೊರಸಿದ ಕರವಸ್ತ್ರದಡಿಯಲ್ಲಿ ಅಡಗಿದ್ದು ಪೂರ್ವೋಕ್ತ ಮಹಾಶಯರ ಮೇಜುಗಳ ಮೇಲೆ ಹಾರಿ ಕುಳಿತುಕೊಳ್ಳು ವಂಥವನಾಗು. ಆಗ ನಿನ್ನ ಮನೋಭಿಷ್ಟವು ನೆರವೇರುತ್ತದೆ" ಎಂದು ಬ್ರಹ್ಮನು ಅಭಯವಚನವನ್ನು ದಯಪಾಲಿಸಿ ನಿಂಬಾಫಲವನ್ನು ಕಳುಹಿಸಿ ಕೊಡುವಂಥವನಾದ. ಇತಿ ಉತ್ತರ ಭವಿಷ್ಯತ್ಪುರಾಣೇ ನಭೂತೋನ ಭವಿಷ್ಯತ್ಖಂಡೇ ಮಧ್ಯಾಂತ್ಯೆ ನಿಂಬಾಫಲ ಮಾಹಾತ್ಮ್ಯ ಪರಿಪೂರ್ಣಮಸ್ತು! ವಾಚಕಹೃದಯಾಮೋದಮಸ್ತು! ಸರ್ವೇ ಜನಾಸ್ಸುಖಿನೋ ಭವಂತು! ಓಂ! ಶಾಂತಿಶ್ಶಾಂತಿಶ್ಶಾಂತಿಃ!